ಎಂ.ಫಿಲ್. ಪದವಿಯ ಸಂಪ್ರಬಂಧ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು

ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ
ಕೆ. ಸುರೇಶ್

ಮಾರ್ಗದರ್ಶಕರು
ಪ್ರೊ|| ಜಿ. ಅಶ್ವತ್ಥನಾರಾಯಣ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ
ಮೂಲಕ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ

೨೦೦೮

ಎಂ.ಫಿಲ್. ಪದವಿಯ ಸಂಪ್ರಬಂಧ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು

ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ
ಕೆ. ಸುರೇಶ್

ಮಾರ್ಗದರ್ಶಕರು
ಪ್ರೊ|| ಜಿ. ಅಶ್ವತ್ಥನಾರಾಯಣ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ
ಮೂಲಕ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ

೨೦೦೮

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭-೨೦೦೮ನೇ ಸಾಲಿನ ಎಂ.ಫಿಲ್ ಪದವಿಗಾಗಿ "ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು – ಒಂದು ಅಧ್ಯಯನ" ಸಂಪ್ರಬಂಧವನ್ನು ಪ್ರೊ॥ ಜಿ.ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೨/೧೦/೨೦೦೮

ಸಹಿ

ಸುರೇಶ್. ಕೆ.

ಸ್ಥಳ : ಬೆಂಗಳೂರು.

(ಕೆ. ಸುರೇಶ್)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭–೨೦೦೮ನೇ ಸಾಲಿನ ಎಂ.ಫಿಲ್ ಪದವಿಗಾಗಿ "ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು – ಒಂದು ಅಧ್ಯಯನ" ಸಂಪ್ರಬಂಧವನ್ನು ಶ್ರೀ ಕೆ. ಸುರೇಶ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೨|10|2008

ಸಹಿ

ಸ್ಥಳ : ಬೆಂಗಳೂರು .

(ಜಿ. ಅಶ್ವತ್ಥನಾರಾಯಣ)

ಮೈಸೂರು ವಿಶ್ವವಿದ್ಯಾನಿಲಯದ
ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು – ಒಂದು ಅಧ್ಯಯನ

ಪರಿವಿಡಿ

ಅನುಬಂಧಗಳು

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

"'ಸಂಶೋಧನೆ' ಎನ್ನುವುದು ಕೆಲವೊಮ್ಮೆ ಪ್ರಕೃತಿಯೊಡನೆ ಸೆಣಸು. ಕೆಲವೊಮ್ಮೆ ಕಾಲನೊಡನೆ ಸೆಣಸು, ಕೆಲವೊಮ್ಮೆ ಹೊಸ ಮಾರ್ಗಗಳನ್ನು ತೆರೆಯುವ ಪ್ರಯತ್ನ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುವವರು ಪ್ರಕೃತಿಯೊಡನೆ ಸೆಣಸುತ್ತಾರೆ. ಪ್ರಾಚೀನ ಇತಿಹಾಸವನ್ನು ತಿಳಿಯ ಬಯಸುವವರು ಕಾಲನೊಡನೆ ಸೆಣಸುತ್ತಾರೆ. ಹಿಂದಿನ ಸಾಹಿತಿಗಳನ್ನು, ಕೃತಿಗಳನ್ನು ಆರಿಸಿಕೊಂಡವರು ಆ ಸಾಹಿತಿಗಳ ಮತ್ತು ಕೃತಿಗಳ ಅಧ್ಯಯನ ಮಾಡುವುದರಲ್ಲಿ ಮಾತ್ರವಲ್ಲ ಸಾಹಿತ್ಯದ ಅಧ್ಯಯನದಲ್ಲಿಯೇ ಹೊಸ ಮಾರ್ಗಗಳನ್ನು ತೆರೆಯುತ್ತಾರೆ. ಕೆಲವು ಸಂಶೋಧನೆಗಳ ಲೌಕಿಕ ಪ್ರಯೋಜನ ಸ್ಪಷ್ಟವಾಗಿರುತ್ತದೆ. ಕೆಲವು ಲೌಕಿಕವಾಗಿ ಉಪಯುಕ್ತವಾಗುತ್ತದೆ ಎಂದು ಕಾಣದಿದ್ದರೂ ಮುಂದೆ ಉಪಯುಕ್ತವಾಗಬಹುದು. ಆದರೆ "ಸಂಶೋಧನೆ" ಯಾವ ಬಗೆಯದಾಗಿರಲಿ, ಅದನ್ನು ನಡೆಸುವ ಮನೋಧರ್ಮ ಒಂದೇ – ಮುಂದಿರುವ ಸಾಕ್ಷ್ಯಕ್ಕೆ ಬದ್ಧನಾಗಿ ಸತ್ಯದ ಅನ್ವೇಷಣೆ".[೧]

ಕನ್ನಡ ಸಂಶೋಧನೆಗೆ ಸುಮಾರು ನೂರೈವತ್ತು ವರ್ಷಗಳಿಗೂ ಹಿಂದಿನ ಇತಿಹಾಸವಿದೆ. ಜರ್ಮನ್ ಪಾದ್ರಿಗಳೂ ಈ ದೇಶಕ್ಕೆ ಬಂದು ಕನ್ನಡ ಭಾಷೆ, ಸಂಸ್ಕೃತಿ ಕುರಿತು. ಶೋಧಿಸಲು ಹೊರಟಂದಿನಿಂದ ಈ ಇತಿಹಾಸ ಪ್ರಾರಂಭವಾಗುತ್ತದೆ. ಸಂಶೋಧನೆ ಎಂಬುದು ಆಂಗ್ಲ ವಿದ್ವಾಂಸರು ನಮಗೆ ತೋರಿಸಿಕೊಟ್ಟ ಹೊಸ ಶೈಕ್ಷಣಿಕ ಶಿಸ್ತು. ಇತ್ತೀಚಿನ ಎರಡು ದಶಕಗಳಲ್ಲಿ ಅದು ಒಂದು ವಿಶೇಷ ಅಧ್ಯಯನ ಕ್ಷೇತ್ರವಾಗಿಯೇ ಬೆಳೆದು ಬಂದಿದೆ. ಕರ್ನಲ್ ಮೆಕೆಂಝಿ, ಬಿ.ಎಲ್.ರೈಸ್, ಕಿಟ್ಟೆಲ್ ಮುಂತಾದ ವಿದೇಶೀ ವಿದ್ವಾಂಸರು, ಗೋವಿಂದ ಪೈ, ಆ.ನೆ.ಉಪಾಧ್ಯೆ, ಆರ್.ನರಸಿಂಹಾಚಾರ್, ಫ.ಗು.ಹಳಕಟ್ಟಿ, ಡಿ.ಎಲ್.ಎನ್. ಮುಂತಾದ ದೇಶೀಯ ವಿದ್ವಾಂಸರು ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರಕ್ಕೆ ತಮ್ಮದೇ ಆದ ಗಣನೀಯ ಸೇವೆ ಸಲ್ಲಿಸಿದ್ದಾರೆ. ಕನ್ನಡ ಕವಿಗಳ ಕಾಲ, ಸ್ಥಳ, ಮತ, ಕನ್ನಡ ಸಂಸ್ಕೃತಿ, ನಾಡು – ನುಡಿಗೆ ಸಂಬಂಧಪಟ್ಟಂತೆ, ಕನ್ನಡ ಸಾಹಿತ್ಯದ ಇತಿಹಾಸ ಪರಂಪರೆಗೆ, ಕನ್ನಡ ಭಾಷಾಶಾಸ್ತ್ರ, ಜಾನಪದ ಸಾಹಿತ್ಯ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳೂ, ಅಧ್ಯಯನಗಳೂ ನಡೆದಿವೆ.

ಹಸ್ತಪ್ರತಿ ಶಾಸ್ತ್ರದ ಒಂದು ಭಾಗವಾಗಿರುವ ಗ್ರಂಥ ಸಂಪಾದನಾಶಾಸ್ತ್ರ ಪ್ರಾರಂಭವಾದದ್ದು ೧೯ನೇ ಶತಮಾನದ ಮಧ್ಯಭಾಗದಿಂದ. "ಪರಂಪರಾಗತವಾಗಿ ಬಂದ

ಹಸ್ತಪ್ರತಿಗಳನ್ನು ಆಧರಿಸಿ ಮೂಲಪ್ರತಿಗೆ ಸಮೀಪವಾದ ಶುದ್ಧಪಾಠಗಳನ್ನು ಕಂಡುಕೊಳ್ಳುವ ಪ್ರಕ್ರಿಯೆಯೇ ಗ್ರಂಥಸಂಪಾದನೆ".[೨] ಪಾಶ್ಚಿಮಾತ್ಯ ವಿದ್ವಾಂಸರೇ ಕನ್ನಡ ಗ್ರಂಥ ಸಂಪಾದನೆಯ ಚಟುವಟಿಕೆಗಳಿಗೆ ಆದ್ಯ ಪ್ರವರ್ತಕರು. ಈ ಶಿಸ್ತು ಆಧುನಿಕವೆನಿಸಿದ್ದರೂ ಶುದ್ಧಪಾಠದ ಪರಿಕಲ್ಪನೆ ನಮ್ಮ ಪ್ರಾಚೀನರಿಗೂ ತಿಳಿದಿತ್ತು. ಉದಾಹರಣೆಗೆ: ವೇದಗಳ ಮೂಲಪಾಠಕ್ಕೆ ಧಕ್ಕೆಯಾಗಬಾರದೆಂಬ ಉದ್ದೇಶದಿಂದ ಕ್ರಮಪಾಠ, ಪದಪಾಠ, ಜಟಾಪಾಠ, ಘನಪಾಠ ಎಂಬ ಪರಿಯಲ್ಲಿ ಸಹಸ್ರಾರು ವರ್ಷಗಳಿಂದ ಅದನ್ನು ರಕ್ಷಿಸಿಕೊಂಡು ಬಂದರು. ಮಹಾವೀರನ ತತ್ವಗಳು ಶತಮಾನಗಳ ಕಾಲ ಮೌಖಿಕ ರೂಪದಲ್ಲಿಯೇ ಚಲಾವಣೆಯಲ್ಲಿದ್ದಾಗ ಪಾಠದೋಷವನ್ನು ನಿವಾರಿಸಲು ಗ್ರಂಥಸ್ಥಗೊಳಿಸಲಾಯಿತೆಂಬ ಅಭಿಪ್ರಾಯವೂ ಇದೆ. ಕನ್ನಡ ಸಾಹಿತ್ಯದ ವೈಶಿಷ್ಟ್ಯಗಳಲ್ಲಿ ಒಂದಾದ ವಚನ ಸಾಹಿತ್ಯವು ವಚನ ಭಂಡಾರಿ ಶಾಂತರಸನಿಂದ ರಕ್ಷಿಸಲ್ಪಟ್ಟಿತ್ತೆಂದು ಹೇಳಲಾಗಿದೆ. ಹೀಗೆ ಗ್ರಂಥ ಸಂಪಾದನೆಯ ಅಂಶಗಳು ಅಲ್ಲಲ್ಲಿ ಕಂಡು ಬಂದರೂ ಗ್ರಂಥ ಸಂಪಾದನೆ ಒಂದು ತಾತ್ವಿಕ ಚೌಕಟ್ಟಿಗೆ ಒಳಗಾಗಿ ಶಾಸ್ತ್ರವಾಗಿ ಬೆಳೆದಿರಲಿಲ್ಲ. ಕಿಟ್ಟೆಲ್‌ರವರು ಶಬ್ದಮಣಿದರ್ಪಣವನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಕೊಡುವ ಮೂಲಕ ಕ್ರಿ.ಶ. ೧೮೭೨ರಲ್ಲಿ ಗ್ರಂಥ ಸಂಪಾದನಾಶಾಸ್ತ್ರಕ್ಕೆ ನಾಂದಿಹಾಡಿದರು. ನಂತರ ಹೆರ್ಮನ್, ಮೋಗ್ಲಿಂನ್, ಎಫ್.ಕಿಟ್ಟೆಲ್, ಬಿ.ಎಲ್.ರೈಸ್ ಮುಂತಾದವರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ ಆರ್.ನರಸಿಂಹಾಚಾರ್, ಕುಂದಣಗಾರ್, ಡಿ.ಎಲ್.ಎನ್. ಮುಂತಾದವರು ಮುಂದುವರಿಸಿಕೊಂಡು ಬಂದರು. ಅನೇಕ ಹಳಗನ್ನಡ ಗ್ರಂಥಗಳನ್ನು ಹಸ್ತಪ್ರತಿಗಳಿಂದ ಸಂಪಾದಿಸಿ ಪ್ರಕಟಿಸಿದರು.

೧೯೮೦ರಿಂದ ಈಚೆಗೆ ಗ್ರಂಥಸಂಪಾದನಾ ಶಾಸ್ತ್ರದ ಜೊತೆಜೊತೆಗೆ ಕಾಣಿಸಿಕೊಂಡದ್ದು ಹಸ್ತಪ್ರತಿಶಾಸ್ತ್ರ. ಹಸ್ತಪ್ರತಿಶಾಸ್ತ್ರ ಎಂಬುದು ಪಾರಿಭಾಷಿಕ ಶಬ್ದ. ಇಂಗ್ಲಿಷಿನ Manuscriptology ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಹಸ್ತಪ್ರತಿಶಾಸ್ತ್ರ ಎಂಬ ಪದವು ಬಳಕೆಗೊಂಡಿದೆ. ೧೯೭೪ರಲ್ಲಿ ಮಂಡ್ಯದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಾ ॥ ಆರ್.ಸಿ. ಹಿರೇಮಠ ಅವರು "ಹಸ್ತಪ್ರತಿಗಳ ಸಂಗ್ರಹ, ಅವುಗಳ ಸೂಚೀಕರಣ ಮೊದಲಾದವುಗಳನ್ನೊಳಗೊಂಡ Manuscriptology ಎಂಬ ಹೊಸಶಾಸ್ತ್ರವೇ ಬೆಳೆದು ಬರಬೇಕಾಗಿದೆ". ಎಂದು ಹೇಳುವುದರ ಮೂಲಕ ಈ ಎರಡೂ ಪದಗಳನ್ನು ಮೊದಲ ಸಲ ಬಳಕೆಗೆ ತಂದರು. ಇತ್ತೀಚೆಗೆ ಇದೊಂದು ಅಧ್ಯಯನ ಶಿಸ್ತಾಗಿ ಬೆಳೆದು ಬಂದಿದೆ. ಕೈಬರಹದ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನವನ್ನು ಒಳಗೊಳ್ಳುವ ಈ ಹಸ್ತಪ್ರತಿಶಾಸ್ತ್ರ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪ್ರತಿ, ಓದುವಿಕೆ, ಸೂಚೀತಯಾರಿಕೆ ಇತ್ಯಾದಿ ವಿಷಯಗಳನ್ನು ಒಳಗೊಳ್ಳುತ್ತವೆ.

"ನಿರ್ದಿಷ್ಟವಾದ ಕ್ರಮದಲ್ಲಿ ನಿರ್ದಿಷ್ಟವಾದೊಂದು ಗ್ರಂಥ ಭಂಡಾರದ ಹಸ್ತಪ್ರತಿಗಳ ವರ್ಣನಾತ್ಮಕವಾದ ಪಟ್ಟಿಯನ್ನು ಸಿದ್ಧಪಡಿಸುವುದೇ ಸೂಚೀಕರಣ". ಹಸ್ತಪ್ರತಿಗಳ ಸೂಚೀಕರಣ ಬಹಳ ಹಿಂದಿನಿಂದಲೂ ನಡೆದುಬಂದಿದೆ. ಸಂಶೋಧನ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಸಂಘ – ಸಂಸ್ಥೆಗಳು ಹಾಗೂ ವೈಯಕ್ತಿಕ ವ್ಯಕ್ತಿಗಳು ಹಸ್ತಪ್ರತಿ ಸೂಚಿಗಳನ್ನು ಸಿದ್ಧಪಡಿಸಿ ಪ್ರಕಟಿಸಿವೆ. ಇಂಗ್ಲಿಷ್‌ನ (ಕ್ಯಾಟಲಾಗ್) ಸೂಚಿ ಮತ್ತು (ಡಿಸ್ಕ್ರಿಪ್ಟೀವ್ ಕ್ಯಾಟಲಾಗ್) ವರ್ಣನಾತ್ಮಕ ಸೂಚಿ ಇವು ಒಂದಕ್ಕಿಂತ ಮತ್ತೊಂದು ವ್ಯಾಪಕ ಅರ್ಥವುಳ್ಳ ಶಬ್ದಗಳು. ಕೇವಲ (ಕ್ಯಾಟಲಾಗ್) ಸೂಚಿಗಿಂತ (ಡಿಸ್ಕ್ರಿಪ್ಟೀವ್ ಕ್ಯಾಟಲಾಗ್) ವರ್ಣನಾತ್ಮಕ ಸೂಚಿ ಬಹು ಉಪಯುಕ್ತವಾದುದು ಎಂಬುದು ಸರ್ವವಿದಿತ. ಕನ್ನಡದಲ್ಲಿ ಬಂದಿರುವ ಸೂಚಿಗಳಲ್ಲಿ ವರ್ಣನಾತ್ಮಕ ಸೂಚಿಗಳೇ ಅಧಿಕ ಸಂಖ್ಯೆಯಲ್ಲಿವೆ ಮತ್ತು ಸಾಕಷ್ಟು ವೈಜ್ಞಾನಿಕವಾಗಿವೆ. ಯಾರೇ ಆಗಲಿ ಯಾವುದೇ ಅಧ್ಯಯನಕ್ಕೆ ಗ್ರಂಥ ಭಂಡಾರದಲ್ಲಿನ ಎಲ್ಲ ಕೃತಿಗಳನ್ನೂ ಸಮಗ್ರಹವಾಗಿ ಪರಿಶೀಲಿಸುವುದು ಬಹು ಪರಿಶ್ರಮದ ಕೆಲಸ.

ಆದರೆ ಈ ವರ್ಣನಾತ್ಮಕ ಸೂಚಿ (ಡಿಸ್ಕ್ರಿಪ್ಟೀವ್ ಕ್ಯಾಟಲಾಗ್) ಯಿಂದ ಎಲ್ಲ ಕೃತಿಗಳ ಒಂದು ಸಂಕ್ಷಿಪ್ತ ಮಾಹಿತಿ ಪಡೆದುಕೊಂಡಾಗ ಕಾಲ, ಶ್ರಮ ಉಳಿಯುತ್ತವೆ. ಸಮಗ್ರ ಮಾಹಿತಿ ಸಿಗುತ್ತದೆ. ಈ ದೃಷ್ಟಿಯಿಂದ ಗ್ರಂಥ ಭಂಡಾರದಲ್ಲಿನ ಕೃತಿಗಳ ವರ್ಣನಾತ್ಮಕ ಸೂಚಿಯನ್ನು ಸಿದ್ಧಪಡಿಸುವುದು ಅವಶ್ಯವಷ್ಟೇ ಅಲ್ಲ ಅನಿವಾರ್ಯವೂ ಹೌದು. ಈ ವರ್ಣನಾತ್ಮಕ ಸೂಚಿಯಿಂದ ಯಾವುದೇ ಒಂದು ಕೃತಿಯ ಸಂಕ್ಷಿಪ್ತ ಮಾಹಿತಿ ದೊರೆತಂತಾಗುತ್ತದೆ. ವಿದ್ವಾಂಸರಿಗೂ, ಸಂಶೋಧಕರಿಗೂ ಈ ಸೂಚಿಗಳು ಕೈಪಿಡಿಗಳಂತಿರುತ್ತವೆ. ಇವುಗಳಿಂದ ಯಾವ ಯಾವ ಗ್ರಂಥ ಭಂಡಾರದಲ್ಲಿ ಯಾವ ಯಾವ ಕೃತಿಗಳು ಉಪಲಬ್ಧವಿದೆ, ಅವುಗಳ ಸ್ವರೂಪ, ಸ್ಥಿತಿ – ಗತಿ ಎಂತಹುದು ಎಂಬುದನ್ನು ಅರಿತುಕೊಂಡು ವಿದ್ವಾಂಸರು ತಮ್ಮ ಸಂಶೋಧನೆ ಮುಂದುವರಿಸಲು ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಈ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳ ಅವಲೋಕನದಿಂದ ಮೂಲಕೃತಿಗಳ ಸ್ವರೂಪ ತಿಳಿಯುತ್ತದೆ. ಅಪ್ರಕಟಿತ ಕೃತಿಗಳ ಬಗ್ಗೆ ಮಾಹಿತಿ ಸಿಗುತ್ತದೆ. ಅಪೂರ್ಣ ಕೃತಿಗಳು ಇರುವುದು ತಿಳಿಯುತ್ತದೆ. ಆದ್ದರಿಂದಲೇ ಎಲ್ಲ ಹಸ್ತಪ್ರತಿ ಭಂಡಾರಗಳು ವರ್ಣನಾತ್ಮಕ ಸೂಚಿಗಳನ್ನು ತಯಾರಿಸಿ ಪ್ರಕಟಿಸುವ ಕಾರ್ಯ ಮಾಡಬೇಕು.

ಈಗಾಗಲೇ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳನ್ನು ತಯಾರಿಸಿ ಪ್ರಕಟಿಸುವ ಕಾರ್ಯ ಕೈಗೊಂಡಿರುವ ಸಂಸ್ಥೆಗಳ ಪೈಕಿ ಮದರಾಸ್ ಪ್ರಾಚ್ಯ ಹಸ್ತಪ್ರತಿ ಭಂಡಾರ, ಮೈಸೂರಿನ ಪ್ರಾಚ್ಯ ವಿದ್ಯಾಸಂಸ್ಥೆ, ಧಾರವಾಡ ಕನ್ನಡ ಸಂಶೋಧನಾ ಸಂಸ್ಥೆ, ಕನ್ನಡ ಅಧ್ಯಯನ ಪೀಠ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ,

ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನ, ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಮುಂತಾದವು ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳನ್ನು ತಯಾರಿಸಿ ಪ್ರಕಟಿಸಿವೆ.

ಈ ರೀತಿ ತಯಾರಾದ ಹಸ್ತಪ್ರತಿಗಳ ತೌಲನಿಕ ಅಧ್ಯಯನ ಮಾಡುವುದರಿಂದ ಹಸ್ತಪ್ರತಿ ಸೂಚಿ ರಚನೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ಕಾಣಬಹುದು. ಕರ್ನಾಟಕದಲ್ಲಿರುವ ಎಷ್ಟೋ ಹಸ್ತಪ್ರತಿ ಭಂಡಾರಗಳು ತಯಾರಿಸಿರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳ ತೌಲನಿಕ ಅಧ್ಯಯನ ನಡೆದಿರುವುದಿಲ್ಲ. ಮೈಸೂರು ವಿಶ್ವ ವಿದ್ಯಾನಿಲಯ ೯ ಸಂಪುಟಗಳಲ್ಲಿ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳನ್ನು ತಯಾರಿಸಿ ಪ್ರಕಟಿಸಿದೆ. ಮೊದಲ ನಾಲ್ಕು ಸಂಪುಟಗಳನ್ನು ಪ್ರಾಚ್ಯ ವಿದ್ಯಾ ಸಂಶೋಧನಾಲಯದಿಂದಲೂ, ಉಳಿದ ಐದು ಸಂಪುಟಗಳನ್ನು ಕನ್ನಡ ಅಧ್ಯಯನ ಸಂಸ್ಥೆಯಿಂದಲೂ ಪ್ರಕಟಿಸಲಾಗಿದೆ.

ಹಲವಾರು ದೃಷ್ಟಿಗಳಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು ವಿಶೇಷ ಸಂಗತಿಗಳನ್ನು ಒಳಗೊಂಡು ಅಧ್ಯಯನ ಯೋಗ್ಯವಾಗಿದೆ. ಇದುವರೆಗೆ ಅವುಗಳ ಸಮಗ್ರ ಅಧ್ಯಯನವಾಗಲಿ, ವಿವಿಧ ದೃಷ್ಟಿಗಳಿಂದ ಆಳವಾದ ಅಧ್ಯಯನವಾಗಲಿ ನಡೆದಿರುವುದಿಲ್ಲ. ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳ ತಯಾರಿಕೆಯಲ್ಲಿ ಎಲ್ಲ ವಿಶ್ವವಿದ್ಯಾನಿಲಯಗಳ ಸೂಚಿಗಳಲ್ಲೂ ಕೆಲವಾರು ಅಂಶಗಳು ಸಾರ್ವತ್ರಿಕವಾಗಿ ಕಂಡು ಬಂದರೂ ಅವುಗಳ ನಿರೂಪಣಾ ವಿಧಾನದಲ್ಲಿ, ವಿನ್ಯಾಸದಲ್ಲಿ ಸಂಕೇತಾಕ್ಷರ ಸೂಚಿಯಲ್ಲಿ, ವಸ್ತು ನಿರೂಪಣೆಯಲ್ಲಿ ಇತರ ಹಲವಾರು ಅಂಶಗಳಲ್ಲಿ ಭಿನ್ನ ಭಿನ್ನ ರೂಪಗಳನ್ನು ತಳೆದಿವೆ. ಇವುಗಳ ತೌಲನಿಕ ಅಧ್ಯಯನದಿಂದ ವರ್ಣನಾತ್ಮಕ ಸೂಚಿಯ ನಿರ್ಮಾಣದಲ್ಲಿ ಅನುಸರಿಸಬೇಕಾದ ಉತ್ತಮ ವಿಧಾನ ಯಾವುದು ಎಂಬುದನ್ನು ಕಂಡುಕೊಳ್ಳಲು ಸೂಚಿಗಳ ಅಧ್ಯಯನ ಕಾರ್ಯ ನೆರವಾಗುತ್ತವೆ.

ಸೂಚಿಗಳು ಕಾಲಕಾಲಕ್ಕೆ ಪ್ರಕಟವಾಗಬೇಕಾದ ಕಾರ್ಯವಾಗಿರುತ್ತದೆ. ಏಕೆಂದರೆ ಹಸ್ತಪ್ರತಿ ಭಂಡಾರಗಳಲ್ಲಿ ಓಲೆಗರಿ ಸಂಗ್ರಹಗಳು ಬೆಳೆದಂತೆಲ್ಲಾ ಹೊಸ ಹೊಸ ವಿಷಯಗಳು ಸೇರ್ಪಡೆಯಾಗುತ್ತಿರುತ್ತವೆ ಮತ್ತು ಅವುಗಳ ವಿಶೇಷ ಅಧ್ಯಯನಗಳಿಂದ ಅನೇಕ ಹೊಸ ಸಂಗತಿಗಳು ಹೊರಬರುತ್ತವೆ. ಹೀಗೆ ಪ್ರಕಟವಾಗುವ ಹೊಸ ಸೂಚಿಗಳು ಉಪಯುಕ್ತವಾಗುತ್ತವೆ. ಅನೇಕ ವಿಶ್ವವಿದ್ಯಾನಿಲಯಗಳು ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ವರ್ಣನಾತ್ಮಕ ಸೂಚಿಯ ಕಾರ್ಯ ಅಪೂರ್ಣವಾಗಿರುವುದರಿಂದ ಉಳಿದ ಪ್ರಕಟಿತ ಸೂಚಿಗಳ ಅಧ್ಯಯನ ಅಪೂರ್ಣವಾಗಬಹುದು ಅಥವಾ ತಪ್ಪು ನಿರ್ಧಾರಗಳಿಗೆ ನೆರವಾಗಬಹುದು ಉದಾಹರಣೆಗೆ : ಒಂದು ಸಂಶೋಧನಾ ಕೇಂದ್ರದಲ್ಲಿ ಸೂಚಿಯಾಗದ ಓಲೆ ಗ್ರಂಥಗಳಲ್ಲಿ ಅತ್ಯಪೂರ್ವಗ್ರಂಥವಿದ್ದು ಆ ಗ್ರಂಥದ ಪ್ರತಿ ಪ್ರಕಟಿತ

ಸೂಚಿಯಲ್ಲಿದ್ದರೆ ಅದನ್ನು ಏಕೈಕ ಪ್ರತಿ ಎಂದು ಕರೆದಾಗ ತಪ್ಪಾಗುತ್ತದೆ ಅಥವಾ ಅಪೂರ್ಣ ಪ್ರತಿಯಾಗಿದ್ದಲ್ಲಿ ಸೂಚಿಯಾಗದ ತಾಳೆಗರಿಗಳಲ್ಲಿ ಆ ಪ್ರತಿ ಇದ್ದರೆ ಆಗ ಆ ಪ್ರತಿಯ ಅಧ್ಯಯನ ಅಪೂರ್ಣವಾಗುತ್ತವೆ.

ಇಂತಹ ಅಂಶಗಳನ್ನೆಲ್ಲ ವರ್ಣನಾತ್ಮಕ ಸೂಚಿಯ ಅಧ್ಯಯನದಲ್ಲಿ ಗಮನಿಸಲು ಸಾಧ್ಯವಿದೆ. ವರ್ಣನಾತ್ಮಕ ಸೂಚಿಗಳ ಮಹತ್ವ ಮತ್ತು ಅವುಗಳ ವೈಜ್ಞಾನಿಕ ವಿಧಾನಗಳು ಎಷ್ಟರ ಮಟ್ಟಿಗೆ ಸಾರ್ಥಕಗೊಂಡಿವೆ ಎಂಬ ಅಂಶ ಸೂಚಿಗಳ ಅಧ್ಯಯನದಿಂದ ಹೊರಬೀಳುವ ಸಂಗತಿಗಳಾಗಿವೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಹಸ್ತಪ್ರತಿ ಸೂಚೀಗ್ರಂಥಗಳ ವಿಮರ್ಶೆ, ವೈಶಿಷ್ಟ್ಯಗಳನ್ನು ವಿವೇಚಿಸಲಾಗಿದೆ. ಹಸ್ತಪ್ರತಿಶಾಸ್ತ್ರದ ಅಂಗವಾದ ಸೂಚೀಗ್ರಂಥಗಳ ಬಗ್ಗೆ, ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿಗಳ ಬಗ್ಗೆ ವಿಸ್ತೃತ ಅಧ್ಯಯನವನ್ನು ಮೊದಲ ಬಾರಿಗೆ ಇಲ್ಲಿ ಕೈಗೊಂಡಿದೆ. ಸೂಚೀ ನಿರ್ಮಾಣ ಶಾಸ್ತ್ರಕ್ಕೆ ಈ ಅಧ್ಯಯನ ನೆರವಾಗಲಿದೆ.

ಅಡಿಟಿಪ್ಪಣಿಗಳು

---

೧. ಎಲ್.ಎಸ್. ಶೇಷಗಿರಿರಾಯರು – ಸಂಶೋಧನ ಪತ್ರಿಕೆ ; ಕರ್ನಾಟಕ ಲೋಚನ, ಸಂಪುಟ–೨೧ ಸಂಚಿಕೆ – ೧, ೨ – ಬಿ.ಎಂ.ಶ್ರೀ ಪ್ರತಿಷ್ಠಾನ – ಬೆಂಗಳೂರು (ಪುಟ ೬೯).

೨. ಡಾ॥ ವೈ.ಸಿ. ಭಾನುಮತಿ – ಗ್ರಂಥಸಂಪಾದನೆ ವಿವಿಕ್ಷೆ (ಪುಟ – ೦೮)

ಅಧ್ಯಾಯ – ೨

ಕನ್ನಡ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥ ಸಂಪಾದನೆ

ಹಸ್ತಪ್ರತಿ ಎಂದರೇನು ?

ಹಸ್ತಪ್ರತಿ ಎಂದರೆ ; ಗ್ರಂಥವನ್ನು ಓಲೆ ಅಥವಾ ಕಾಗದ ಮುಂತಾದವುಗಳಲ್ಲಿ ಬರೆದ ಕೈಬರಹದ ಪ್ರತಿ – ಅಚ್ಚಾಗದ ಮೊದಲ ಪ್ರತಿ – ಮುದ್ರಣವಾಗದ ಯಾವುದೇ ಕೈ ಬರಹಧ ಪ್ರತಿ – ಹಸ್ತಲೇಖ – ಎಂದು ಕರೆಯಬಹುದು. ಹಸ್ತಪ್ರತಿ ತಾಳೆಗರಿ, ಕೋರಿಕಾಗದ, ಕಡತ ಮತ್ತು ಆಧುನಿಕ ಕಾಗದದ ಪ್ರತಿ ಇವೆಲ್ಲವನ್ನೂ ಒಳಗೊಳ್ಳುತ್ತದೆ. ಅನೇಕ ಕಡೆ ಕ್ಷೇತ್ರಕಾರ್ಯ ಮಾಡಿ ಅವುಗಳನ್ನು ಒಂದು ಕಡೆ ಸಂಗ್ರಹಿಸಬೇಕಾಗುತ್ತದೆ. ಇವೆಲ್ಲ ನಾಡಿನ ಅತ್ಯಮೂಲ್ಯ ಸಂಪನ್ಮೂಲಗಳು. ಹೆಚ್. ದೇವೀರಪ್ಪನವರು ಹೇಳುವಂತೆ "ನಮ್ಮ ಪೂರ್ವಜರು ನಮ್ಮ ಉಪಯೋಗಕ್ಕಾಗಿ ಬಿಟ್ಟುಹೋಗಿರುವ ಕೈಬರಹಗಳಿಗೆ ಹಸ್ತಪ್ರತಿಗಳು ಎಂಬುದು ಮತ್ತೊಂದು ಹೆಸರು. ಕನ್ನಡದಲ್ಲಿ ಬರೆದಿಟ್ಟಿರುವ ಕಾವ್ಯ, ಶಾಸ್ತ್ರ, ಪುರಾಣಾದಿಗಳಿಗೆ ಕನ್ನಡ ಹಸ್ತಪ್ರತಿ ಎಂದು ಕರೆಯಬಹುದು".[೧]

ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಹೇಳುವಂತೆ "ಕೈ ಬರಹದ ಪಠ್ಯದಲ್ಲಿ ಎರಡು ಪ್ರಕಾರಗಳು:

೧) ಹಸ್ತಪ್ರತಿಯೊಂದರ ಬೆಲೆಯಿಲ್ಲದ ಈಚಿನ ಪ್ರತಿಗಳು

೨) ಲಿಖಿತ ಗ್ರಂಥಗಳು"[೨]

ಟಿ.ವಿ. ವೆಂಕಟಾಚಲಶಾಸ್ತ್ರಿಗಳ ಪ್ರಕಾರ ನಕಲು ಪ್ರತಿಗಳು ಹಸ್ತಪ್ರತಿಯೊಂದರ ಬೆಲೆಯಿಲ್ಲದ ಈಚಿನ ಪ್ರತಿಗಳಾಗಿವೆ. ಒಂದು ಗ್ರಂಥದ ಹತ್ತಾರು ಪ್ರತಿಗಳಿದ್ದರೆ ಆ ಅನೇಕ ಪ್ರತಿಗಳು ಈ ಬಗೆಯವು ಎಂದರ್ಥ ಎನ್ನಬಹುದು. ಆದರೆ ಒಂದು ಕಥಾವಸ್ತು ಅಥವಾ ವಿಷಯದ ಹಸ್ತಪ್ರತಿ ಮೂಲಪ್ರತಿ ಅಥವಾ ಸಮಾನ ಪ್ರತಿಯಾಗಿರುತ್ತದೆ. ಅದರ ನಕಲುಗಳು ಬಹುಪ್ರತಿಗಳಾಗಿರುತ್ತವೆ.

ಹಸ್ತಪ್ರತಿ ಎಂಬ ಪದವನ್ನು ಕನ್ನಡಿಗರು ಬಳಸಿರುವುದರ ಮೂಲ ಕಾರಣವನ್ನು ಬಿ.ಕೆ.ಹಿರೇಮಠರು ಹೀಗೆ ಹೇಳಿದ್ದಾರೆ.[೩] "ನಿಘಂಟುವಿನ ಅರ್ಥ : ಹಸ್ತಪ್ರತಿಯನ್ನು ಸೂಚಿಸಲು ಆಂಗ್ಲಭಾಷೆಯಲ್ಲಿ ಮ್ಯಾನ್ಯುಸ್ಕ್ರಿಪ್ಟ್, ಎಂಬ ಪದವನ್ನು ಬಳಸುತ್ತಾರೆ. ೧೫೯೭ರ ಸುಮಾರಿಗೆ ಇದನ್ನು ಮಧ್ಯಯುಗದ ಲ್ಯಾಟಿನ್ ಪದ ಮ್ಯಾನು (ಅಬಲೇಟೀವ್) ಬೈ ಹ್ಯಾಂಡ್ + ಸ್ಕ್ರಿಪ್ಟ್ (ಪಾಸ್ಟ್ ಆರ್ ಪಾಸೀವ್ ಪಾರ್ಟಿಸಿಪೇಟ್) ಆಫ್ ಸ್ಕ್ರಾಯಿಬೇರ್ ಟು ರೈಟ್ (ಅಡ್ಜೆಕ್ಟೀವ್) ರಿಟನ್ ಬೈ ಹ್ಯಾಂಡ್ ಎಂಬುದಾಗಿ ಆಕ್ಸ್‌ಫರ್ಡ್ ಶಬ್ದಕೋಶ ವಿವರಣೆ ನೀಡುತ್ತದೆ.[೪] ಯೂರೋಪ್ ದೇಶಗಳಲ್ಲಿ ಕೈಬರಹ ಅರ್ಥದ 'ಮ್ಯಾನ್ಯುಸ್ಕ್ರಿಪ್ಟ್' ರೂಢಿಗೆ

ಬರಲು ಕೈಬರಹವಲ್ಲದ ಇನ್ನೊಂದು ಬರಹ ಪದ್ಧತಿ ಅಸ್ತಿತ್ವಕ್ಕೆ ಬಂದುದೇ ಕಾರಣವಾಗಿರಬೇಕು. ಆ ಇನ್ನೊಂದು ಬರಹ ಪದ್ಧತಿಯೆಂದರೆ ಯಂತ್ರಗಳ ಮೂಲಕ ಬರಹವನ್ನು ಕೈವರ್ತಿಸಿಕೊಂಡುದುದು. ಆಗ ಯಂತ್ರಗಳಿಂದ ಭಿನ್ನಗೊಳಿಸಿ ಕರೆಯಲು ಅವರು ಹಸ್ತಪ್ರತಿ ಅರ್ಥದ 'ಮ್ಯಾನ್ಯುಸ್ಕ್ರಿಪ್ಟ್' ಪದವನ್ನು ರೂಢಿಸಿದರು. ಈ 'ಮ್ಯಾನ್ಯುಸ್ಕ್ರಿಪ್ಟ್' ಎಂಬ ಪದವನ್ನು ಲಕ್ಷಿಸಿಯೇ ಕೈಯಿಂದ ಬರೆಯಲಾದ ಪ್ರತಿ ಎಂಬರ್ಥದಲ್ಲಿ 'ಹಸ್ತಪ್ರತಿ' ಎಂಬ ಪದವನ್ನು ಭಾರತೀಯರು, ಕನ್ನಡಿಗರು ಬಳಕೆಗೆ ತಂದುಕೊಂಡಿರಬೇಕು"

ಬ್ರಿಟಾನಿಕಾ ವಿಶ್ವಕೋಶದಲ್ಲಿ ಕಂಡುಬರುವ ವಿವರ ಹೀಗಿದೆ "ಬ್ರಿಟಾನಿಕಾ ವಿಶ್ವಕೋಶವು ಬರಹಗಳೆಲ್ಲವನ್ನು ದಾಖಲೆಗಳು (Documents) ಎಂದು ಒಟ್ಟಾಗಿ ಗ್ರಹಿಸಿ 'ಯಾವುದೇ ಒಂದು ಸಂಗತಿಯನ್ನು ನಿವೇದಿಸಲು ಅಥವಾ ದಾಖಲೆಗೊಳಿಸಿ ರಕ್ಷಿಸಲು ಶಾಶ್ವತವಾದ ಮತ್ತು ಬಿರುಸಾದ ಸಾಮಗ್ರಿಗಳ ಮೇಲೆ ಕೆತ್ತಿದುದನ್ನು ಶಾಸನ'ವೆಂದು ವಿವರಿಸಿದರೆ. 'ಮೃದುವಾದ ಸಮತಲದ ಸಸಿರಸ್, ಹದಮಾಡಿದ ಚರ್ಮಕಾಗದ ಮತ್ತು ಕಾಗದ ಇತ್ಯಾದಿ ಸಾಮಗ್ರಿಗಳ ಮೇಲೆ ವರ್ಣವನ್ನುಪಯೋಗಿಸಿಕೊಂಡು ಕುಂಚ, ಲೇಖನಿ ಇಲ್ಲವೆ ಅಲಗಿನಿಂದ ಬರೆಯಲಾದವುಗಳನ್ನು ಹಸ್ತಪ್ರತಿ' ಗಳೆಂದು ಗುರುತಿಸಿ ಇವು ಶಾಸನಗಳಿಂದ ಭಿನ್ನವಾದವುಗಳು"[೫] ಎನ್ನುತ್ತದೆ.

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಶಬ್ದಗಳ ಕೊಳು – ಕೊಡುಗೆ ವ್ಯವಹಾರ ನಡೆಯುತ್ತಿರುತ್ತದೆ. ಇದು ಒಂದು ಭಾಷೆಯ ಜೀವಂತಿಕೆಯ ಲಕ್ಷಣವೂ ಹೌದು. ಹಸ್ತಪ್ರತಿ ಎಂದರೇನು ಎಂಬುದಕ್ಕೆ ಡಾ॥ ಎಂ.ಎಂ. ಕಲ್ಬುರ್ಗಿಯವರು ಹೀಗೆ ಹೇಳಿದ್ದಾರೆ "ಸ್ವೀಕರಣ ಎಂಬುದು ಭಾಷಾ ಪ್ರಪಂಚದ ಅನಿವಾರ್ಯಕ್ರಿಯೆ. ಇಲ್ಲಿ ತದ್ಭವೀಕರಣ ಕ್ರಿಯೆ ಮತ್ತು ಭಾಷಾಂತರೀಕರಣ ಕ್ರಿಯೆ ಮುಖ್ಯವಾದವು. ಈವರೆಗೆ ಲ್ಯಾಟಿನ್ನಿನ Manų (= ಕೈ) ಮತ್ತು Scriptum (= ಬರೆವಣಿಗೆ) ಎಂಬ ಪದಗಳ ಸಂಯುಕ್ತ ರೂಪವಾದ Manuscriptus (= ಕೈ ಬರೆವಣಿಗೆ) ಎಂಬುದನ್ನು ಇಂಗ್ಲಿಷ್ ಭಾಷೆಯಲ್ಲಿ Manuscript ಎಂದು ತದ್ಭವೀಕರಿಸಿಕೊಂಡಿತು. ಇದನ್ನು ವಿದ್ವಾಂಸರು ಕೈ ಬರೆವಣಿಗೆ, ಹಸ್ತಪ್ರತಿ ಎಂದು ಭಾಷಾಂತರಿಸಿಕೊಂಡರು. ಇವುಗಳಲ್ಲಿ ಸಾರ್ವತ್ರಿಕ ಪ್ರಚಾರ ಪಡೆದ ಪದ "ಹಸ್ತಪ್ರತಿ".[೬]

ಶ್ರೀ ಎಸ್.ಎಂ. ಕತ್ರೆಯವರು "ಗ್ರಂಥಗಳನ್ನು ಹಲವಾರು ಪ್ರತಿಗಳನ್ನಾಗಿ ಪಡೆಯುವ ತಾಂತ್ರಿಕ ಸೌಲಭ್ಯ ಇಲ್ಲದಂತಹ ಕಾಲದಲ್ಲಿ ಕೈಯಿಂದ ಬರೆಯಲಾದ ಮೂಲ ಮಾತೃಕೆ ಮತ್ತು ಅದನ್ನು ಎದುರಿಗಿಟ್ಟುಕೊಂಡು ಅಕ್ಷರಶಃ ಶಬ್ದಶಃ ಮಾಡಲಾದ ಅದೇ ಮಾತೃಕೆಯ ಮುಂದಿನ ಪ್ರತಿಗಳು ಇವೆಲ್ಲವನ್ನು ಒಟ್ಟಿಗೆ ಹಸ್ತಪ್ರತಿಗಳೆಂದು ಕರೆಯಲಾಗುತ್ತದೆ ಎನ್ನುತ್ತಾರೆ".[೭]

ಪ್ರತಿಕಾರ – ಲಿಪಿಕಾರರು

ಹಸ್ತಪ್ರತಿಯಲ್ಲಿ ಕವಿ ನಿರ್ಮಿತ 'ಕೃತಿ', ಲಿಪಿಕಾರ ನಿರ್ಮಿತ 'ಪ್ರತಿ' ಎಂಬ ಎರಡು ಘಟಕಗಳು ಸೇರಿಕೊಂಡಿರುತ್ತವೆ. ಒಬ್ಬ ಕವಿ ಒಂದು ಕೃತಿಯನ್ನು ಕೈಯಿಂದ ರಚಿಸಿರುತ್ತಾನೆ. ಕಾಲಕ್ರಮದಲ್ಲಿ ಲಿಪಿಕಾರರು ಅದನ್ನು ಅನೇಕ ಪ್ರತಿಗಳಾಗಿ ಬೆಳೆಸಿಕೊಂಡು ಬಂದಿರುತ್ತಾರೆ. ಎರಡೂ ಹಸ್ತಪ್ರತಿಗಳೇ ಆದರೂ ಕವಿ ನಿರ್ಮಿಸಿದ್ದು 'ಕೃತಿ' ಅಂದರೆ ಅದು ಕವಿಯ ಮೂಲಸೃಷ್ಟಿ. ಲಿಪಿಕಾರರು ನಕಲು ಮಾಡಿರುವುದು 'ಪ್ರತಿ' ಅಂದರೆ ಅದು ಕೇವಲ ಉತ್ಪಾದನೆಯಾಗಿರುತ್ತದೆ. ಲಿಪಿಕಾರರ ಮೂಲಕೃತಿಯನ್ನು ನಕಲು ಮಾಡುತ್ತಾರೆ. ನಕಲು ಮಾಡುವ ಕ್ರಿಯೆ ಮೂರು ರೀತಿಯಾಗಿರುತ್ತದೆಂದು ಡಾ॥ ಎಸ್. ಎಸ್. ಅಂಗಡಿಯವರು ಹೇಳಿದ್ದಾರೆ. "ಮೂಲ ಪ್ರತಿಯನ್ನು ನೋಡಿ ಒಬ್ಬನೇ ಪ್ರತಿಮಾಡಬಹುದು. ಅಥವಾ ಒಬ್ಬರು ಓದುವಾಗ ಇನ್ನೊಬ್ಬರು ಪ್ರತಿಮಾಡುತ್ತಿರಬಹುದು ಅಥವಾ ಒಬ್ಬರು ಓದಿ ಹೇಳಿ ಹಲವರು ಪ್ರತಿ ಮಾಡುತ್ತಿರಬಹುದು".[೮] ಲಿಪೀಕರಣದ ಸಂದರ್ಭದಲ್ಲಿ ಅನೇಕ ಭಾಷಿಕ ದೋಷಗಳು ಉಂಟಾಗುವ ಸಂಭವವಿರುತ್ತದೆ. ಪ್ರತಿ ಮಾಡುವಾಗ ಕೆಲವು ಲಿಪಿಕಾರರ ಬರಹ ಸುಂದರವಾಗಿದ್ದರೆ, ಮತ್ತೆ ಕೆಲವರ ಬರಹ ಸುಂದರವಾಗಿರುವುದಿಲ್ಲ. ಸುಂದರವಾಗಿಲ್ಲದ ಲಿಪಿಕಾರ ಬರಹವನ್ನು ಓದಿ ಅದರಲ್ಲಿರುವ ದೋಷಗಳನ್ನು ಗುರುತಿಸುವುದು ಕಠಿಣವಾದ ಕೆಲಸವಾಗಿರುತ್ತದೆ.

ಕೃತಿಗಳ ಕಂತೆ ಅಥವಾ ಪ್ರತಿಗಳ ಕಂತೆ ಅಥವಾ ಕೃತಿ – ಪ್ರತಿಗಳ ಕಂತೆಯನ್ನು "ಕಟ್ಟು" ಎಂದು ಕರೆಯಲಾಗುತ್ತದೆ. ಮೂಲ ಕರ್ತೃವೇ ಸ್ವಹಸ್ತದಿಂದ ಬರೆದಿರುವ ಪ್ರಾಚೀನ ಹಸ್ತಪ್ರತಿಗಳು ಈಗ ಸಿಗುವುದು ಪ್ರಾಯಶಃ ದುರ್ಲಭ. ಅಲ್ಲೊಂದು ಇಲ್ಲೊಂದು ಅಂತಹ ಹಸ್ತಪ್ರತಿಗಳು ಸಿಕ್ಕಿರುವುದು ಕಂಡುಬರುತ್ತದೆ. ೧೯ನೇ ಶತಮಾನದ ಅಂತ್ಯದಲ್ಲಿದ್ದ ಬಸಪ್ಪಶಾಸ್ತ್ರಿ, ನಂದಳಿಕೆ ಲಕ್ಷ್ಮೀನಾರಾಯಣಪ್ಪ ಮುಂತಾದ ಕವಿಗಳ ಸ್ವಹಸ್ತಪ್ರತಿಗಳು ಸಿಕ್ಕುತ್ತವೆ. ಅದೇ ಪ್ರಾರಂಭ ಕಾಲದ ಪ್ರಾಚೀನ ಕವಿಗಳ ಹಸ್ತಪ್ರತಿಗಳು ಸಿಗುವುದು ಸಾಧ್ಯವಿಲ್ಲ ಎಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ಎಲ್ಲ ಹಸ್ತಪ್ರತಿಗಳೂ ಪ್ರತಿಕಾರರು ಮಾಡಿದಂತಹವು. ಮೂಲಕೃತಿಯನ್ನೋ, ಮೂಲಕೃತಿಯ ಪ್ರಥಮ ನಕಲನ್ನೋ ಅನುಸರಿಸಿ ಹತ್ತಾರು – ನೂರಾರು ನಕಲು ಪ್ರತಿಗಳು ರಚನೆಯಾಗಿ ಹಸ್ತಪ್ರತಿಗಳ ಸಂಖ್ಯೆ ಅಗಾಧವಾಗಿ ಬೆಳೆದು ಬಂದಿರುತ್ತವೆ. ಈ ಉಪಲಬ್ಧವಿರುವ ಪ್ರತಿಗಳು ಮೂಲಕೃತಿಯ ಎಷ್ಟನೆಯ ಸಂತಾನ ಎಂಬುದನ್ನು ಪರಿಶೋಧಿಸುವುದು ಕಷ್ಟಸಾಧ್ಯ. ಕವಿಯ ಸ್ವಹಸ್ತಾಕ್ಷರ ಪ್ರತಿ ಬಳಸಿ ಬಳಸಿ ಸವೆದು ನಾಶವಾಗಿರಬಹುದು. ಬೆಂಕಿಯ ಪಾಲೋ, ನೀರಿನ ಪಾಲೋ ಆಗಿರಬಹುದು. ಆದುದರಿಂದ ಮೂಲಪ್ರತಿ ದೊರೆಯುವುದು ಅಸಂಭವವಾದ ಕಾರಣ

ನಾವು ಪ್ರತಿಕಾರರ ಕೈ ಬರಹದ ಮೂಲಕ ಕೃತಿಕಾರನ ಪರಿಚಯವನ್ನು ಮಾಡಿಕೊಳ್ಳಬೇಕಾಗುತ್ತದೆ.

"ಮುದ್ರಣ ಸೌಕರ್ಯವಿಲ್ಲದಿದ್ದ ಕಾಲದಲ್ಲಿ ಜನರು ತಮಗೆ ಬೇಕಾದ ವಿಷಯಗಳನ್ನೂ ಗ್ರಂಥಗಳನ್ನೂ ಓಲೆಗರಿಗಳ ಮೇಲೂ ಕಾಗದವು ಬಳಕೆಗೆ ಬಂದ ಮೇಲೆ ಕಾಗದದ ಮೇಲೂ ಬರೆದು ಇಟ್ಟುಕೊಳ್ಳುತ್ತಿದ್ದರು. ಪ್ರಾಚೀನ ಗ್ರಂಥಗಳನ್ನು ತಾವು ಓದುವುದಕ್ಕಾಗಿ ಲಿಪಿಕಾರರಿಂದ ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದೂ ಉಂಟು. ಇದರಿಂದಲೇ ಇಂದು ಒಂದೇ ಕೃತಿಯ ಹಲವಾರು ಕೈಬರಹದ ಪ್ರತಿಗಳು ನಮಗೆ ದೇಶದ ಬೇರೆ ಬೇರೆ ಮೂಲೆಗಳಲ್ಲಿ ದೊರೆಯುತ್ತಿವೆ. ಈ ದೊರೆತಿರುವ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳು ಲಿಪಿಕಾರರಿಂದ ಮಾಡಲ್ಪಟ್ಟವು. ಕವಿಯ ಸ್ವಹಸ್ತಾಕ್ಷರ ಪ್ರತಿಗಳಲ್ಲ. ಕವಿ ಗ್ರಂಥವನ್ನು ಸೃಷ್ಟಿಸಿದವ ಮಾತ್ರ. ಆತ ಒಬ್ಬನೇ. ಆದರೆ ಆ ಗ್ರಂಥ ಭಂಡಾರದ ರಕ್ಷಣೆಯ ಭಾರವನ್ನು ಬಹುಮಂದಿ ಲಿಪಿಕಾರರು ಹೊತ್ತಿದ್ದಾರೆ. ಗ್ರಂಥಕ್ಕೆ ಮರು ಜೀವಣಿ ಎರೆಯುವವರು ಅವರೇ. ಒಂದು ಗ್ರಂಥದ ಹಲವಾರು ಪ್ರತಿಗಳನ್ನು ಬೇರೆ ಬೇರೆ ಲಿಪಿಕಾರರು ಬರೆದಿರುವುದರಿಂದಲೇ ಈಗಲೂ ಪ್ರಾಚೀನ ಗ್ರಂಥಗಳು ಜೀವಂತವಾಗಿವೆ.

ಅನೇಕ ಪ್ರತಿಗಳನ್ನು ಬರೆಯುವುದರ ಮೂಲಕ ಈ ಪ್ರತಿಕಾರರು ಪ್ರಾಚೀನ ಸಾಹಿತ್ಯದ ಒಂದು ಬೃಹದ್ರತ್ನಾಕರವನ್ನೇ ರಚಿಸಿದ್ದಾರೆ.[೯] ಇದಕ್ಕಾಗಿ ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಈ ಲಿಪಿಕಾರರನ್ನು ಅಭಿನಂದಿಸಬೇಕು.

ತಾನು ಬರೆದ ಬರೆವಣಿಗೆಯಲ್ಲಿ ತಪ್ಪು ಕಂಡುಬಂದರೆ ಅದನ್ನು ಸರಿಪಡಿಸಿಕೊಳ್ಳಿ ಎಂದು ಗ್ರಂಥಾಂತ್ಯದಲ್ಲಿ ಓದುಗರನ್ನು ಪ್ರಾರ್ಥಿಸದ ಲಿಪಿಕಾರನಿಲ್ಲ.[೧೦] ಇದು ಆತನ ವಿನಯವನ್ನು ಸೂಚಿಸುತ್ತದೆ. ಗ್ರಂಥಾರಂಭಕ್ಕೆ ಮೊದಲು ಪ್ರತಿಯೊಬ್ಬ ಲಿಪಿಕಾರನೂ ತನ್ನ ಇಷ್ಟದೈವ ಮತ್ತು ಗುರುಗಳನ್ನು ಸ್ತುತಿಸಿ ಬಳಿಕ ಗ್ರಂಥವನ್ನು ಬರೆಯಲು ಪ್ರಾರಂಭಿಸುತ್ತಾನೆ. ಕೆಲವರು ತಾವು ಬರೆಯಲು ಪ್ರಾರಂಭಿಸದ ಮತ್ತು ಪ್ರತಿಮಾಡಿ ಮುಗಿಸಿದ ಕಾಲವಿವರವನ್ನು ಬರೆದಿದ್ದಾರೆ".[೧೧]

ಹಸ್ತಪ್ರತಿಗಳ ವಿಷಯ ಸಂಪತ್ತು

"ಪ್ರಾಚೀನ ಭಾರತ ವಿವಿಧ ಜ್ಞಾನ ಶಾಖೆಗಳ ಸಮೃದ್ಧಿ ಹಾಗೂ ಅಮೂಲ್ಯ ಸಾಹಿತ್ಯ ರೂಪದ ಸಂಪತ್ತು ನಿಕ್ಷೇಪಗೊಂಡಿರುವುದೇ ಹಸ್ತಪ್ರತಿಗಳೆಂಬ ಅಮೃತ ಭಾಂಡಗಳಲ್ಲಿ"[೧೨] ಎಂದು ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಹೇಳಿದ್ದಾರೆ.

ನಾ. ಗೀತಾಚಾರ್ಯ ಅವರು "ಹಸ್ತಪ್ರತಿಗಳಲ್ಲಿ ಏನಿದೆ ಎಂದು ಕೇಳಿಕೊಳ್ಳುವುದಕ್ಕಿಂತ ಏನಿಲ್ಲ ಎಂದು ಕೇಳಿಕೊಳ್ಳುವುದೇ ಸೂಕ್ತವೆನಿಸುತ್ತದೆ".[೧೩] ಎಂದು

ಹೇಳಿ ಹಸ್ತಪ್ರತಿಗಳಲ್ಲಿರುವ ವಿಷಯ ಸಂಪತ್ತನ್ನು ವಿವರಿಸಿದ್ದಾರೆ. ಪ್ರಾಚೀನ ಕರ್ನಾಟಕ ಜ್ಞಾನಭಂಡಾರವೇ ಇದರಲ್ಲಿ ಅಡಗಿದೆ. ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕೀಯ, ಆರ್ಥಿಕ, ವಿಜ್ಞಾನ, ವಾಸ್ತುಶಿಲ್ಪ, ವೈದ್ಯ, ಸಂಗೀತ, ಚಿತ್ರಕಲೆ, ನಾಟ್ಯಶಾಸ್ತ್ರ, ಶಿಕ್ಷಣ, ಧಾರ್ಮಿಕ, ಭವಿಷ್ಯ, ಖಗೋಳ, ಗಣಿತ ಮುಂತಾದ ಎಲ್ಲ ಜ್ಞಾನ ಶಾಖೆಗಳೂ ಇದರಲ್ಲಿ ಅಡಗಿವೆ.

"ಸುಮಾರು ಒಂಭೈನೂರು ವರ್ಷಗಳ ಹಿಂದೆ ಚಾವುಂಡರಾಯನೆಂಬುವನು 'ಲೋಕೋಪಕಾರ' ಎಂಬ ಒಂದು ಬೃಹತ್‌ಗ್ರಂಥವನ್ನು ರಚಿಸಿದ್ದಾನೆ. ಅದರಲ್ಲಿ ಕೃಷಿ, ತೋಟಗಾರಿಕೆ, ಜಲಶಿಲ್ಪ, ನರವೈದ್ಯ, ಪಶುವೈದ್ಯ, ಅಶ್ವಶಾಸ್ತ್ರ, ಗಜಶಾಸ್ತ್ರ, ಪಾಕಶಾಸ್ತ್ರ ಮುಂತಾದ ಅತ್ಯುಪಯುಕ್ತ ವಿಷಯಗಳನ್ನು ತಿಳಿಸಿದ್ದಾನೆ".[೧೪]

ಹೆಚ್. ದೇವೀರಪ್ಪನವರು ಹಸ್ತಪ್ರತಿಗಳಲ್ಲಿ ಏನಿದೆ ಎಂಬುದಕ್ಕೆ "ಕನ್ನಡ ಜನರ ಜೀವನವು ವೈವಿಧ್ಯ ಪರಿಪೂರ್ಣವೂ, ವರ್ಣರಂಜಿತವೂ, ವಿವಿಧ ಧಾತು ಸಮನ್ವಿತವೂ ಸುಸಂಸ್ಕೃತವೂ, ಆಗಿ ಸರ್ವಾಂಗ ಸುಂದರವಾಗಿ ಬೆಳೆದು ಪರಿಪೂರ್ಣತೆಯನ್ನು ಸಾಧಿಸುವುದಕ್ಕೆ ಏನೇನು ಬೇಕು ಅದೆಲ್ಲವೂ ಕೂಡ ಹಸ್ತಪ್ರತಿಗಳಲ್ಲಿದೆ"[೧೪] ಎಂದು ಉತ್ತರಿಸುತ್ತಾರೆ. ಇದರಿಂದ ನಮಗೆ ಅರಿವಾಗುವ ಅಂಶವೆಂದರೆ ೬೪ ಪ್ರಾಚೀನ ಕಲೆಗಳೂ ಅಥವಾ ವಿದ್ಯೆಗಳು ಹಸ್ತಪ್ರತಿಗಳಲ್ಲಿ ಅಡಗಿವೆ. ಇಂತಹ ಅಮೂಲ್ಯ ಹಸ್ತಪ್ರತಿಗಳನೆಲ್ಲ ಸಂಗ್ರಹಿಸಿ ಸಂಪಾದಿಸಿ, ಪ್ರಕಟಿಸುವ ಕಾರ್ಯ ನಡೆಯಬೇಕಿದೆ.

ಹಸ್ತಪ್ರತಿಗಳ ವರ್ಗೀಕರಣ

"ಹಸ್ತಪ್ರತಿಗಳನ್ನು ವಿಷಯಾನುಗುಣವಾಗಿ, ಕಾವ್ಯಪ್ರಕಾರವನ್ನು ಗಮನಿಸಿ, ಲೇಖನ ಸಾಮಗ್ರಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ವರ್ಗೀಕರಿಸುವುದಕ್ಕೆ ಬರುತ್ತದೆ. ಈ ಕೆಲಸವನ್ನು ಯಾವ ಗ್ರಂಥ ಭಂಡಾರಿಯೂ ಮಾಡಬಹುದು. ಕೈ ಬರಹಗಳನ್ನು ಸಂಗ್ರಹಿಸುವುದು ಸಂರಕ್ಷಣೆ ಮಾಡುವುದು ಮುಖ್ಯವಾಗಿ ಸಂಪಾದನಾ ಕಾರ್ಯಕ್ಕಾಗಿ ; ಶಾಸ್ತ್ರೋಕ್ತವಾಗಿ ಸಂಪಾದಿಸಿದ್ದನ್ನೆಲ್ಲ ಪ್ರಕಟಿಸುವುದಕ್ಕಾಗಿ."[೧೫]

ಅಚ್ಚಿನ ಮುದ್ರಣಕ್ಕೆ ಮುಂದಿನ ಹಸ್ತಪ್ರತಿಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು.

೧) ತಾಳೆಗರಿ ಪ್ರತಿಗಳು

೨) ಕೋರಿಕಾಗದ ಪ್ರತಿಗಳು

೩) ಮೈಕ್ರೋ ಫಿಲಂ ಪ್ರತಿಗಳು

೪) ಅಚ್ಚಿಗಾಗಿ ಸಿದ್ಧಪಡಿಸಿದ ಕೈಬರಹದ ಪ್ರತಿಗಳು

೧) **ತಾಳೆಗರಿ ಪ್ರತಿಗಳು** – ಮೊದಲಿನಿಂದಲೂ ಅತ್ಯಂತ ಜನಪ್ರಿಯ ಬರಹ ಸಾಮಗ್ರಿಯೆನಿಸಿವೆ. ತಾಳೆಗರಿಯನ್ನು ನಿರ್ದಿಷ್ಟವಾಗಿ ಯಾವಾಗ ಬಳಕೆಗೆ ತರಲಾಯಿತು ಎಂದು ಹೇಳುವುದು ಕಷ್ಟ. ಪ್ರಾಚೀನ ಹಸ್ತಪ್ರತಿಗಳು ನಿರಂತರವಾಗಿ ತಾಳೆಗರಿಗಳಲ್ಲಿ ಪ್ರತಿಮಾಡುವುದರಿಂದ ಹಾಗೂ ಲಿಪಿಕಾರ ಮತ್ತು ಆಶ್ರಯದಾತ ಇವರಿಬ್ಬರ ಸ್ತುತ್ಯ ಪ್ರಯತ್ನಗಳಿಂದ ಅವು ಉಳಿದುಕೊಂಡು ಬಂದಿವೆ. ಅನೇಕ ಶತಮಾನಗಳಿಂದ ತಮ್ಮ ಧರ್ಮಗ್ರಂಥಗಳನ್ನು ಇತರೇ ವಿಷಯಗಳನ್ನು ತಾಳೆಗರಿಗಳ ಮೇಲೆ ಬರೆಯುವುದನ್ನು ವಿದ್ವಾಂಸರು ರೂಢಿಸಿಕೊಂಡು ಬಂದಿದ್ದರು. ಹಾಗಾಗಿ ಹೆಚ್ಚಿನ ಹಸ್ತಪ್ರತಿಗಳು ಸಿಕ್ಕಿರುವುದು ತಾಳೆಗರಿಗಳಲ್ಲಿ ಹಾಗಾಗಿ ಇದೊಂದು ಬಹುಮುಖ್ಯ ಹಸ್ತಪ್ರತಿ ಪ್ರಕಾರವಾಗಿದೆ.

೨) **ಕೋರಿ ಕಾಗದ** – ಎಂದರೆ "ಬಟ್ಟೆಯ ಚಿಂದಿಗಳಿಂದ ತಯಾರು ಮಾಡಿದ ಕಾಗದ, ರಟ್ಟಿನಂತಹ ದಪ್ಪದಾದ ಮಾಸಲು ಬಿಳಿಯ ಕಾಗದ, ಮಡ್ಡಿ ಕಾಗದ".[೧೬]

ಕೋರಿ ಕಾಗದ ಅಥವಾ ಕೈಯಿಂದ ಮಾಡಿದ ಕಾಗದ ಯಂತ್ರದಿಂದ ತಯಾರಾದ ಕಾಗದಕ್ಕಿಂತ ಒರಟಾಗಿರುತ್ತವೆ. ಈ ಕಾಗದದಲ್ಲಿ ಬೇಗನೆ ನಶಿಸಿ ಹೋಗುವಂತಹ ಕಬ್ಬಿಣದ ಅಂಶಗಳು ಸೇರಿರುವುದಿಲ್ಲ; ಜಿಲೆಟಿನ್ ಮತ್ತು ಪಿಷ್ಠ ಪದಾರ್ಥಗಳನ್ನು ಉಪಯೋಗಿಸಿರುವುದಿಲ್ಲ. ಇದು ಬಟ್ಟೆಯ ಚೂರುಗಳಿಂದ ಮಾತ್ರ ತಯಾರಾಗಿರುತ್ತದೆ. ಕೋರಿ ಕಾಗದದ ಮೇಲೆ ಗ್ರಂಥ ಬರೆಯುವುದರಿಂದ ಹಸ್ತಪ್ರತಿ ಹೆಚ್ಚುಕಾಲ ಬಾಳಿಕೆಯಾಗಿರುತ್ತದೆ. ಆದ್ದರಿಂದ ಇದೂ ಹಸ್ತಪ್ರತಿಯ ಒಂದು ಪ್ರಕಾರವಾಗಿದೆ.

೩) **ಮೈಕ್ರೋಫಿಲಂ** – ಪ್ರತಿಗಳ ಬಳಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿದೆ. "ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಾಲಯಗಳಲ್ಲಿ ಒಂದು ಗ್ರಂಥದಲ್ಲಿ ಒಂದೊಂದು ಪತ್ರವನ್ನೂ ವಿಂಗಡಿಸಿ ಅದರ ಅತಿ ಸೂಕ್ಷ್ಮವಾದ ಛಾಯಾಚಿತ್ರವನ್ನು ತೆಗೆಯುತ್ತಾರೆ. ಇದಕ್ಕೆ 'ಮೈಕ್ರೋಫಿಲ್ಮಿಂಗ್' ಎಂದು ಹೆಸರು".[೧೭]

"ಸಂಗ್ರಹಿಸಿದ ಹಸ್ತಪ್ರತಿಗಳನ್ನು ಹುಳು-ಹುಪ್ಪಟೆಗಳಿಂದ ರಕ್ಷಿಸುವುದು ಹಸ್ತಪ್ರತಿ ಸಂಗ್ರಹದಷ್ಟೇ ಗುರುತರವಾದ ಕಾರ್ಯವಾಗಿದೆ. ಅದಕ್ಕಾಗಿ ಭಂಡಾರದಲ್ಲಿ ಪ್ರಧೂಮನ, ಉಪಚಾರ, ಕೀಟ ನಿರೋಧಕ, ತೈಲ ಲೇಪನ ಮಾಡುವ ವ್ಯವಸ್ಥೆಯಿದೆ. ತುಂಬಾ ಶಿಥಿಲವಾದ ಪ್ರತಿಗಳನ್ನು ಮೈಕ್ರೋಫಿಲಂ ಮೂಲಕ ಹಿಡಿದಿಡುವ, ಉಳಿಸಿಕೊಳ್ಳುವ ಪ್ರಯತ್ನವೂ ನಡೆದಿದೆ. ನಾಗವರ್ಮನ ವರ್ಧಮಾನ ಪುರಾಣದ ಫೋಟೋಸ್ಟಾಟ್ ತೆಗೆಯಲಾಗಿದೆ. ಇವನ್ನು ಓದಲು ಮೈಕ್ರೋಫಿಲಂ ರೀಡರ್ ಯಂತ್ರದ ಸೌಲಭ್ಯವೂ ಇದೆ".[೧೮]

೪) **ಅಚ್ಚಿಗಾಗಿ ಸಿದ್ಧಪಡಿಸಿದ ಕೈಬರಹದ ಪ್ರತಿಗಳು** – ಇತ್ತೀಚಿನ ಅಂದರೆ ಆಧುನಿಕ ಗ್ರಂಥದ ಮೂಲಕೃತಿಗಳು. ಆಧುನಿಕ ಕಾಲದಲ್ಲಿ ಮುದ್ರಣ ಯಂತ್ರ, ಕಂಪ್ಯೂಟರ್ ಮತ್ತು

ಆಧುನಿಕ ಸಲಕರಣೆಗಳಿದ್ದರೂ ಅಚ್ಚಿಗಿಂತ ಮುಂಚೆ ಕೃತಿಕಾರ ತನ್ನ ಕೈ ಬರಹದ ಪ್ರತಿಯನ್ನು ಸಿದ್ಧಪಡಿಸಿಕೊಂಡಿರುತ್ತಾನೆ. ಇವೂ ಹಸ್ತಪ್ರತಿಗಳೇ.[೧೯] ಹೀಗೆ ಸಿದ್ಧವಾದ ಹಸ್ತಪ್ರತಿಗಳು ಗ್ರಂಥಸಂಪಾದನಾ ದೃಷ್ಟಿಯಿಂದ ಮುಖ್ಯವಾಗಿರುತ್ತವೆ. ಆದುದರಿಂದ ಇಂತಹ ಪ್ರತಿಗಳನ್ನು ಸಂಗ್ರಹಿಸಿ ಸಂರಕ್ಷಿಸುವ ಕಾರ್ಯವೂ ನಡೆಯಬೇಕಿದೆ.

ಹಸ್ತಪ್ರತಿಗಳ ಸ್ವರೂಪ ಮತ್ತು ವಿಂಗಡಣೆಯನ್ನು ಡಿ.ಎಲ್.ಎನ್. ರವರು ಹೀಗೆ ವಿವರಿಸಿದ್ದಾರೆ.[೨೦]

೧) ಕವಿಯ ಸ್ವಹಸ್ತಾಕ್ಷರ ಪ್ರತಿ

೨) ಏಕೈಕ ಹಸ್ತಪ್ರತಿ

೩) ಪರಂಪರಾಗತ ಪ್ರತಿಗಳು

೪) ಮಾತೃಕೆ

೫) ಮಿಶ್ರಪ್ರತಿಗಳು

೧) ಕವಿಯ ಸ್ವಹಸ್ತಾಕ್ಷರ ಪ್ರತಿ : ಹೆಸರೇ ಹೇಳುವ ಹಾಗೆ ಒಂದು ಕೃತಿ ಎಂದರೆ ಕರ್ತೃ ಸ್ವತಃ ತಾನೇ ಬರೆದ ಅಥವಾ ಬರೆದ ಮೇಲೆ ತಾನೇ ಪರಿಶೀಲಿಸಿ ತಿದ್ದಿದ ಹಸ್ತಪ್ರತಿ. ಇದನ್ನು ಮೂಲಪ್ರತಿ ಎಂದೂ ಕರೆಯುತ್ತಾರೆ. ೧೮ನೇ ಶತಮಾನದ ಕೊನೆಯಲ್ಲಿದ್ದ ಬಸಪ್ಪಶಾಸ್ತ್ರಿ, ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ) ಇವರ ಮತ್ತು ಅವರಿಗಿಂತ ಈಚಿನವರ ಸ್ವಹಸ್ತ ಪ್ರತಿಗಳು ದೊರೆಯುತ್ತವೆಯೇ ಹೊರತು, ಅದಕ್ಕೆ ಹಿಂದಿನವಾವುವೂ ಇದುವರೆಗೆ ದೊರೆತಿಲ್ಲ.

೨) ಏಕೈಕ ಹಸ್ತಪ್ರತಿ ಎಂದರೆ ಕೃತಿ ಪಠ್ಯದ ಹಲವು ಲಿಖಿತ ಹಸ್ತಪ್ರತಿಗಳಲ್ಲಿ ಈಗ ನಮ್ಮ ಪರಿಶೀಲನೆಗೆ ದೊರೆಯುವಂತೆ ಉಳಿದಿರುವ ಒಂದೇ ಒಂದು ಪ್ರತಿ. ಹಲವು ಕೃತಿಗಳಿಗೆ ಅನೇಕ ಹಸ್ತಪ್ರತಿಗಳು ದೊರೆತಿಲ್ಲ. ಒಂದೊಂದು ಮಾತ್ರ ಲಭಿಸಿರುತ್ತವೆ. ಉದಾಹರಣೆಗೆ – ನಾಗವರ್ಮನ 'ಕರ್ಣಾಟಕಾದಂಬರಿ', ಚೌಂಡರಸನ 'ನಳಚರಿತ್ರೆ', ಮಧುರ ಕವಿಯ 'ಧರ್ಮನಾಥ ಪುರಾಣ – ಮುಂತಾದ ಕಾವ್ಯಗಳ ಲಭ್ಯ ಹಸ್ತಪ್ರತಿ ಒಂದೊಂದೇ ಆಗಿವೆ.

೩) ಪರಂಪರಾಗತ ಪ್ರತಿಯನ್ನು ಮಾತೃಕೆ ಎಂತಲೂ ಕರೆಯಬಹುದು. "ಕವಿ ಕೃತಿಯೊಂದರ ಹಸ್ತಪ್ರತಿಗಳು ಬೇರೆ ಬೇರೆ ಪೀಳಿಗೆಗಳಿಗೆ ಅಥವಾ ಗುಂಪುಗಳಿಗೆ ಮೂಲ ಪ್ರತಿಯ ಪುನಾರಚಿತ ರೂಪ; ಕಲ್ಪಿತ ಮೂಲಪ್ರತಿ ; ಈ ಪ್ರತಿಯ ಮೂಲಪಾಠ ಭಿನ್ನಶಾಖೆಗಳಾಗಿ ಒಡೆಯುವ ಮುಂಚೆಯೇ ಸ್ವಹಸ್ತ ಪ್ರತಿಯಿಂದ ನಕಲು ಪ್ರತಿಯಾಗಿರಲಿ ಅಥವಾ ಪ್ರಥಮ ಪಾಠವು ಮೊದಲ ಬಾರಿಗೆ ವಿಚ್ಛೇದನಗೊಂಡ ಮೇಲೆ ಪಾಠ ಪರಂಪರೆಯ ಮಧ್ಯದಲ್ಲಿ ಬರುವ ಕಲ್ಪಿತ ಮಾತೃಕೆಯಾಗಿರಲಿ ಅದು ಪ್ರಧಾನ ಮಾತೃಕೆ.

ಆದರೆ ಎಲ್ಲ ಲಭ್ಯ ಹಸ್ತಪ್ರತಿಗಳಿಗೂ ಸಾಮಾನ್ಯ ಮೂಲವಾದ ಪಾಠ ವಿಚ್ಛೇದನಕ್ಕೂ ಮುಂಚಿನ ಜನಕ ಪ್ರತಿಗೇ ಈ ಹೆಸರು ಅನ್ವಯಿಸುವುದು ಸೂಕ್ತ".[೨೧]

೪) ಮಾತೃಕೆ ಎಂಬುದು ನೇರವಾಗಿ ಪ್ರತಿ ಲಿಪಿ ಮಾಡಲು ಇಟ್ಟುಕೊಂಡ ಕೃತಿ ಪಠ್ಯದ ಪರಂಪರಾಗತ ಹಸ್ತಪ್ರತಿ; ಅಂದರೆ ಆಧಾರ ಪ್ರತಿ. ಒಂದು ಗ್ರಂಥದ ಮೂರು ಹಸ್ತಪ್ರತಿಗಳು (ಕ–ಖ–ಗ) ದೊರೆತಿವೆ ಎಂದು ಭಾವಿಸಿದರೆ ಅವು ಸ್ವತಂತ್ರವಾಗಿ ಬೇರೊಂದು (ಯ) ಮಾತೃಕೆಯ ನಕಲುಗಳಾಗಿರಬಹುದು. ಹಸ್ತಪ್ರತಿಗಳ ಪಾಠ ಪರೀಕ್ಷೆ ಮಾಡುವುದರಿಂದ ಇವುಗಳ ಸಂಬಂಧವನ್ನು ತಿಳಿಯಬಹುದಾಗಿದೆ.

೫) ಕೃತಿಯೊಂದರ ಹಲವು ಹಸ್ತಪ್ರತಿಗಳ ಭಿನ್ನ ಪಾಠಗಳೋ ಸಂಪ್ರದಾಯಗಳೋ ಸ್ವತಂತ್ರವಾಗಿ ಬೆರೆತುಕೊಂಡು ಲಿಖಿತವಾದ ಹಸ್ತಪ್ರತಿಯೇ 'ಮಿಶ್ರಪ್ರತಿ'. ಕವಿಯ ಸ್ವಹಸ್ತಪ್ರತಿಯಿಂದ ನೇರವಾಗಿಯೋ ಪರಂಪರೆಯಾಗಿಯೋ ನಕಲಾದ ಪ್ರತಿಯೊಂದರ ಪ್ರತಿಯೂ ಈಚಿನ ಕಾಲಗಳಲ್ಲಿ ಲಿಖಿತವಾಗುವ ಇತರ ಪ್ರತಿಗಳಿಗೆ ಮೂಲವಾಗಿ ಪರಿಣಮಿಸುತ್ತದೆ ; ಒಂದೊಂದೂ ಒಂದೊಂದು ಶಾಖೆಯನ್ನು ನಿರ್ಮಿಸಬಹುದು. ಒಂದು ಶಾಖೆಗೆ ಸೇರಿದ ಯಾವುದೋ ಒಂದು ಪ್ರತಿಯನ್ನು, ಇನ್ನೊಂದು ಶಾಖೆಗೆ ಸೇರಿದ ಯಾವುದೋ ಇನ್ನೊಂದು ಪ್ರತಿಯೊಡನೆ ಹೋಲಿಸಿ ನೋಡಿ ಒಬ್ಬ ಲಿಪಿಕಾರ ಎರಡರ ಪಾಠಗಳಲ್ಲಿ ಆಗ ಒಂದನ್ನು, ಈಗ ಒಂದನ್ನು ತೆಗೆದು ಸೇರಿಸಿ ಒಂದು ಪ್ರತಿಯನ್ನು ಮಾಡಬಹುದು ; ಇದು ಮಿಶ್ರಪ್ರತಿಯಾಗಿ ಬಿಡುತ್ತದೆ.

ಸಂಪಾದನಾ ಕಾರ್ಯ ಮಾಡುವವನು ತನಗೆ ಸಿಕ್ಕಿರುವ ಎಲ್ಲ ಹಸ್ತಪ್ರತಿಗಳನ್ನು ಬಹಳ ಜತನದಿಂದ ಪರಿಶೀಲಿಸಿ ಅವು ಯಾವ ತೆರನಾದ ಹಸ್ತಪ್ರತಿಗಳು ಎಂಬ ವಿಷಯದಲ್ಲಿ ಒಂದು ಸ್ಪಷ್ಟ ತೀರ್ಮಾನವನ್ನು ಕೈಗೊಳ್ಳಬೇಕಾಗುತ್ತದೆ. ಹಸ್ತಪ್ರತಿಗಳಲ್ಲಿರುವ ಭಿನ್ನ ಪಾಠಗಳನ್ನು ಪರಿಶೀಲಿಸುವುದರಿಂದ ಈ ವಿಷಯವನ್ನು ಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಹಸ್ತಪ್ರತಿಗಳ ಮುದ್ರಣ ಇತಿಹಾಸ

"ಜರ್ಮನಿಯ ಜಾನ್ ಗುಟನ್‌ಬರ್ಗ್ ಎಂಬುವವನು ೧೪೩೯ರಲ್ಲಿ ಮುದ್ರಣ ಯಂತ್ರವನ್ನು ಮೊದಲು ಶೋಧಿಸಿದನು. ೧೪೫೬ರಲ್ಲಿ ಯೂರೋಪಿನಲ್ಲಿ ಮೊದಲು ಪ್ರಕಟವಾದ ಪುಸ್ತಕ ಬೈಬಲ್. ಅದು "ಗುಟನ್‌ಬರ್ಗ್ ಬೈಬಲ್" ಎಂದೇ ಪ್ರಸಿದ್ಧವಾಯಿತು. ಭಾರತಕ್ಕೆ ಮುದ್ರಣ ಯಂತ್ರ ಬಂದುದು ೧೫೫೬ರಲ್ಲಿ. ಮುದ್ರಣ ಯಂತ್ರದ ಅವಿಷ್ಕಾರದಿಂದ ಪಾಶ್ಚಾತ್ಯ ದೇಶಗಳಲ್ಲಿ ಗ್ರಂಥಗಳನ್ನು ಕೈಯಿಂದ ಬರೆಯುವುದು ತಪ್ಪಿ,

ಯಂತ್ರದಿಂದ ಮುದ್ರಿಸುವ ಪರಿಪಾಠ ಆರಂಭವಾಯಿತು. ಈ ರೀತಿ ಮುದ್ರಣಗೊಂಡ ಹೊಸ ಬಗೆಯ ಗ್ರಂಥಗಳಿಂದ ಪ್ರತ್ಯೇಕಿಸಿ ಕರೆಯುವುದರ ಸಲುವಾಗಿಯೇ, ಈ ಮೊದಲು ಕೈಯಿಂದ ಬರೆಯುತ್ತಿದ್ದ ಗ್ರಂಥಗಳನ್ನು 'Manuscript' ಎಂಬ ಪದದಿಂದ ಕರೆಯುತ್ತಿದ್ದರು. ಕೈಯಿಂದ ಬರೆಯುವಾಗ ಏಕ ಪ್ರತಿಯಾಗಿ ಸೃಷ್ಟಿಯಾಗುತ್ತಿದ್ದ ಗ್ರಂಥ ಮುದ್ರಣ ಯಂತ್ರದ ಪ್ರಭಾವದಿಂದಾಗಿ ಅನೇಕ ಪ್ರತಿಗಳಲ್ಲಿ ಹೊರ ಬಂದು ಬೆಳಕು ಕಂಡವು. ಈ ಕ್ರಿಯೆ ಪ್ರಾಚೀನ ಗ್ರಂಥಗಳ ಪ್ರಸಾರದ ವೇಗ – ವ್ಯಾಪ್ತಿಗಳನ್ನು ಚುರುಕುಗೊಳಿಸಿತು. ಇದರ ಫಲವಾಗಿಯೇ ಪ್ರಾಚೀನ ಹಸ್ತಪ್ರತಿಗಳ ಶೋಧ, ಸಂಗ್ರಹ, ರಕ್ಷಣೆ, ಮತ್ತು ಅಧ್ಯಯನಗಳಿಗೆ ಬಹುದೊಡ್ಡ ತಿರುವು ಪ್ರಾಪ್ತವಾಯಿತು. ಮುದ್ರಣ ಯಂತ್ರ ಕರ್ನಾಟಕವನ್ನು ಪ್ರವೇಶಿಸುವುದರ ಮೂಲಕ ಇಲ್ಲಿಯೂ ಈ ರೀತಿಯ ಪ್ರಭಾವ ಹೆಚ್ಚಾಯಿತು".[೨೨]

"ಭಾರತದಲ್ಲಿ ಬರವಣಿಗೆಗೆ ಕಾಗದ ಬಳಕೆ ಆರಂಭವಾಗುವುದಕ್ಕೆ ಮೊದಲು ಲೇಖನ ಸಾಮಗ್ರಿಯಾಗಿ ಭೂರ್ಜಪತ್ರ, ತಾಳೆಗರಿ, ಓಲೆಗರಿ, ಕಡತ ಮುಂತಾದವು ಪ್ರಾಮುಖ್ಯ ಗಳಿಸಿದ್ದವು. ಮುದ್ರಣ ಯುಗದ ಆರಂಭದೊಡನೆ ಕಾಗದದ ಬಳಕೆ ಸರ್ವತೋಮುಖವಾಗಿ – ಉತ್ಕರ್ಷವನ್ನು ಹೊಂದಿತು".[೨೩]

"ಕ್ರೈಸ್ತಧರ್ಮ ಪ್ರಚಾರದ ಉದ್ದೇಶದಿಂದ ಭಾರತಕ್ಕೆ ಬಂದು ನೆಲೆಸಿ ಭಾಷೆಯನ್ನು ಕಲಿತ ಅನೇಕ ವಿದ್ವಾಂಸರು, ಪಾದ್ರಿಗಳೂ ಕನ್ನಡದಲ್ಲಿ ಕ್ರಿಶ್ಚಿಯನ್ ಧಾರ್ಮಿಕ ಸಾಹಿತ್ಯವನ್ನು ರಚಿಸಿ ಪ್ರಕಟಿಸಿದರು. ಕನ್ನಡದಲ್ಲಿ ಮೊದ ಮೊದಲು ಪ್ರಕಟವಾಗಿರುವ ಗ್ರಂಥಗಳಲ್ಲಿ ಬೈಬಲಿನ ಅನುವಾದ, ಅಪೋಸ್ತಲರ ಹೇಳಿಕೆಗಳು ಮುಖ್ಯವಾಗಿವೆ. ಆ ವಿದ್ವಾಂಸರು ದೇಶೀಯ ಸಾಹಿತ್ಯವನ್ನೂ ಬೆಳಕಿಗೆ ತರಲು ಸಾಕಷ್ಟು ಪ್ರಯತ್ನ ಮಾಡಿದರು. ಅಚ್ಚು ಮೊಳೆಗಳ ಮುದ್ರಣ ಬರುವುದಕ್ಕೂ ಮೊದಲೇ, ಇನ್ನೂ ಕಲ್ಲಚ್ಚಿನ ಅವಸ್ಥೆಯಲ್ಲೆ ಬಸವ ಪುರಾಣ, ದಾಸರ ಪದಗಳು, ಸಾವಿರ ಗಾದೆಗಳು ಇವೇ ಮೊದಲಾದ ಗ್ರಂಥಗಳು ಸಂಕಲಿತವಾಗಿ ಸಂಪಾದಿತವಾಗಿ ಪ್ರಕಟವಾಗಿವೆ.

ಇದಿಷ್ಟು ೧೯ನೆಯ ಶತಮಾನದ ಮಧ್ಯಭಾಗದ ಕತೆಯಾಯಿತು. ಆಗ ಮುಖ್ಯವಾಗಿ ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್, ಮದರಾಸಿನ ಶ್ರೀ ಸರಸ್ವತೀ ಮುದ್ರಣಾಲಯ, ಧಾರವಾಡದ ಜ್ಞಾನವರ್ಧಕ ಛಾಪಖಾನೆ, ಗದಗಿನ ಜ್ಞಾನ ಚಂದ್ರೋದಯ ಛಾಪಖಾನೆ, ಬೆಳಗಾಮಿನ ಸಮಾಚಾರ ಪ್ರೆಸ್, ಮುಂಬಯಿಯ ರಾಮತತ್ವ ಪ್ರಕಾಶ ಪ್ರೆಸ್, ಮೈಸೂರಿನ ಜಗನ್ಮೋಹನ ಶಿಲಾಯಂತ್ರ, ವಾಣಿವಿಲಾಸ ಪ್ರೆಸ್, ವೆಸ್ಲಿಯನ್ ಮಿಷನ್ ಪ್ರೆಸ್ – ಈ ಅಚ್ಚುಕೂಟಗಳು ಕನ್ನಡ ಗ್ರಂಥೋದ್ಯಮದಲ್ಲಿ ಬಹಳ ಪ್ರಮುಖವಾದ ಪಾತ್ರವಹಿಸಿದ್ದವು.

ಆಗ ತಯಾರಾದ ಪಠ್ಯಪುಸ್ತಕಗಳ ವೈವಿಧ್ಯವೂ ಗಮನಾರ್ಹವಾದುದು. ಅಂಗೈಯಗಲದಿಂದ ಮೊದಲುಗೊಂಡು ಇಂದು ನಾವು ಕ್ರೌನ್ ಚತುಷ್ಪತ್ರ ಎಂದು

ಕರೆಯುವ ಅಳತೆಯವರೆಗೆ. ನಾಲ್ಕೈದು ಪುಟಗಳಿಂದ ನೂರೈವತ್ತು ಇನ್ನೂರು ಪುಟಗಳವರೆಗೆ ಪುಸ್ತಕಗಳು ನಿರ್ಮಾಣವಾಗಿವೆ. ಅವುಗಳಿಗೆ ಬಳಸಿರುವ ಕಾಗದ, ಉಪಯೋಗಿಸಿರುವ ಶಾಯಿ, ಇವೂ ಕೂಡ ವಿಶಿಷ್ಟವಾಗಿವೆ.

ಇದುವರೆಗೆ ತಿಳಿದಂತೆ ಕನ್ನಡದಲ್ಲಿ ಮೊದಲು ಅಚ್ಚಾಗಿರುವ ಪುಸ್ತಕ ವಿಲಿಯಂ ಕೇರಿ ಅವರ A grammer of the curnatika language 1817 ರಲ್ಲಿ ಇದು ಕಲ್ಕತ್ತೆಯ ಬಳಿಯ ಸೇರಾಂಪುರ್ (ಶ್ರೀರಾಮಪುರ)ದಲ್ಲಿ ಅಚ್ಚಾಗಿದೆ. ಇಂಗ್ಲೀಷ್‌ನಲ್ಲಿ ರಚಿತವಾಗಿರುವ ಈ ವ್ಯಾಕರಣದಲ್ಲಿ ಉದಾಹರಣೆಗಳನ್ನು ಕನ್ನಡದಲ್ಲಿ ಮುದ್ರಿಸಿದೆ. ೧೯೨೦ರಲ್ಲಿ ಜಾನ್ ಮೆಕೆರೆಲ್ `Grammer of the Carnataca language' ಎಂಬ ಹೆಸರಿನ ಮತ್ತೊಂದು ವ್ಯಾಕರಣ ಪ್ರಕಟಿಸಿದನು. ಅದು ಅಚ್ಚಾಗಿರುವು ಮದರಾಸಿನ ಸೇಂಟ್ ಫೋರ್ಟ್ ಜಾರ್ಜ್ ಅಚ್ಚುಕೂಟದಲ್ಲಿ. ೧೮೨೦ರಲ್ಲಿಯೇ ಬಳ್ಳಾರಿಯಲ್ಲಿ ಜೆ.ಹ್ಯಾಂಡ್ಸ್ ಎಂಬ ಕ್ರೈಸ್ತ ವಿದ್ವಾಂಸ ಬೈಬಲನ್ನು ಕನ್ನಡ ಗದ್ಯದಲ್ಲಿ ಅನುವಾದ ಮಾಡಿ ಪ್ರಕಟಿಸಿದನು.

ಕನ್ನಡದಲ್ಲಿ ಬೈಬಲಿನ ಮೊದಲ ಅವತರಣ ಇದೇ. ಇದರಲ್ಲಿ ಉಪಯೋಗಿಸಿರುವುದು ತೆಲುಗು ಲಿಪಿ. ೧೮೩೭ರಲ್ಲಿ ಪ್ರಕಟವಾಗಿರುವ "ಇಂಗ್ಲಿಷ್ ಭಾಷೆಯನ್ನು ಸಾಧಿಸುವುದಕ್ಕೆ ಸಹಾಯವು" ಒಂದು ಕೈಪಿಡಿ. ಅದರಲ್ಲೂ ತೆಲುಗು ಲಿಪಿಯೇ ಇದೆ. ಅಡಕಿ ಸುಬ್ಬರಾಯರ A selection of stories and revenue papers in the Karnataka language with translations and grammatical analysis" ೧೮೪೬ರಲ್ಲಿ ಪ್ರಕಟವಾಯಿತು.

ಈ ಎಲ್ಲ ಪುಸ್ತಕಗಳಲ್ಲಿ ಉಪಯೋಗಿಸಿರುವ ಅಕ್ಷರಗಳ ಮಾದರಿ, ಅಚ್ಚುಮೊಳೆಗಳ ವಿನ್ಯಾಸ ಇದೇ ಒಂದು ಪ್ರತ್ಯೇಕ ವಸ್ತುವಾಗುತ್ತದೆ. ಅವುಗಳಲ್ಲಿ ಮುಖ್ಯವಾಗಿ ಮೂರು ಮಾದರಿಗಳು ಕಂಡುಬರುತ್ತವೆ. ಚೌಕಟ್ಟಿನ ಅಕ್ಷರದ ವಿನ್ಯಾಸ ಬರುವಂತೆ ರೂಪಿಸಿದ ಮಾದರಿಯಲ್ಲಿ ಕೊಂಬಿನಿಳಿ, ದೀರ್ಘಗಳು ತೆಲುಗನ್ನು ಹೋಲುತ್ತವೆ. ಎರಡನೆಯದು ಉದ್ದುದ್ದವಾಗಿ ತೆಲುಗನ್ನು ಹೋಲುವಂತೆ ತಯಾರಿಸಿದ ಅಕ್ಷರದ ಮಾದರಿ, ಈಗ ೧೬ ಪಾಯಿಂಟ್ ಎಂದು ಕರೆಯುವಷ್ಟು ದಪ್ಪನಾಗಿ ಗುಂಡಗೆ ಅಕ್ಷರಗಳನ್ನು ಕೊರೆದಿರುವ ಮಾದರಿ ಮೂರನೆಯದು. ಮುಖ್ಯವಾಗಿ ಮೊದಲಿನೆರಡು ಕ್ರಮವಾಗಿ ಬಾಸೆಲ್ ಮಿಶನ್ ಪ್ರೆಸ್ ಮತ್ತು ಮದರಾಸಿನ ಶ್ರೀ ಸರಸ್ವತೀ ಪ್ರೆಸ್‌ಗಳಲ್ಲಿ ಪ್ರಕಟವಾದ ಪುಸ್ತಕಗಳಲ್ಲಿ ಕಂಡು ಬರುತ್ತವೆ. ಮೂರನೆಯ ಮಾದರಿ ಬಿಜಾಪುರ, ಬಳ್ಳಾರಿ, ಬೆಳಗಾಂಗಳಲ್ಲಿ ಅಚ್ಚಾದ ಪುಸ್ತಕಗಳಲ್ಲಿ ಕಾಣಬಹುದು.

ಮುದ್ರಣ ಪ್ರಾರಂಭವಾಗುವುದಕ್ಕಿಂತ ಮೊದಲು ಗ್ರಂಥ ಪ್ರಸಾರ ಬಹಳ ಮಿತವಾಗಿತ್ತು. ಬಹಳ ಶ್ರೇಷ್ಠವಾದ ಕಾವ್ಯವನ್ನು ಯಾರಾದರೂ ಉದಾರಿಗಳು ಲಿಪಿಕಾರರನ್ನು ನೇಮಿಸಿಕೊಂಡು ಕೈಯಲ್ಲಿ ಪ್ರತಿ ಮಾಡಿಸಿ "ಗ್ರಂಥದಾನ" ಮಾಡುತ್ತಿದ್ದರು.

ಅತ್ತಿಮಬ್ಬೆ ರನ್ನನ "ಅಜಿತ ತೀರ್ಥಂಕರ ಪುರಾಣ ತಿಲಕ"ವನ್ನು ಹಾಗೆ ಗ್ರಂಥದಾನ ಮಾಡಿದ ವಿಷಯ ಬರುತ್ತದೆ. ಪೊನ್ನನ "ಶಾಂತಿ ಪುರಾಣಕ್ಕೂ" ಆ ಯೋಗ ಲಭಿಸಿತು".[೨೪]

ಆದರೆ ಎಲ್ಲ ಕೃತಿಗಳೂ ಅಷ್ಟು ಮಟ್ಟಿಗೂ ಪ್ರಸಾರಗೊಳ್ಳಲಾರವು. ಮೊದಮೊದಲಿನ ಪಠ್ಯಪುಸ್ತಕಗಳನ್ನು ಸರಕಾರ ಪ್ರಕಟಿಸುತ್ತಿತ್ತು. ಮುಂಬಯಿ ಸರಕಾರದ ವಿದ್ಯಾಖಾತೆ ಪ್ರಕಟಿಸಿರುವ ಪಠ್ಯಪುಸ್ತಕಗಳು ಬೇಕಾದಷ್ಟಿವೆ. ಆಮೇಲೆ ಖಾಸಗೀ ಪ್ರಕಾಶಕರು ಕಾಣಿಸಿಕೊಂಡರು.[೨೫]

ಹಸ್ತಪ್ರತಿ ಭಂಡಾರಗಳು

"ಕರ್ನಾಟಕದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಗ್ರಂಥಾಲಯಗಳಿದ್ದುದು ಪುರಾತತ್ವ ಆಧಾರಗಳಿಂದ ಗೊತ್ತಾಗಿದೆ. ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ವಿಜಯನಗರ ಅರಸರು ಶಿಕ್ಷಣಕ್ಕೆ ಸರ್ವ ರೀತಿಯ ಪ್ರೋತ್ಸಾಹ ಕೊಡುತ್ತಿದ್ದು ಅಧ್ಯಯನ ಕ್ಷೇತ್ರಗಳಲ್ಲಿ ಗ್ರಂಥಗಳನ್ನು ಸಂಗ್ರಹಿಸಲು ಪ್ರಯತ್ನ ಮಾಡಿದ್ದರು. ತಾಳಗುಂದ, ಪಾವಿಟ್ಟಗೆ, ನಾಗಾವಿ, ಬಳ್ಳಿಗಾವೆಗಳಲ್ಲಿ ಅಂತಹ ಸಂಗ್ರಹಗಳಿದ್ದವು. ಹನ್ನೆರಡನೆಯ ಶತಮಾನದ ಧಾರ್ಮಿಕ ಕ್ರಾಂತಿ ಗ್ರಂಥ ಸಂಗ್ರಹ ಪ್ರಯತ್ನಕ್ಕೂ ಪ್ರಚೋದನೆ ನೀಡಿತು. ಓಲೆಗರಿ ಮತ್ತಿತರ ಗ್ರಂಥ ಸಂಗ್ರಹಗಳು ಅಭಿವೃದ್ಧಿ ಹೊಂದಿದುವು. ಭೂರ್ಜಪತ್ರ, ತಾಮ್ರಪತ್ರ, ಓಲೆಗರಿ, ಕಡತಗಳಲ್ಲಿ ಬರೆದು, ಬರೆಸಿ, ಅವುಗಳನ್ನು ಧಾರ್ಮಿಕ ಸಂಸ್ಥೆಗಳಲ್ಲಿ ಸಂಗ್ರಹಿಸಿಡುತ್ತಿದ್ದರು".[೨೬]

ಕನ್ನಡ ಹಸ್ತಪ್ರತಿ ಸೂಚೀಕಾರ್ಯ ಮಾಡಲು ತೊಡಗುವವರಿಗೆ ಮುಖ್ಯವಾಗಿ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿರುವ ಹಸ್ತಪ್ರತಿ ಕೇಂದ್ರಗಳ ಬಗ್ಗೆ ಮಾಹಿತಿ ಇರಬೇಕಾಗುತ್ತದೆ. ಏಕೆಂದರೆ ಒಂದು ಪ್ರತಿ ಒಂದು ಭಂಡಾರದಲ್ಲಿ ಅಪೂರ್ಣವಿದ್ದರೆ ಅದರ ಪೂರ್ಣಪ್ರತಿ ಹುಡುಕಲು ಹೀಗೆ ಹತ್ತಾರು ಮಾಹಿತಿಗಳನ್ನು ಕಲೆಹಾಕುವುದಕ್ಕಾಗಿ ಮತ್ತು ಯಾವ ಯಾವ ಹಸ್ತಪ್ರತಿ ಭಂಡಾರಗಳು ಎಲ್ಲೆಲ್ಲಿವೆ ? ಅವುಗಳಲ್ಲಿ ಎಷ್ಟೆಷ್ಟು ಹಸ್ತಪ್ರತಿಗಳು ಸಂಗ್ರಹಗೊಂಡಿವೆ ? ಅವು ಯಾವ ಮಾದರಿಯ ಹಸ್ತಪ್ರತಿಗಳು ? ಮುಂತಾದ ಅಗತ್ಯ ಮಾಹಿತಿಗಳು ಇವುಗಳಿಂದ ಲಭ್ಯವಾಗುತ್ತವೆ. ಸೂಚೀಕಾರ್ಯ ಮಾಡುವವರಿಗೆ ಇಂತಹ ಹಸ್ತಪ್ರತಿಗಳು ತುಂಬಾ ಪ್ರಯೋಜನಕಾರಿಯಾಗಿವೆ. ಹಸ್ತಪ್ರತಿಗಳನ್ನು ಸಂಗ್ರಹಿಸಿರುವ ಭಂಡಾರಗಳಲ್ಲಿ ಕೆಲವು ಸೂಚೀಗ್ರಂಥಗಳನ್ನು ತಯಾರಿಸಿ ಪ್ರಕಟಿಸಿದ್ದರೆ, ಆ ಸೂಚೀಗ್ರಂಥಗಳಲ್ಲಿ ಅವರು ಯಾವ ಯಾವ ವಿಧಾನಗಳನ್ನು ಅನುಸರಿಸಬೇಕು ? ಎಂಬುದನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಹಸ್ತಪ್ರತಿ ಭಂಡಾರಗಳ ಇತಿಹಾಸವನ್ನು ತಿಳಿಯುವುದು ಅಗತ್ಯವಾಗಿದೆ.

"ಭಾರತದಲ್ಲಿ ಯೂರೋಪಿಯನ್ನರು ಬಂದು ನೆಲೆಗೊಂಡು ಈ ದೇಶದ ಶಾಸನ ಸಾಹಿತ್ಯ ಕಲೆ – ಮುಂತಾದ ಸಾಂಸ್ಕೃತಿಕ ಪರಂಪರೆಗಳಲ್ಲಿ ಆಸಕ್ತಿಯನ್ನು ತಾಳಿ ಶಾಸನಾದಿ ಪ್ರಾಚ್ಯವಸ್ತು ಸಂಗ್ರಹಣದೊಂದಿಗೆ ಹಸ್ತಪ್ರತಿ ಸಂಗ್ರಹಣಕಾರ್ಯವನ್ನು ಕೈಗೊಳ್ಳುವವರೆಗೂ ಅಂದರೆ ಸುಮಾರು ೧೯ನೆಯ ಶತಮಾನದವರೆಗೂ ಭಾರತದಲ್ಲಿನ ಮಠ ಮಾನ್ಯ, ದೇವಸ್ಥಾನಗಳಲ್ಲಿ, ಪಂಡಿತರ ಆಶ್ರಯದಲ್ಲಿ ಹಸ್ತಪ್ರತಿಗಳು ಸಂಗ್ರಹಗೊಂಡು ಬಂದಿದ್ದವು. ಹೀಗೆ ಹಿಂದಿನವರು ವಿಶ್ವಾಸ ಶ್ರದ್ಧೆಗಳಿಂದ ಸಂಗ್ರಹಿಸಿಕೊಂಡು ಬಂದಿದ್ದ ಗ್ರಂಥಭಂಡಾರಗಳ ವಿಷಯದಲ್ಲಿ ನಾವು ಆಗಾಗ ತಳೆಯುತ್ತಲಿದ್ದ ಅನಾದರಣೆಯ ವಿರುದ್ಧವಾಗಿ ಯೂರೋಪಿಯನ್ನರು ಈ ಬಗ್ಗೆ ತಾಳುತ್ತಿದ್ದ ಆಸಕ್ತಿಯು ಹಸ್ತಪ್ರತಿಯ ಸಂಗ್ರಹಣಕ್ಕೆ ಹೊಸ ತಿರುವನ್ನೇ ಕೊಟ್ಟಿತು. ೧೮೯೭ರ ಹೊತ್ತಿಗೆ ಹಸ್ತಪ್ರತಿಗಳ ಸೂಚೀ ಪ್ರಕಟಿಸಿದ್ದನ್ನು ಗಮನಿಸಿದರೆ ಇದಕ್ಕೂ ಪೂರ್ವದಲ್ಲಿ ಅಂದರೆ ೧೮ನೆಯ ಶತಮಾನದ ಉತ್ತರಾರ್ಧದಲ್ಲಿಯೇ ಹಸ್ತಪ್ರತಿ ಸಂಗ್ರಹಣ ಪ್ರಾರಂಭವಾಗಿರುವುದು ಗೊತ್ತಾಗುತ್ತದೆ. ಹಸ್ತಪ್ರತಿ ಸಂಗ್ರಹಣ ಹಾಗೂ ಹಸ್ತಪ್ರತಿ ಸೂಚಿಗಳನ್ನು ರಚಿಸುವ ಈ ಕಾರ್ಯವನ್ನು ಅಂದು 'ಕ್ರಿಟಿಕಲ್ ಸ್ಕಾಲರ್ ಷಿಪ್' ಎಂದು ಗುರುತಿಸಿದ್ದರು. ಕೆಲಕಾಲ ಬಂಗಾಲದ ಏಷಿಯಾಟಿಕ್ ಸಂಸ್ಥೆಯ ಅಧ್ಯಕ್ಷರಾಗಿದ್ದ ಸರ್. ರೋಬರ್ಟ್ ಚೇಂಬರ್ಸ್‌ರವರು ೧೭೭೪ರಿಂದ ೧೭೭೯ರವರೆಗೆ ಭಾರತೀಯ ಗ್ರಂಥಗಳಲ್ಲಿ ಸಂಗ್ರಹಿಸಿ ಒಂದು ಭಂಡಾರವನ್ನೇ ರೂಪಿಸಿದ್ದರು. ಅಮೂಲ್ಯವಾದ ಈ ಸಂಗ್ರಹವನ್ನು ಪರ್ಷಿಯನ್ ಸರ್ಕಾರವು ೧೮೪೨ರಲ್ಲಿ ಖರೀದಿಸಿ ಬರ್ಲಿನ್ ಇಂಪೀರಿಯಲ್ ಲೈಬ್ರರಿ ಸಂಗ್ರಹಕ್ಕೆ ಸೇರ್ಪಡೆಗೊಳಿಸಿದ ಸಂಗತಿಯು ತಿಳಿದು ಬರುತ್ತದೆ. ಇದು ಅಷ್ಟು ಹಿಂದೆಯೇ ನಡೆದ ಹಸ್ತಪ್ರತಿ ಸಂಗ್ರಹದ ಒಂದು ನಿದರ್ಶನವಾಗಿದೆ".[೨೭]

೧೮೬೬ರಷ್ಟು ಹಿಂದೆಯೇ ಮುಂಬಯಿ ಸರ್ಕಾರವು ಹಸ್ತಪ್ರತಿಗಳನ್ನು ಕೈಗೊಳ್ಳಲು ಡಾ॥ ಬ್ಯುಲರ್ ಅವರಿಗೆ ಹಣ ಮಂಜೂರು ಮಾಡಿಕೊಡುವುದರ ಮೂಲಕ ಹಸ್ತಪ್ರತಿ ಸಂಗ್ರಹಕ್ಕೆ ಸಹಕಾರವನ್ನು ಕೊಟ್ಟಿತು. ಡಾ॥ ಬ್ಯುಲರ್ ಅವರು ೧೮೬೬ರಿಂದ ೧೮೬೮ರವರೆಗೆ ಸಂಗ್ರಹಿಸಿದ ಹಸ್ತಪ್ರತಿಗಳ ಸಂಗ್ರಹವೇ ಮುಂದೆ 'ಭಂಡಾರ್‌ಕರ್ ಓರಿಯಂಟಲ್ ರೀಸರ್ಚ್' ಸಂಸ್ಥೆಯಾಯಿತು. ಹೆಚ್ಚು ಕಡಿಮೆ ಇದೇ ಅವಧಿಯಲ್ಲಿ ಕರ್ನಾಟಕದಲ್ಲಿಯೂ ಹಸ್ತಪ್ರತಿಗಳ ಸಂಗ್ರಹ ಕಾರ್ಯ ನಡೆದುದನ್ನು ಕಾಣಬಹುದು. ಕರ್ನಾಟಕದಲ್ಲಿ ಕನ್ನಡ ಹಸ್ತಪ್ರತಿಗಳು ಮತ್ತು ಸಂಸ್ಕೃತ ಹಸ್ತಪ್ರತಿಗಳು ಹೇರಳವಾಗಿದ್ದು, ಪ್ರಾಕೃತ, ಮರಾಠಿ, ತೆಲುಗು, ತಮಿಳು, ಮಲಯಾಳಿ ಹಸ್ತಪ್ರತಿಗಳು ತುಂಬಾ ವಿರಳವಾಗಿವೆ. ಮಠಮಾನ್ಯಗಳು, ಧಾರ್ಮಿಕ ಕೇಂದ್ರಗಳು ಸಾಹಿತ್ಯಾಭ್ಯಾಸಿಗಳ ಮನೆಗಳಲ್ಲಿ ಇಂತಹ ಹಸ್ತಪ್ರತಿಗಳು ಇರುವುದನ್ನು ಗಮನಿಸಿದವರು ಕರ್ನಲ್ ಮೆಕೆಂಜೆ. "ಈತ ಭಾರತದ ವೇದ, ಪುರಾಣ, ಇತಿಹಾಸ, ವಿಜ್ಞಾನಗಳಿಗೆ ಸಂಬಂಧಿಸಿದ ಸಾಹಿತ್ಯಗಳನ್ನು ಸಂಗ್ರಹಿಸಬೇಕೆಂಬ

ಮಹತ್ವಾಕಾಂಕ್ಷೆಯಿಂದ ೧೭೯೬ ರಿಂದ ೧೮೧೧ ರವರೆಗೆ ದಕ್ಷಿಣ ಭಾರತದಲ್ಲೆಲ್ಲ ಕ್ಷೇತ್ರ ಕಾರ್ಯ ಮಾಡಿ ದೇಶೀಯ ವಿದ್ವಾಂಸರ ಸಹಾಯ ಪಡೆದು ಸಾವಿರಾರು ಹಸ್ತಪ್ರತಿ, ಪ್ರಾಚ್ಯ ವಸ್ತು ಕೈಫಿಯತ್ತು ಬಖೈರು, ರಾಜ ವಂಶಾವಳಿ ಮುಂತಾದವುಗಳನ್ನು ಸಂಗ್ರಹಿಸಿದನು. ಮೆಕೆಂಜೆ ಸಂಗ್ರಹಿಸಿದ ಕನ್ನಡ ಕೈಫಿಯತ್ತುಗಳಲ್ಲಿ ಚಾರಿತ್ರಿಕ ಮಹತ್ವವುಳ್ಳಂತಹವು, ಇದ್ದು ಪೌರಾಣಿಕ ಮಹತ್ವವುಳ್ಳಂಥವು ಗಮನಾರ್ಹವಾಗಿವೆ".[೨೮]

"ಚಾವಲಿ ಬೋರಯ್ಯ, ವೆಂಕಟಲಕ್ಷ್ಮಯ್ಯ, ಧರ್ಮಯ್ಯ ನಾರಾಯಣರಾವ್ ಮತ್ತು ರಾಮದಾಸ್ ಇವರೆಲ್ಲ ಮೆಕೆಂಜಿಯವರಿಗೆ ಸಹಾಯಮಾಡಿದರು ಸುಮಾರು ೩೮ ವರ್ಷಗಳ ದೀರ್ಘ ಅವಧಿಯವರೆಗೆ ಕೃಷ್ಣೆಯಿಂದ ಕನ್ಯಾಕುಮಾರಿಯವರೆಗೆ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಮಾಡಿ ೧೩ ಭಾಷೆಗಳ ೧೫೬೮ ಹಸ್ತಪ್ರತಿಗಳ ದೊಡ್ಡ ಸಂಗ್ರಹವೇ ಈತನಿಂದಾಯಿತು. ಇವುಗಳಲ್ಲಿ ಕನ್ನಡದ ಹಸ್ತಪ್ರತಿಗಳು ಕೆಲವೇ ಇದ್ದರೂ ಕೂಡಾ ಕನ್ನಡ ಹಸ್ತಪ್ರತಿ ಸಂಗ್ರಹಕ್ಕೆ ಸೇರ್ಪಡೆಯಾದ ಈ ಮೆಕೆಂಜೆ ಸಂಗ್ರಹವೇ ಪ್ರಥಮ ಸಾರ್ವಜನಿಕ ಹಸ್ತಪ್ರತಿ ಭಂಡಾರವಾಯಿತು. ಎಂದು ಹೆಚ್. ದೇವೀರಪ್ಪನವರು ಹೇಳುತ್ತಾರೆ"[೨೯] ಮೆಕೆಂಜಿಯವರ ನಂತರ ಸಿ.ಪಿ. ಬ್ರೌನ್ ಮೊದಲಾದವರು ಇದನ್ನು ಮುಂದುವರಿಸಿದರು.

೧೮೮೦ರಲ್ಲಿ ಮೈಸೂರಿನ ಪ್ರಾಚ್ಯ ವಸ್ತು ಸಂಶೋಧನಾಲಯ ಬಿ.ಎಲ್. ರೈಸ್‌ರಿಂದ ಸ್ಥಾಪನೆಯಾಯಿತು. ಬಿ.ಎಲ್.ರೈಸ್‌ರು ನಾಡಿನ ಮೂಲೆ ಮೂಲೆಗಳಿಗೆ ಹೋಗಿ ಕನ್ನಡ – ಸಂಸ್ಕೃತ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಶಬ್ದಾನುಶಾಸನ, ಪಂಪಭಾರತ ಮುಂತಾದ ಶ್ರೇಷ್ಠ ಗ್ರಂಥಗಳು ಇವರ ಕಾಲದಲ್ಲೇ ಪ್ರಕಟಗೊಂಡವು.

ಕ್ರಿ.ಶ. ೧೮೯೧ರಲ್ಲಿ ಸ್ಥಾಪಿತವಾದ ಮೈಸೂರು ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯೇ ಕರ್ನಾಟಕದಲ್ಲಿ ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದ ಸರ್ಕಾರದ ಮೊದಲ ಸಂಸ್ಥೆಯಾಯಿತು. ಇದನ್ನು ಬಿಟ್ಟರೆ ೧೯೩೯ರಲ್ಲಿ ಸ್ಥಾಪನೆಯಾದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಈ ರೀತಿಯ ಕೆಲಸವನ್ನು ಮಾಡಿದ ಮತ್ತೊಂದು ಸಂಸ್ಥೆ. ಆನಂತರ ಸರ್ಕಾರದ ಪರವಾಗಿ ಹಸ್ತಪ್ರತಿ ಸಂಗ್ರಹಣ ಮಾಡಿದ ಇನ್ನೊಂದು ಸಂಸ್ಥೆಯೆಂದರೆ ರಾಜ್ಯ ಪ್ರಾಚ್ಯ ವಸ್ತು ಸಂಗ್ರಹಾಲಯ. ಮುಂದೆ ಸರ್ಕಾರಿ ಸಂಗ್ರಹಗಳು ಸಾರ್ವಜನಿಕ ಸಂಗ್ರಹಗಳಾಗಿ ಪರಿವರ್ತಿತವಾದವು. ಮೈಸೂರಿನಲ್ಲಿರುವ ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯು ಮೈಸೂರು ವಿಶ್ವವಿದ್ಯಾಲಯದ ಭಾಗವಾಗಿ ಅನಂತರ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬೆಳೆದು ಬಂದಿತು. ೧೯೬೭ರಲ್ಲಿ ಸಮಗ್ರ ವಚನ ವಾಙ್ಮಯ ಸಂಗ್ರಹ, ಸಂಸ್ಕರಣ ಮತ್ತು ಪ್ರಕಟಣೆ ಯೋಜನೆಯ ಅಂಗವಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸಲು ತೊಡಗಿದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಮತ್ತು ಸಾರ್ವಜನಿಕ ಸಂಸ್ಥೆಗಳಾದ ಕನ್ನಡ ಸಾಹಿತ್ಯ ಪರಿಷತ್ತು. ಬಸವ ಸಮಿತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮತ್ತು ವೀರಶೈವ

ಮಠಗಳು, ಜೈನ ಮಠಗಳು ಇನ್ನೂ ಹಲವಾರು ಸಂಸ್ಥೆಗಳು ಹಸ್ತಪ್ರತಿಗಳ ಸಂಗ್ರಹ ಕಾರ್ಯವನ್ನು ಕೈಗೊಂಡಿವೆ.

ಕನ್ನಡ ಹಸ್ತಪ್ರತಿಗಳ ಸಂಗ್ರಹ ಕಾರ್ಯ ಕರ್ನಾಟಕದ ದಕ್ಷಿಣ ಭಾಗದಲ್ಲಿ ನಡೆದಷ್ಟು ವಿಪುಲವಾಗಿ ಉತ್ತರಭಾಗದಲ್ಲಿ ನಡೆದಿರುವುದಿಲ್ಲ. ಉತ್ತರ ಭಾಗದಲ್ಲಿ ಮಹನೀಯರು ವೈಯಕ್ತಿಕ ಸಂಗ್ರಹ ಕಾರ್ಯ ಕೈಗೊಂಡು ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಅವರಲ್ಲಿ ಫ.ಗು.ಹಳಕಟ್ಟಿ, ಡಾ॥ ಎಸ್.ಸಿ. ನಂದೀಮಠ, ಪ್ರೊ॥ ಜಿ.ಎಂ. ಉಮಾಪತಿ ಶಾಸ್ತ್ರಿಗಳು, ಲಿಂಗಸುಗೂರಿನ ಗೊರೆಬಾಳ ಹನುಮಂತರಾಯರು, ಇವರೆಲ್ಲರು ಪ್ರಮುಖರು. ಒಂದು ಸಂಸ್ಥೆ ಮಾಡಬಹುದಾದಷ್ಟು ಕಾರ್ಯವನ್ನು ಈ ಮಹಾನುಭಾವರು ಕ್ಷೇತ್ರಕಾರ್ಯದ ಮೂಲಕ ಮಾಡಿದ್ದಾರೆ; ಹಸ್ತಪ್ರತಿಗಳ ಸಂಗ್ರಹಕ್ಕೆ ದುಡಿದಿದ್ದಾರೆ.

"ನಾಡಿನ ಈ ಸಂಸ್ಥೆಗಳಂತೆ ಹೊರನಾಡಿನ ಸಂಸ್ಥೆಗಳಾದ ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಠ, ಮಹಾರಾಷ್ಟ್ರದ ಬಾಹುಬಲಿ ಆಶ್ರಮ, ಬಿಹಾರದ ಆರಾದಲ್ಲಿನ ಜೈನ ಸಿದ್ಧಾಂತ ಭವನ, ಮದ್ರಾಸ್ ವಿಶ್ವವಿದ್ಯಾನಿಲಯದ ಪ್ರಾಚೀನ ಹಸ್ತಪ್ರತಿ ಭಂಡಾರ, ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯ ಮೊದಲಾದವು ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದು ಸ್ಮರಣೀಯವಾಗಿದೆ"[೩೦]

ಕನ್ನಡ ಗ್ರಂಥ ಸಂಪಾದನೆಗೆ ವಿದ್ವಾಂಸರ ಕೊಡುಗೆ

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ, ಸಂಪಾದಿಸಿದ ಹಸ್ತಪ್ರತಿಗಳಲ್ಲಿ ಅಡಗಿರುವ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಒದಗಿಸಬೇಕಾದುದು ಅತಿ ಮುಖ್ಯವಾದ ಕೆಲಸವಾಗಿದೆ. "ಪಾಶ್ಚಾತ್ಯರ ಸಂಪರ್ಕದಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಆರಂಭವಾದ ಅನೇಕ ಶಾಸ್ತ್ರೀಯ ಅಧ್ಯಯನಗಳಲ್ಲಿ ಗ್ರಂಥಸಂಪಾದನೆಯೂ ಒಂದು. ೧೮ ಮತ್ತು ೧೯ನೇ ಶತಮಾನಗಳಲ್ಲಿ ಪಾಶ್ಚಾತ್ಯ ವಿದ್ವಾಂಸರನೇಕರು ಕನ್ನಡ ನಾಡಿನಾದ್ಯಂತ ಚದುರಿ ಬಿದ್ದಿದ್ದ ಅನೇಕ ಸಾಹಿತ್ಯ ಕೃತಿಗಳನ್ನು ಹಸ್ತಪ್ರತಿಗಳಿಂದ ಆಯ್ದು, ಅವುಗಳ ಪಾಠವನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ರೆವರೆಂಡ್ ಕಿಟೆಲ್ ಸಂಪಾದಿಸಿದ. 'ಶಬ್ದಮಣಿದರ್ಪಣ', 'ಛಂದೋಬುಂಧಿ', 'ಕನ್ನಡ ಪಂಚತಂತ್ರ' ಗ್ಯಾರೆಟ್‌ನ 'ಶಬ್ದಮಣಿದರ್ಪಣ' ಮತ್ತು ಬಿ.ಎಲ್. ರೈಸ್‌ರವರು 'ಬಿಬ್ಲಿಯಾಥೆಕಾ ಕರ್ನಾಟಿಕಾ' ಮಾಲೆಯಲ್ಲಿ ಪ್ರಕಟಿಸಿದ 'ಕರ್ನಾಟಕ ಭಾಷಾಭೂಷಣ', 'ಶಬ್ದಾನುಶಾಸನ', 'ಪಂಪ ರಾಮಾಯಣದ ಪರಿಷ್ಕರಣೆ', 'ಕವಿರಾಜಮಾರ್ಗ' ಹಾಗೂ 'ಪಂಪಭಾರತ' ಮುಂತಾದವು ಪಾಶ್ಚಾತ್ಯ ವಿದ್ವಾಂಸರ ನಿಶಿತವಾದ ಗ್ರಂಥ ಸಂಪಾದನಾಶಾಸ್ತ್ರ ಪರಿಣಿತಿಗೆ ಉತ್ತಮ ಉದಾಹರಣೆಗಳು. ಆದರೆ ಇವರೆಲ್ಲರಿಗಿಂತ ಮೊದಲೇ ಅಂದರೆ ೧೮೪೮ರಷ್ಟು ಹಿಂದೆಯೇ 'ಬಿಬ್ಲಿಯಾಥೆಕಾ

ಕರ್ನಾಟಿಕಾ' ಎಂಬ ಮಾಲೆಯನ್ನು ಆರಂಭಿಸಿ 'ಜೈಮಿನಿ ಭಾರತ', 'ತೊರವೆರಾಮಾಯಣ', 'ದಾಸರ ಪದಗಳು', 'ಹರಿಭಕ್ತಿಸಾರ', 'ಕುಮಾರವ್ಯಾಸ ಭಾರತ', 'ಬಸವಪುರಾಣ', 'ಚೆನ್ನಬಸವ ಪುರಾಣ' ಮುಂತಾದ ಕೃತಿಗಳನ್ನು ಪ್ರಕಟಿಸಿದಾತ ಹೆರ್ಮನ್ ಮೊಗ್ಲಿಂಗ್. ಹಾಗಾಗಿ ಮೋಗ್ಲಿಂಗನೇ ಹೊಸಗನ್ನಡದ ಆದ್ಯ ಗ್ರಂಥ ಸಂಪಾದಕ".[೩೧]

ಪಾಶ್ಚಾತ್ಯ ವಿದ್ವಾಂಸರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ ಅನೇಕ ದೇಶೀಯ ವಿದ್ವಾಂಸರು ಸಂಪಾದನಾ ಕಾರ್ಯವನ್ನು ಮುಂದುವರೆಸಿಕೊಂಡು ಬಂದರು. ಅವರಲ್ಲಿ ಆರ್.ನರಸಿಂಹಾಚಾರ್ಯರು ಪ್ರಮುಖರು. "ಆರ್.ನರಸಿಂಹಾಚಾರ್ಯರು ಸಂಶೋಧನಾ ಕಾರ್ಯ ಪ್ರಾರಂಭಿಸಿದ್ದು ೧೮೯೫ರಲ್ಲಿ. ಅವರ ಮೇಲಧಿಕಾರಿಗಳಾಗಿದ್ದ ಲೂಯಿರೈಸ್‌ರವರು ಕೈಗೊಂಡಿದ್ದ 'ಪಂಪಭಾರತ'ದ ಪರಿಷ್ಕರಣ ಕಾರ್ಯದಲ್ಲಿ, ಆ ಸಂಬಂಧವಾದ ಪಾಠ ಪರಿಷ್ಕರಣ ಮತ್ತು ಕರಡು ತಿದ್ದುವಿಕೆಯ ಬಹುಭಾಗ ಆರ್.ನರಸಿಂಹಾಚಾರ್ಯರಿಂದಲೇ ನಡೆಯಿತು. ಅವರ ಗ್ರಂಥಸಂಪಾದನಾ ಶಕ್ತಿ ನಿಜವಾಗಿ ಬೆಳಕಿಗೆ ಬಂದದ್ದು ೧೯೦೨ರಲ್ಲಿ ಅವರು ಸಂಪಾದಿಸಿದ ಎರಡನೇ ನಾಗವರ್ಮನ 'ಕಾವ್ಯಾವಲೋಕನ' ಮತ್ತು 'ಕರ್ನಾಟಕ ಭಾಷಾ ಭೂಷಣ' ಎಂಬ ಗ್ರಂಥಗಳನ್ನು ಅವರು ಸಂಪಾದಿಸಿ ಪ್ರಕಟಿಸಿದಾಗ. ಅವರು ೧೯೦೬ರಿಂದ ೧೯೨೨ರವರೆಗೆ ಸಂಶೋಧನೆ ನಡೆಸಿದ ಫಲವಾಗಿ ಸುಮಾರು ೫೦೦೦ ಶಾಸನಗಳು, ೪೦೦೦ ನಾಣ್ಯಗಳು, ೧೦೦ ಕನ್ನಡ ಸಂಸ್ಕೃತ ಗ್ರಂಥಗಳು ಪ್ರತಿಮಾಡಲ್ಪಟ್ಟವು. ಅವರು ಸಂಪಾದಿಸಿದ 'ಲೋಕ ವಿಭಾಗ' ಮತ್ತು 'ಕಲ್ಯಾಣಕಾರಕ' ವಿಶೇಷ ಗಮನವನ್ನು ಸೆಳೆಯುತ್ತವೆ. ಕನ್ನಡ ಗ್ರಂಥಸಂಪಾದನಾ ದೃಷ್ಟಿಯಿಂದ ಅವರ 'ಕರ್ನಾಟಕ ಕವಿಚರಿತೆ'ಯ ಮೂರು ಸಂಪುಟಗಳು ಬಹು ಚಿರಸ್ಮರಣೀಯ".[೩೨]

"ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಕಾರ್ಯ ಪ್ರವೃತ್ತರಾಗಿ ಅನೇಕ ಹಳಗನ್ನಡ ಗ್ರಂಥಗಳನ್ನು ತಮ್ಮ 'ಕರ್ನಾಟಕ ಕಾವ್ಯಮಂಜರಿಯ ಮೂಲಕ ಬೆಳಕಿಗೆ ತಂದ ಮಹನೀಯರು ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ.ನರಸಿಂಹಾಚಾರ್ಯರು. ಅವರು ಆರ್.ನರಸಿಂಹಾಚಾರ್ಯರಿಗೆ ಸ್ನೇಹಿತರಾಗಿ ತೆರೆಮರೆಯಲ್ಲಿ ನಿಂತುಕೊಂಡು. ಆ ಕ್ಷೇತ್ರಕ್ಕೆ ತಮ್ಮ ವಿದ್ವತ್ತನ್ನು ಧಾರೆಯೆರೆದರು. ಇದೇ ಕ್ಷೇತ್ರದಲ್ಲಿ ಗಮನಾರ್ಹವಾಗಿ ದುಡಿದ ಬಿ.ಮಲ್ಲಪ್ಪನವರ ಹೆಸರನ್ನು ಮರೆಯುವಂತಿಲ್ಲ. ಕರ್ನಾಟಕದ ಉತ್ತರಭಾಗದಲ್ಲಿ ಗಂಗಾಧರ ಮಡಿವಾಳೇಶ್ವರ ತುರಮುರಿ, ಮು.ಪ್ರ.ಪೂಜಾರರು ಹಳಗನ್ನಡ ಸಾಹಿತ್ಯದಲ್ಲಿ ಪ್ರವೇಶ ಮಾಡಿದ್ದರು".[೩೩]

ಎಸ್.ಜಿ.ನರಸಿಂಹಾಚಾರ್ಯರು ಮತ್ತು ಎಂ.ಎ.ರಾಮಾನುಜಯ್ಯಂಗಾರರು ಒಡಗೂಡಿ ಮೂರು ವರ್ಷಗಳಕಾಲ ಕನ್ನಡನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಓಲೆಗರಿ

ಪ್ರತಿಗಳನ್ನು ಸಂಗ್ರಹಿಸಿ 'ಕರ್ನಾಟಕ ಕಾವ್ಯಮಂಜರಿ' ಮತ್ತು 'ಕರ್ನಾಟಕ ಕಾವ್ಯಕಲಾನಿಧಿ' ಮಾಸ ಪತ್ರಿಕೆಗಳ ಮೂಲಕ ಪ್ರಕಟಿಸುತ್ತಾ ಬಂದ ಕಾಲದಲ್ಲೆ ಚನ್ನಪ್ಪ ಉತ್ತಂಗಿ ಅವರು 'ಸರ್ವಜ್ಞನ ವಚನಗಳನ್ನು' ಸಂಗ್ರಹಿಸಿ ಪ್ರಕಟಿಸಿದರು. ಗ್ರಂಥಸಂಪಾದನೆಗೆ ಕೆ.ಜಿ. ಕುಂದಣಗಾರ್, ಡಿ.ಎನ್.ನರಸಿಂಹಾಚಾರ್ಯ, ಎನ್.ಬಸವಾರಾಧ್ಯರ ಸೇವೆ ಮರೆಯುವಂತಿಲ್ಲ.

೧೯೧೯ರಿಂದ ೧೯೨೬ರವರೆಗೆ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ರೀಸರ್ಚ್ ಸ್ಕಾಲರ್ ಆಗಿ ಕೆಲಸ ಮಾಡುವ ಸಮಯದಲ್ಲಿ ಡಾ॥ ಎ.ಆರ್.ಕೃಷ್ಣಶಾಸ್ತ್ರಿಯವರು 'ಕೆಳದಿ ನೃಪ ವಿಜಯ', 'ಧರ್ಮಾಮೃತ', 'ಹರಿಶ್ಚಂದ್ರಕಾವ್ಯ ಸಂಗ್ರಹ', 'ಕವಿ ಜಿಹ್ವಾಬಂಧನ' ಎಂಬ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದರು.

ಶಿ.ಶಿ.ಬಸವನಾಳರು "ಬಸವಣ್ಣನವರ ವಚನಗಳು" 'ಚಾಮರಸನ ಪ್ರಭುಲಿಂಗ ಲೀಲೆ', 'ಹರಿಹರನ ರಕ್ಷಾಶತಕ – ಪಂಪಾಶತಕ' ವಿರೂಪಾಕ್ಷ ಪಂಡಿತನ 'ಚೆನ್ನಬಸವಪುರಾಣ' ಷಡಕ್ಷರ ಕವಿಯ 'ಶಬರ ಶಂಕರ ವಿಳಾಸ' ಮುಂತಾದ ಗ್ರಂಥಗಳನ್ನು ಸಂಪಾದಿಸಿಕೊಟ್ಟರು.

ಗ್ರಂಥಸಂಪಾದನೆ ಮತ್ತು ಹಸ್ತಪ್ರತಿಶಾಸ್ತ್ರ

"ಗ್ರಂಥ ಸಂಪಾದನೆ ಶ್ರಮ ಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳೂ ಕಾಲ ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದು ಬಿಡುತ್ತಿದ್ದುದೂ ಉಂಟು. ಕಾಲಕ್ರಮದಲ್ಲಿ ಅವು ಮೂಲದ ಅಂಗವೊ ಎಂಬಂತೆ ಸೇರಿಬಿಡುತ್ತಿದ್ದವು. ಪ್ರತಿಭಾವಂತರೂ, ವ್ಯುತ್ಪನ್ನಮತಿಗಳೂ, ಕಾವ್ಯರಚನಾ ಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿ ಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು; (ಒಂದು ವೇಳೆ ವಾಸ್ತವವಾಗಿ ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ!) ಒಟ್ಟಿನಲ್ಲಿ ಅನಾವಶ್ಯಕವಾಗಿ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿದೋರಿದಂತೆ ಅಥವಾ ಸೂಕ್ತ ಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ

ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದುಹೋಗುತ್ತವೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮ ಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದು ಬಂದಿದೆ.

ಹಲವಾರು ಸಾಹಿತ್ಯ ಮತ್ತು ಶಾಸ್ತ್ರ ಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ, ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ, ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ ಅವುಗಳ ಸಾಹಿತ್ಯಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ವ್ಯಾಖ್ಯಾನಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು ಅರ್ಥಕೋಶವನ್ನು ಒದಗಿಸಿ ಬೆಳಕಿಗೆ ತರುವುದೇ ಗ್ರಂಥ ಸಂಪಾದನೆ".[೩೪] ಒಟ್ಟಾರೆ ಹೇಳುವುದಾದರೆ ಹಸ್ತಪ್ರತಿಗಳಲ್ಲಿರುವ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸುವುದು ಗ್ರಂಥಸಂಪಾದನಾ ಶಾಸ್ತ್ರವಾಗಿದೆ.

ಹಸ್ತಪ್ರತಿಗಳನ್ನೇ ಆಧಾರವಾಗಿಟ್ಟುಕೊಂಡು ಹಸ್ತಪ್ರತಿಯ ಬರೆವಣಿಗೆ, ಬರಹದ ವೈಶಿಷ್ಟ್ಯ, ಚಿತ್ರಗಳು, ತಾಳೆಕಟ್ಟಿನ ವಿಶೇಷತೆ, ಲಿಪಿಯ ವಿನ್ಯಾಸ ಮತ್ತು ಗ್ರಂಥ ಸಂಪಾದನಾ ರೀತಿ, ಪ್ರಾರಂಭ – ಮುಕ್ತಾಯಗಳು, ಪ್ರತಿ ದೊರೆತ ಸ್ಥಳ, ಪ್ರತಿಕಾರರ ವಿವರ, ಅದು ಪೂರ್ಣ ಪ್ರತಿಯೇ – ಅಪೂರ್ಣ ಪ್ರತಿಯೇ, ಅದು ಏಕೈಕ ಪ್ರತಿಯೇ – ಬಹುಪ್ರತಿಯೇ, ಆ ಗ್ರಂಥ ಅಚ್ಚಾಗಿದೆಯೇ – ಇಲ್ಲವೇ ? ಕವಿಚರಿತ್ರೆಯಲ್ಲಿ ಉಲ್ಲೇಖಿತವೇ ಇಲ್ಲವೇ ? ಆ ಪ್ರತಿಯಲ್ಲಿರುವ ಇತರೆ ಗ್ರಂಥಗಳು – ಮುಂತಾದ ಅಂಶಗಳನ್ನು ಕುರಿತು ಅಧ್ಯಯನ ಮಾಡುವುದನ್ನು ಹಸ್ತಪ್ರತಿಶಾಸ್ತ್ರ ಎಂದು ಕರೆಯಲಾಗುವುದು.

ಹಸ್ತಪ್ರತಿಶಾಸ್ತ್ರವನ್ನು ಮುಖ್ಯವಾಗಿ ಐದು ಅಂಗಗಳಾಗಿ ಎಂ.ಎಂ. ಕಲ್ಬುರ್ಗಿಯವರು ವಿಂಗಡಿಸಿದ್ದಾರೆ.[೩೫]

೧) ಉತ್ಪಾದನ : ಕೃತಿ – ಪ್ರತಿ – ಕಟ್ಟು, ಲೇಖನ ಸಾಮಗ್ರಿ, ತಾಳೆಗರಿ – ಕಾಗದ – ಅರಿವೆ, ಹಲಗೆ – ಚರ್ಮ, ಕಂಠ – ಲೇಖನಿ, ಕಪ್ಪು – ಮಸಿ – ಬಳಪ, ಲಿಪಿಗಾರ – ಲಿಪಿ – ಭಾಷೆ, ಗ್ರಂಥ ವಿನ್ಯಾಸ.

೨) ಪ್ರಸರಣ : ವೈದಿಕ – ಜೈನ – ವೀರಶೈವ ಪ್ರಾಚೀನ ಹಸ್ತಪ್ರತಿ ಭಂಡಾರಗಳು : ಜೈನ ಹಸ್ತಪ್ರತಿ ಭಂಡಾರಗಳೂ – ವೀರಶೈವ ಹಸ್ತಪ್ರತಿ ಭಂಡಾರಗಳು – ಕನ್ನಡ ಹಸ್ತಪ್ರತಿಗಳ ವಿಷಯ ಸಂಪತ್ತು.

೩) ಸಂಗ್ರಹಣ : ಸಂಗ್ರಹ ವಿಧಾನ – ಸಂಗ್ರಹದ ಇತಿಹಾಸ – ಆಧುನಿಕ ಹಸ್ತಪ್ರತಿ ಸೂಚಿಗಳು.

೪) ವ್ಯವಸ್ಥಾಪನ : ಆಕರಣ ವಿಭಾಗ – ತಾಂತ್ರಿಕ ವಿಭಾಗ – ಸಂಪತ್ತು ವಿಭಾಗ – ಗ್ರಂಥ ಸಂಪಾದನ ವಿಭಾಗ – ಗ್ರಂಥ ಪರಿಚಲ ವಿಭಾಗ – ಅಧ್ಯಯನ ವಿಭಾಗ – ಗ್ರಂಥಾಲಯ ವಿಭಾಗ – ಯಂತ್ರೋಪಕರಣ ವಿಭಾಗ – ಪ್ರದರ್ಶನ ವಿಭಾಗ – ಸಮಾಲೋಚನ – ವಿಭಾಗ – ಸಭಾಗೃಹ ವಿಭಾಗ – ವಿಶ್ರಾಂತಿ ವಿಭಾಗ.

೫) ಪ್ರಯೋಜನ : ಮುಂದೇನು ? ಸಂಗ್ರಹಣ – ಸಂರಕ್ಷಣೆ – ಹಸ್ತಪ್ರತಿಶಾಸ್ತ್ರದ ಅಳವಡಿಕೆ – ಗ್ರಂಥ. ಸಂಪಾದನ ಪ್ರಶಸ್ತಿ ಸಂಗ್ರಹ – ಹಸ್ತಪ್ರತಿ ಭಂಡಾರದ ನವೀಕರಣ – ಹಸ್ತಪ್ರತಿ ಅಧ್ಯಯನ ತರಬೇತಿ – ರಾಜ್ಯ ಹಸ್ತಪ್ರತಿ ಇಲಾಖೆಯ ಸ್ಥಾಪನೆ.

ವರ್ಣನಾತ್ಮಕ ಹಸ್ತಪ್ರತಿ ಸೂಚಿಯಲ್ಲಿ ಗ್ರಂಥಸಂಪಾದನೆಗೆ ಮತ್ತು ಹಸ್ತಪ್ರತಿಶಾಸ್ತ್ರಕ್ಕೆ ಎರಡಕ್ಕೂ ಉಪಯುಕ್ತವಾದ ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ. ಹಸ್ತಪ್ರತಿಯಲ್ಲಿರುವ ವಸ್ತುವಿಷಯ, ಕಾವ್ಯವನ್ನು ಕುರಿತು ಸೂಚಿಯಲ್ಲಿ ವಿಷಯವನ್ನು ಯಾವ ರೀತಿ, ಎಷ್ಟರ ಮಟ್ಟಿಗೆ ಹೇಳಿದೆ ಎಂಬುದನ್ನು ಗಮನಿಸಿದಾಗ, ಆದಿ–ಅಂತ್ಯ ಪುಷ್ಪಿಕೆಗಳು ಗ್ರಂಥ ಸಂಪಾದನಾ ಶಾಸ್ತ್ರಕ್ಕೆ ನೆರವಾದರೆ ಪ್ರತಿಯ ವಿವರಗಳು ಆಕಾರ, ಗಾತ್ರ, ಚಿತ್ರಗಳನ್ನು ಒಳಗೊಂಡಿರುವಿಕೆ, ಅದಕ್ಕೆ ಪೋಣಿಸಿದ ದಾರ, ಕಟ್ಟು ರಟ್ಟು ಇತ್ಯಾದಿ ವಿವರಗಳು ವರ್ಣನಾತ್ಮಕ ಸೂಚಿಯಲ್ಲಿ ನಮೂದಿಸಿದ ಸಂಗತಿಗಳು ಹಸ್ತಪ್ರತಿಶಾಸ್ತ್ರಕ್ಕೆ ನೆರವಾಗುತ್ತವೆ.

ಆದ್ದರಿಂದ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳನ್ನು ಸಿದ್ಧಪಡಿಸುವಾಗ, ಗ್ರಂಥಸಂಪಾದನಾಶಾಸ್ತ್ರದ ದೃಷ್ಟಿ ಮತ್ತು ಹಸ್ತಪ್ರತಿಶಾಸ್ತ್ರದ ದೃಷ್ಟಿ ಎರಡನ್ನೂ ಒಳಗೊಂಡಿರಬೇಕಾಗುತ್ತದೆ. ಈ ಎರಡೂ ದೃಷ್ಟಿಗಳು ಎಷ್ಟರ ಮಟ್ಟಿಗೆ ಇದುವರೆವಿಗೆ ವರ್ಣನಾತ್ಮಕ ಸೂಚಿಗಳಲ್ಲಿ ಅಡಕವಾಗಿವೆ ಎಂಬುದನ್ನು ಹಸ್ತಪ್ರತಿಸೂಚಿಗಳ ಐತಿಹಾಸಿಕ ಅಧ್ಯಯನದಿಂದ ತಿಳಿಯಬಹುದಾಗಿದೆ ಅಥವಾ ಕಾಲಾನುಕ್ರಮಣಿಕೆಯಲ್ಲಿ ಅಧ್ಯಯನ ಮಾಡುವುದರಿಂದ ತಿಳಿಯಬಹುದಾಗಿದೆ.

ಹಸ್ತಪ್ರತಿ ಸೂಚಿಗಳನ್ನು ಸಿದ್ಧಪಡಿಸುವಾಗ ಗ್ರಂಥಸಂಪಾದನೆ ಮಾಡಿದ ಕೃತಿಗಳಲ್ಲಿ ಸಂಪಾದನಾಕಾರರು ಹಸ್ತಪ್ರತಿಗಳ ಬಗ್ಗೆ ಶಾಸ್ತ್ರೀಯವಾಗಿ ವಿವೇಚಿಸಿರುತ್ತಾರೆ. ಅಂತೆಯೇ ಹಸ್ತಪ್ರತಿ ಶಾಸ್ತ್ರಕಾರರು ಹಸ್ತಪ್ರತಿಯಲ್ಲಿರುವ ವಿಷಯದ ಹೊರಗಿನ ಹಸ್ತಪ್ರತಿಯ

ಸ್ವರೂಪವನ್ನು, ವೈಶಿಷ್ಟ್ಯಗಳನ್ನು ಚರ್ಚಿಸಿರುತ್ತಾರೆ. ಈ ಎಲ್ಲ ಅಂಶಗಳು ಹಸ್ತಪ್ರತಿ ಸೂಚೀ ನಿರ್ಮಾಣಕಾರರು ಗಮನಿಸಬೇಕಾದ ಅಂಶಗಳಾಗಿವೆ. ಆದ್ದರಿಂದ ಸೂಚೀ ನಿರ್ಮಾಣದ ಹಿನ್ನೆಲೆಯಾಗಿ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥ ಸಂಪಾದನೆಗಳನ್ನು ಕುರಿತು ಇಲ್ಲಿ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ.

ಅಡಿ ಟಿಪ್ಪಣಿಗಳು

---

೧. ಹೆಚ್. ದೇವೀರಪ್ಪ – ಹಸ್ತಪ್ರತಿಶಾಸ್ತ್ರ – ಪುಟ : ೧೦

೨. ಟಿ.ವಿ. ವೆಂಕಟಾಚಲಶಾಸ್ತ್ರಿ – ಗ್ರಂಥ ಸಂಪಾದನಾ ಪರಿಭಾಷಾ ಕೋಶ – ಪುಟ : ೬೧

೩. ಬಿ.ಕೆ. ಹಿರೇಮಠ – ಕನ್ನಡ ಹಸ್ತಪ್ರತಿಗಳು ; ಒಂದು ಅಧ್ಯಯನ – ಪುಟ : ೭–೮

೪. ಆಕ್ಸ್‌ಫರ್ಡ್ ನಿಘಂಟಿನ ಇನ್ನೊಂದು ಮುದ್ರಣ ಪ್ರತಿಯಲ್ಲಿ ಹೀಗಿದೆ :

MANUSCRIPT :

1. Thing written by hand, not typed or printed.
2. Authors work when written or typed (that is not yet a printed book)

P-759, Oxford advanced learner's dictionary, 1994 Pub : Oxford University Press, Calcutta.

೫. ಎನ್ ಸೈಕ್ಲೋಪೀಡಿಯಾ ಬ್ರಿಟಾನಿಕಾ ಸಂಪುಟ – ೧೩, ಪುಟ – ೨೭೭

೬. ಎಂ.ಎಂ. ಕಲ್ಬುರ್ಗಿ – ಕನ್ನಡ ಹಸ್ತಪ್ರತಿಶಾಸ್ತ್ರ – ಪುಟ : ೨

೭. ಎಂ.ಎಸ್. ಕತ್ರೆ – ಭಾರತೀಯ ಗ್ರಂಥ ಸಂಪಾದನಾಶಾಸ್ತ್ರ – ಪುಟ – ೧೬

೮. ಡಾ॥ ಎಸ್.ಎಸ್. ಅಂಗಡಿ – ಕನ್ನಡ ಹಸ್ತಪ್ರತಿ ರಚನೆ ಭಾಷಿಕ ವಿವೇಚನೆ – ಪುಟ : ೩೭

೯. ಉದಾಹರಣೆಗೆ 'ಪೊನ್ನನ ಶಾಂತಿಪುರಾಣ'ವನ್ನು ಅತ್ತಿಮಬ್ಬೆ ಲಿಪಿಕಾರರಿಂದ ೧೦೦೦ ಪ್ರತಿಗಳನ್ನು ಮಾಡಿಸಿದ್ದಳು ಎಂಬುದನ್ನು ಇಲ್ಲಿ ಸ್ಮರಿಸಬಹುದು.

೧೦. "ತಪ್ಪು ಬರೆದವ ಕಡುಜಡ ನಪ್ಪಾತಂ ಬರೆದನೆಂದು ಬಯ್ಯಲ್‌ಬೇಡಿ ತಪ್ಪಕ್ಕು ಶುದ್ಧಮಕ್ಕು ತಪ್ಪುಳ್ಳಚಿ ತಿದ್ದಿ ಕೊಂಬುದುತ್ತಮ ಪುರುಷರ್".

೧೧. ಹೆಚ್. ದೇವೀರಪ್ಪ – ಮೈಸೂರು ವಿದ್ಯಾಲಯದ ಹಸ್ತಪ್ರತಿ ಸೂಚಿ – ಪೀಠಿಕೆ – ಸಂಪುಟ – ೧ ಪುಟ ಸಂಖ್ಯೆ : vii ಮತ್ತು ix

೧೨. ಡಾ॥ ಟಿ.ವಿ.ವೆಂಕಟಾಚಲಶಾಸ್ತ್ರಿ – ಹಸ್ತಪ್ರತಿ ವ್ಯಾಸಂಗ – ೫ – ಲೇ : ಹಸ್ತಪ್ರತಿಗಳ ಅಧ್ಯಯನದ ಅವಶ್ಯಕತೆ ಮತ್ತು ಮಹತ್ವ – ಪುಟ : ೧೧

೧೩. ನಾ. ಗೀತಾಚಾರ್ಯ – ಹಸ್ತಪ್ರತಿಶಾಸ್ತ್ರ ವಿವೇಚನೆ – ಪುಟ : ೪೨

೧೪. ಹೆಚ್. ದೇವೀರಪ್ಪ – ಕನ್ನಡ ಹಸ್ತಪ್ರತಿಗಳ ಇತಿಹಾಸ – ಪುಟ : ೧೭ ಮತ್ತು ೧೯

೧೫. ಹೆಚ್. ದೇವೀರಪ್ಪ – ಕನ್ನಡ ಹಸ್ತಪ್ರತಿಗಳ ಇತಿಹಾಸ – ಪುಟ : ೩೬

೧೬. ಟಿ.ವಿ. ವೆಂಕಟಾಚಲಶಾಸ್ತ್ರಿ – ಗ್ರಂಥ ಸಂಪಾದನಾ ಪರಿಭಾಷಾಕೋಶ – ಪುಟ : ೧೫

೧೭. ಎಸ್.ಎಲ್.ಎನ್. ಭಾರತಿ – ಪ್ರಾಚೀನ ಹಸ್ತಪ್ರತಿಗಳು – ಪುಟ : ೩೦

೧೮. ವೈ.ಸಿ. ಭಾನುಮತಿ – ಗ್ರಂಥಸಂಪಾದನೆ ವಿವಿಕ್ಷೆ – ಪುಟ : ೦೭

೧೯. ಅಚ್ಚಿಗಾಗಿ ಸಿದ್ಧಪಡಿಸಿದ ಕೈಬರಹಗಳಲ್ಲಿ ನಕ್ಷೆಗಳು, ಚಿತ್ರಗಳು, ರೇಖಾಚಿತ್ರಗಳು ವರ್ಣಚಿತ್ರಗಳು, ಪಟ್ಟಿಕೆಗಳು ಇತ್ಯಾದಿ ಇರುತ್ತವೆ. ಇವೂ ಪಠ್ಯದ ಭಾಗವಾಗಿ ಬರುತ್ತವೆ. ಆದರೆ ಪ್ರತ್ಯೇಕವಾಗಿರುತ್ತವೆ. ಇವುಗಳನ್ನು ಸಹ ಹಸ್ತಪ್ರತಿಯ ಭಾಗಗಳೆಂದೇ ಪರಿಗಣಿಸಬೇಕು. (ನೋಡಿ : ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯ ಹಸ್ತಪ್ರತಿ ಮತ್ತು ಶ್ರೀ ತತ್ವ ನಿಧಿ ಹಸ್ತಪ್ರತಿ)

೨೦. ಡಿ.ಎಲ್.ಎನ್ – ಕನ್ನಡ ಗ್ರಂಥ ಸಂಪಾದನೆ – ಪುಟ : ೫೭ ರಿಂದ ೬೮

೨೧. ಟಿ.ವಿ. ವೆಂಕಟಾಚಲಶಾಸ್ತ್ರಿ – ಗ್ರಂಥಸಂಪಾದನಾ ಪರಿಭಾಷಾಕೋಶ – ಪುಟ : ೩೬

೨೨. ಎಂ.ಎಂ. ಕಲ್ಬುರ್ಗಿ – ಕನ್ನಡ ಹಸ್ತಪ್ರತಿಶಾಸ್ತ್ರ – ೦೧

೨೩. ಎಸ್. ಶಿವಣ್ಣ – ಹಸ್ತಪ್ರತಿಶಾಸ್ತ್ರ – ಪ್ರ : ಬಿ.ಎಂ.ಶ್ರೀ. ಪ್ರತಿಷ್ಠಾನ – ಪುಟ : ೬೯

೨೪. ಸಂಪಾದಕರ ಮುನ್ನುಡಿ – ಕನ್ನಡ ಗ್ರಂಥ ಸೂಚಿ – ಸಂಪುಟ : ೦೧

೨೫. ಸಂಪಾದಕರ – ಮುನ್ನುಡಿ – ಮೈ.ವಿ.ವಿ. ಕನ್ನಡ ಗ್ರಂಥ ಸೂಚಿ – ಸಂಪುಟ : ೦೧

೨೬. ಸಂಪಾದಕರ – ಮುನ್ನುಡಿ – ಮೈ.ವಿ.ವಿ. ಕನ್ನಡ ಗ್ರಂಥಸೂಚಿ – ಸಂಪುಟ : ೦೧

೨೭. ಬಿ.ಕೆ. ಹಿರೇಮಠ – ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ – ಪುಟ : ೨೪೮

೨೮. ಎಂ.ಜಿ. ಹೆಗ್ಡೆ – ಹಸ್ತಪ್ರತಿಗಳು : ಮೆಕೆಂಜಿ ಸಂಗ್ರಹ – ಮಣಿಹ – ಪುಟ : ೨೪೪

೨೯. ಬಿ.ಎಸ್. ಸಣ್ಣಯ್ಯ – ಹಸ್ತಪ್ರತಿಶಾಸ್ತ್ರ ಪರಿಚಯ – ಪುಟ : ೩೪

೩೦ ಎಂ.ಎಂ. ಕಲ್ಬುರ್ಗಿ – ಕನ್ನಡ ಹಸ್ತಪ್ರತಿಶಾಸ್ತ್ರ – ಪುಟ : ೧೨೨

೩೧. ಪ್ರೊ॥ ಎಸ್.ಎಲ್. ಶ್ರೀನಿವಾಸ ಮೂರ್ತಿ – ಗ್ರಂಥ ಸಂಪಾದನೆ ಮತ್ತು ಹೆರ್ಮನ್ ಮೋಂಗ್ಲಿನ್ – ಹಸ್ತಪ್ರತಿ ವ್ಯಾಸಂಗ – ೫ – ಪುಟ : ೩೮.

೩೨. ಡಾ॥ ಎನ್. ಅನಂತರಂಗಾಚಾರ್ಯ – ಮಣಿಹ – ಪುಟ : ೨೬೧

೩೩. ಎಸ್.ಎಸ್. ಅಂಗಡಿ – ಹಸ್ತಪ್ರತಿ ವ್ಯಾಸಂಗ – ೬ – ಪುಟ : ೫೩

೩೪. ಹಾ.ಮಾ.ನಾಯಕ – ಮೈ.ವಿ.ವಿ. ಕನ್ನಡ ಹಸ್ತಪ್ರತಿ ಸೂಚಿ ಸಂಪುಟ – ೦೫ ಮುನ್ನುಡಿ – ಪುಟ : vii

೩೫. ಎಂ.ಎಂ. ಕಲುಬುರ್ಗಿ – ಪರಿವಿಡಿ, 'ಕನ್ನಡ ಹಸ್ತಪ್ರತಿಶಾಸ್ತ್ರ'

ಅಧ್ಯಾಯ – ೩
ಕನ್ನಡ ಹಸ್ತಪ್ರತಿ ಸೂಚಿಗಳ ಇತಿಹಾಸ ಮತ್ತು ರಚನಾ ವಿಧಾನ

ಹಸ್ತಪ್ರತಿ ಸೂಚಿ ಎಂದರೇನು ?

ಅಕಾರಾದಿಯಾಗಿ ಅಥವಾ ವಿಷಯಾನುಕ್ರಮವಾಗಿ ರಚಿಸುವ ಪಟ್ಟಿ. ಸಾಮಾನ್ಯವಾಗಿ ಗ್ರಂಥಾಲಯಗಳಲ್ಲಿ, ಪುಸ್ತಕಭಂಡಾರಗಳಲ್ಲಿ ಈ ರೀತಿಯ ಸೂಚಿಯನ್ನು ತಯಾರಿಸುತ್ತಾರೆ. ಗ್ರಂಥಗಳ ಬಗ್ಗೆ ಸೂಚಿಗಳನ್ನು ಬರೆದು ಕ್ರಮಬದ್ಧವಾಗಿ ಗ್ರಂಥಗಳು ದೊರಕುವಂತೆ ಮಾಡುವ ಕಾರ್ಯವೇ 'ಸೂಚೀಕರಣ'.

"ನಿರ್ದಿಷ್ಟವಾದ ಕ್ರಮದಲ್ಲಿ ನಿರ್ದಿಷ್ಟವಾದೊಂದು ಗ್ರಂಥಭಂಡಾರದ ಹಸ್ತಪ್ರತಿಗಳ ವರ್ಣನಾತ್ಮಕವಾದ ಪಟ್ಟಿಯನ್ನು ಸಿದ್ಧಪಡಿಸುವುದೇ ಸೂಚೀಕರಣ".[೧]

"ಹಸ್ತಪ್ರತಿ ಸಂಗ್ರಹಾಲಯಗಳಲ್ಲಿರುವ ಮತ್ತು ಸಂಗ್ರಹಾಲಯಕ್ಕೆ ಬರುವ ಹಸ್ತಪ್ರತಿಗಳನ್ನೆಲ್ಲ ವಿವಿಧ ರೀತಿಯಲ್ಲಿ ದಾಖಲಿಸಿ ಪಟ್ಟಿ ತಯಾರಿಸುವುದನ್ನು ಸಾಮಾನ್ಯವಾಗಿ ಸೂಚೀಕರಣ ಎನ್ನುತ್ತಾರೆ. ಮೊದಲ ಹಂತದಲ್ಲಿ ದಾಖಲೆ ಮಾಡಿಕೊಳ್ಳುವುದು. ಎರಡನೇ ಹಂತದಲ್ಲಿ ಪಟ್ಟಿ ತಯಾರಿಸುವುದು ಮತ್ತು ಮೂರನೇ ಹಂತದಲ್ಲಿ ವರ್ಣನಾತ್ಮಕ ಸೂಚಿ ತಯಾರಿಸುವುದು. ವರ್ಣನಾತ್ಮಕ ಸೂಚಿ ತಯಾರಿಕೆ ಬಹಳ ಮುಖ್ಯವಾದ ಕೆಲಸ. ಒಂದು ಹಸ್ತಪ್ರತಿಯ ಎಲ್ಲ ರೀತಿಯ ವಿವರಗಳೂ ಅದರಲ್ಲಿದ್ದು ಹೊರಗಿನ ಯಾರೇ ಆಗಲಿ, ಯಾವ ಸಂದರ್ಭದಲ್ಲೆ ಆಗಲಿ ಸಂಗ್ರಹಾಲಯದಲ್ಲಿರುವ ಅವರಿಗೆ ಬೇಕಾದ ಹಸ್ತಪ್ರತಿಯ ವಿವರ ಕೊಡಹುದು".[೨]

"ಪುರಾತತ್ವ ಶೋಧನೆಗಳಿಂದಲೂ, ಪಂಡಿತರುಗಳ ವೈಯಕ್ತಿಕ ಸಂಗ್ರಹಗಳಿಂದಲೂ ಮತ್ತು ಇತರ ಕಡೆಗಳಿಂದಲೂ ಸಂಗ್ರಹಿಸಿದ ಪ್ರಾಚೀನ ಹಸ್ತಪ್ರತಿಗಳನ್ನು ಪಟ್ಟಿಮಾಡಿಕೊಳ್ಳುವುದು ಮೊದಲ ಕರ್ತವ್ಯ. ಹೀಗೆ ದೊರಕಿದ ಪ್ರಾಚೀನ ಹಸ್ತಪ್ರತಿಗಳು ಭಾರತೀಯ ಅಧ್ಯಯನದ ಯಾವ ಭಾಗಕ್ಕೆ ಸಂಬಂಧಿಸಿದವು, ಅವುಗಳ ಬರೆವಣಿಗೆಗೆ ಉಪಯೋಗಿಸಿರುವ ಸಾಧನಗಳೇನು, ಪತ್ರಸಂಖ್ಯೆ, ಲಿಪಿ, ಅವನ್ನು ರಚಿಸಿದ ಕರ್ತೃ, ಅವನ ದೇಶ ಕಾಲಗಳನ್ನು ಪಟ್ಟಿ ಮಾಡುವುದಕ್ಕೆ "ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿ" (Descriptive Catologue of manuscripts) ಎಂದು ಹೆಸರು".[೩]

"ಹಸ್ತಪ್ರತಿಗಳ ಬಾಹ್ಯ ಹಾಗೂ ಆಂತರಿಕ ವಿವರಗಳನ್ನು ಒಳಗೊಂಡ ಸೂಚಿಗಳೇ ಹಸ್ತಪ್ರತಿ ಸೂಚಿಗಳು. ಬಾಹ್ಯ ವಿವರಗಳಲ್ಲಿ ಹಸ್ತಪ್ರತಿಗಳ ವಸ್ತು (ಓಲೆ, ಶ್ರೀತಾಳೆ, ಕಾಗದ ಇತ್ಯಾದಿ) ; ಪ್ರತಿಗಳ ಆಕಾರ ಅಂದರೆ ಉದ್ದ ಅಗಲಗಳು, ಗರಿಗಳ, ಹಾಳೆಗಳ ಸಂಖ್ಯೆಗಳು,

ಸೂಚಿತವಾಗುತ್ತವೆ. ಆಂತರಿಕ ವಿವರಗಳಲ್ಲಿ ಪ್ರತಿಗರಿಯ ಅಥವಾ ಹಾಳೆಯಲ್ಲಿನ ಒಂದು ಪಾರ್ಶ್ವದಲ್ಲಿನ ಸಾಲುಗಳ ಸಂಖ್ಯೆ ಪ್ರತಿಸಾಲಿನಲ್ಲಿನ ಅಕ್ಷರಗಳ ಸಂಖ್ಯೆ, ಕೃತಿಯ ಆದಿ ಮತ್ತು ಅಂತ್ಯಗಳ ಉಲ್ಲೇಖಗಳು ಬರುತ್ತವೆ. ಇವಲ್ಲದೆ ಸೂಚಿಗಳಲ್ಲಿ ಕೃತಿಯ ಹೆಸರು ಕರ್ತೃ, ಕಾಲಗಳನ್ನು ಸೂಚಿಸಿರುತ್ತವೆ.

ಕನ್ನಡದಲ್ಲಿ ಪ್ರಕಟವಾಗಿರುವ "ವರ್ಣನಾತ್ಮಕ ಹಸ್ತಪ್ರತಿ ಸೂಚಿ"ಗಳಲ್ಲಿ ಮಾತ್ರ ಮೇಲಿನ ಬಾಹ್ಯ ಹಾಗೂ ಆಂತರಿಕ ವಿವರಗಳನ್ನು ಕಾಣಬಹುದಾಗಿದೆ. ಉಳಿದ ಹಸ್ತಪ್ರತಿ ಸೂಚಿಗಳಲ್ಲಿ ಇವುಗಳಲ್ಲಿನ ಕೆಲವಾರು ಅಂಶಗಳು ಮಾತ್ರ ಇರುತ್ತವೆ".[೪]

ಮೇಲಿನ ಹೇಳಿಕೆಗಳನ್ನು ಸಮೀಕ್ಷಿಸಿದಾಗ ಕನ್ನಡದಲ್ಲಿ ಸೂಚೀ ಸಾಹಿತ್ಯ ಎಂಬುದೊಂದು ಹಸ್ತಪ್ರತಿಶಾಸ್ತ್ರದ ಅಂಗವಾಗಿ ಹೊಸ ಅಧ್ಯಯನ ಪ್ರಕಾರವಾಗಿ ಬೆಳೆದು ಬರುತ್ತಿದೆ ಎಂದು ತಿಳಿಯುತ್ತಿದೆ. ಇದು ಹಸ್ತಪ್ರತಿಶಾಸ್ತ್ರದ ಅಂಗವಾಗಿ ಬರುವ ವಿಚಾರವಾದರೂ, ಈ ಮೊದಲು ಹಸ್ತಪ್ರತಿ ಶಾಸ್ತ್ರವು ಪ್ರಾರಂಭದಲ್ಲಿ ಗ್ರಂಥ ಸಂಪಾದನಾ ಶಾಸ್ತ್ರದ ಒಂದು ಅಂಗವಾಗಿದ್ದು ಈಗ ಅದೇ ಪ್ರತ್ಯೇಕ ಶಾಸ್ತ್ರವೆಂದು ಪರಿಗಣಿಸುವವರಿದ್ದಾರೆ. ಮತ್ತೆ ಕೆಲವರು ಗ್ರಂಥ ಸಂಪಾದನಶಾಸ್ತ್ರದ ಒಂದು ಭಾಗವೆಂದೇ ಬರೆಯುತ್ತಾರೆ. ಅದೇನೇ ಇರಲಿ ಸೂಚೀ ರಚನೆ ಮತ್ತು ಸೂಚೀ ಪ್ರಕಟಣೆಗಳು ೨೦ನೇ ಶತಮಾನದಲ್ಲಿ ಕನ್ನಡದಲ್ಲಿ ಪಾಶ್ಚಾತ್ಯ ವಿದ್ವಾಂಸರ ಪ್ರಭಾವದಿಂದ ಮೂಡಿ ಬಂದ ಪ್ರಕಾರ ಎನ್ನುವುದರಲ್ಲಿ ತಪ್ಪಿಲ್ಲ. ಹಾಗೆಂದ ಮಾತ್ರಕ್ಕೆ ಸೂಚಿ ರಚಿಸುವ ಕಾರ್ಯ ನಮ್ಮಲ್ಲಿ ಇರಲಿಲ್ಲ ಎಂಬರ್ಥವಲ್ಲ. ಈಗಿನ ರಚನಾ ರೀತಿಯಲ್ಲಿ ಸೂಚೀಕರಣವಿರಲಿಲ್ಲ ಎಂದಷ್ಟೇ ಅರ್ಥ. ಎಂ.ಎಂ. ಕಲ್ಬುರ್ಗಿಯರು ಹೇಳಿದಂತೆ "ಹಸ್ತಪ್ರತಿ ಸೂಚಿಗಳು ಅಂಗೈಯಲ್ಲಿ ಗ್ರಂಥ ಸಂಪತ್ತನ್ನು ತೋರಿಸಿಕೊಡುವ ಸಂಕ್ಷಿಪ್ತ ಗ್ರಂಥಾಲಯಗಳು. ವ್ಯವಸ್ಥಿತ ನಿರ್ಮಿತಿಯಿಂದಾಗಿ ಸೂಚೀ ಸಾಹಿತ್ಯಕ್ಕೆ ಇಂದು ವಿಜ್ಞಾನದ ಸ್ಥಾನ ಪ್ರಾಪ್ತವಾಗಿದೆ".[೫]

ಸೂಚಿಗಳ ವರ್ಗೀಕರಣ

ಸೂಚಿಗಳ ವರ್ಗೀಕರಣ ಹಸ್ತಪ್ರತಿಗಳು ಭಂಡಾರಕ್ಕೆ ಬಂದ ನಂತರ ಅವುಗಳನ್ನು ವಸ್ತು, ಭಾವ, ವಿಷಯ ಇತ್ಯಾದಿ ದೃಷ್ಟಿಯಿಂದ ವಿಂಗಡಿಸಿ, ಸಂಕೇತಾಕ್ಷರ ಕ್ರಮಾಂಕ ಸೂಚಿಸಿ ವ್ಯವಸ್ಥೆಗೊಳಿಸುತ್ತಿದ್ದರೆ, ಸೂಚೀಕರಣವು ಇದನ್ನೂ ಒಳಗೊಂಡಂತೆ ಇನ್ನೂ ಬೇರೆ ಅಂಶಗಳನ್ನು ಗಮನಿಸಿ, ವ್ಯಾಪಕ ವಿವರಗಳನ್ನು ಕೊಟ್ಟುಕೊಂಡು ಮುನ್ನಡೆಯುತ್ತದೆ. ಆದುದರಿಂದ ಮುದ್ರಿತ ಗ್ರಂಥಶಾಸ್ತ್ರದಲ್ಲಿ ವರ್ಗೀಕರಣ ಜಟಿಲ, ಆದರೆ ಸೂಚೀಕರಣ ಸರಳವಾಗಿರುತ್ತದೆ. ಹಸ್ತಪ್ರತಿಶಾಸ್ತ್ರದಲ್ಲಿ ವರ್ಗೀಕರಣ ಸರಳವಾದರೆ, ಸೂಚೀಕರಣ ಜಟಿಲವಾಗಿರುತ್ತದೆ.

ಸೂಚಿಗಳ ವರ್ಗೀಕರಣದಲ್ಲಿ ಹಲವು ಬಗೆಗಳಿವೆ. ಅಚ್ಚಾದ ಪತ್ರಿಕೆಗಳ ವರ್ಣನಾತ್ಮಕ ಸೂಚಿ, ಪತ್ರಿಕೆಗಳ ವರ್ಣನಾತ್ಮಕ ಸೂಚಿ, ಸಂಶೋಧನ ಸಂಸ್ಥೆಗಳ ಸೂಚಿ, ಸಂಶೋಧಕರ ಸೂಚಿ ಮುಂತಾದ ಇತರ ಸೂಚಿಗಳನ್ನು ಕಾಣುತ್ತೇವೆ. ಅವುಗಳಲ್ಲಿ ಬಹಳ ಮುಖ್ಯವಾಗಿ ಎರಡು ವಿಧಗಳನ್ನು ಪರಿಗಣಿಸಬಹುದು.

೧) ಕನ್ನಡ ಮುದ್ರಿತ ಗ್ರಂಥಗಳ ಸೂಚಿ.

೨) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು.

೧) ಕನ್ನಡ ಮುದ್ರಿತ ಗ್ರಂಥಗಳ ಸೂಚಿ

"ಯಾವುದೇ ಭಾಷೆಯಲ್ಲಿ ರಚಿತವಾಗಿರುವ ಎಲ್ಲ ಬಗೆಯ ಬರವಣಿಗೆಯನ್ನು ಕುರಿತ ಎಲ್ಲ ಅಂಶಗಳ ಶಾಸ್ತ್ರಿಯ ನಿರೂಪಣೆಯೇ ಗ್ರಂಥಸೂಚಿ. ಆ ನಿರೂಪಣೆ, ಲೇಖನ, ಕೃತಿ, ಕಾಗದ, ಶಾಯಿ, ಅಲಂಕಾರ, ಅಚ್ಚುಮೊಳೆಯ ಮಾದರಿ, ರಟ್ಟಿನ ಬಗೆ ಈ ಯಾವುದನ್ನೇ ಕುರಿತದ್ದಾಗಿರಬಹುದು. ಕೊನೆಗೆ ಮುದ್ರಕರು ಉಪಯೋಗಿಸುವ ಸಂಕೇತಗಳು, ಕಾಗದ ತಯಾರಕರು ಹಾಕುವ ಜಲ ಚಿಹ್ನೆ (ವಾಟರ್ ಮಾರ್ಕ್) ಕೂಡ ಆಗಬಹುದು. ಒಂದು ಕೃತಿಯ ಪ್ರಕಟನ ವರ್ಷ, ಸ್ಥಳ, ಆವೃತ್ತಿ, ಪುಟ ಸಂಖ್ಯೆ, ಆಕಾರ ಇತ್ಯಾದಿ ಅಂಶಗಳೂ ಆಗಬಹುದು. ಸಂಶೋಧಕರಿಗೆ ಒಂದಲ್ಲ ಒಂದು ರೀತಿಯಲ್ಲಿ ಅತ್ಯಮೂಲ್ಯವೆನಿಸುವ ಈ ಅಂಶಗಳನ್ನು ಸಂಗ್ರಹಿಸಿ ಶಾಸ್ತ್ರೀಯವಾಗಿ ವಿಭಾಗಿಸಿ, ವ್ಯವಸ್ಥೆಗೊಳಿಸಿ ಪ್ರಕಟಿಸುತ್ತದೆ ಗ್ರಂಥಸೂಚಿ".[೬]

ಗ್ರಂಥ ಸೂಚಿ ಎಂದರೆ "ಯಾವುದಾದರೊಂದು ನಿರ್ದಿಷ್ಟ ವಿಷಯದ ಬಗ್ಗೆ ಇರುವ ಎಲ್ಲಾ ಬರೆದ ಪ್ರಕಾರಗಳ ವ್ಯವಸ್ಥಿತ ಪಟ್ಟಿ. ಎಂದರೆ ಯಾವುದೇ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸುವಂತೆ ಇರುವ ಪುಸ್ತಕಗಳು, ನಿಯತಕಾಲಿಕೆಗಳು, ಲೇಖನಗಳು, ಸಮ್ಮೇಳನಗಳು ವರದಿಗಳು, ಸಂಸ್ಥೆಗಳ ವರದಿಗಳು, ಸರಕಾರದ ದಾಖಲೆಗಳು, ಪ್ರಕಟನಾ ಪಟ್ಟಿಗಳು, ಕರಪತ್ರಗಳು, ಗ್ರಾಮಾಫೋನ್, ರಿಕಾರ್ಡುಗಳು, ಟೇಪ್‌ರಿಕಾರ್ಡುಗಳು, ಯಂತ್ರಗಳು ಇತರೇ ಶ್ರವಣ – ದೃಶ್ಯ ದಾಖಲೆಗಳು ಈ ಎಲ್ಲಾ ರೀತಿಯ ಸಾಮಗ್ರಿಗಳನ್ನು ಒಂದಕ್ಕೊಂದು ಸಂಬಂಧವಿರುವಂತೆ ವರ್ಗೀಕರಿಸಿ ಪೂರ್ಣ ಮಾಹಿತಿ ಕೊಡುವ ಪಟ್ಟಿಯೇ ಗ್ರಂಥಸೂಚಿ".[೭]

ಅಚ್ಚಾದ ಗ್ರಂಥ ಸೂಚಿಗಳಿಗೆ ಇಂಗ್ಲೀಷಿನಲ್ಲಿ 'ಬಿಬ್ಲಿಯೋಗ್ರಫಿ ಕ್ಯಾಟಲಾಗ್ ಇಂಡೆಕ್ಸ್' ಎಂದು ಕರೆಯುತ್ತಾರೆ. ಇದಕ್ಕೆ ಕನ್ನಡದಲ್ಲಿ "ಗ್ರಂಥಸೂಚಿ" ಎಂದು ಹೆಸರಿದೆ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾಲಯ ೧೩ ಸಂಪುಟಗಳಲ್ಲಿ ಕನ್ನಡ ಗ್ರಂಥ ಸೂಚಿಗಳನ್ನು ಪ್ರಕಟಿಸಿರುವುದು ವಿಶೇಷವಾಗಿದೆ.

"ಉದ್ದೇಶಕ್ಕೆ ತಕ್ಕಂತೆ ಒಂದೋ ಹಲವೋ ಅಂಶಗಳನ್ನು ಒಳಗೊಂಡು ಗ್ರಂಥಸೂಚಿಯ ಬೇರೆ ಬೇರೆ ಬಗೆಗಳಾಗುತ್ತವೆ. ಹಾಗಾಗಿಯೇ ಅದು ಒಂದು ವಿಷಯಕ್ಕೆ ಮಿತಗೊಂಡು 'ಏಕವಿಷಯ ಸೂಚಿ'ಯಾಗಬಹುದು, ಒಬ್ಬ ಲೇಖಕನ ಕೃತಿಗಳಿಗೆ ಸೀಮಿತಗೊಂಡು 'ಏಕಕರ್ತೃಸೂಚಿ'ಯಾಗಬಹುದು. ಕೃತಿಯ ಬಾಹ್ಯ ಅಂಶಗಳನ್ನು ಪಟ್ಟಿ ಮಾಡುವುದರ ಜೊತೆಗೆ ಅದರ ಸ್ಥೂಲವಾದ ವರ್ಣನೆಗೂ ತೊಡಗಿ 'ವರ್ಣನಾತ್ಮಕ ಸೂಚಿ'ಯಾಗಬಹುದು. ಹೀಗೆಯೇ 'ವ್ಯವಸ್ಥಾತ್ಮಕ ಸೂಚಿ', 'ಪಾಠನಿರ್ಣಯ ಸೂಚಿ' ಇತ್ಯಾದಿ ಪ್ರಬೇಧಗಳೂ ಇವೆ".[೮]

ಮುದ್ರಿತ ಗ್ರಂಥ ಸೂಚಿಯಲ್ಲಿ ಎರಡು ವಿಧಗಳಿವೆ.

1) ಹಸ್ತಪ್ರತಿಗಳ ಗ್ರಂಥ ಸಂಪಾದನೆ ಮೂಲಕ ಸಿದ್ಧಪಡಿಸಿ ಮುದ್ರಿಸಿದ ಗ್ರಂಥಸೂಚಿಗಳು: ಇವು ಹೆಸರೇ ಹೇಳುವ ಹಾಗೆ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂಪಾದಿಸಿ, ಮುದ್ರಿಸಿದ ನಂತರ ಅವುಗಳ ಪಟ್ಟಿ ತಯಾರಿಸಲಾಗುತ್ತದೆ. ಅಂದರೆ ಹಸ್ತಪ್ರತಿಗಳೇ ಇವುಗಳಿಗೆ ಮೂಲಾಧಾರ.
ಉದಾ : ಪಂಪಭಾರತ, ವಡ್ಡಾರಾಧನೆ, ಗದಾಯುದ್ಧ, ಶಬರಶಂಕರ ವಿಳಾಸ ಮುಂತಾದ ಹಳಗನ್ನಡ ಸಾಹಿತ್ಯದ ಗ್ರಂಥಗಳು ಹಾಗೂ ವಚನಸಾಹಿತ್ಯ, ದಾಸ ಸಾಹಿತ್ಯ ಮುಂತಾದ ಗ್ರಂಥಗಳು. ಇವೆಲ್ಲ ಹಸ್ತಪ್ರತಿಗಳ ಆಧಾರದ ಮೇಲೆ ಅಚ್ಚಾದ ಗ್ರಂಥಗಳಾಗಿವೆ.

2) ಸ್ವತಂತ್ರವಾಗಿ ರಚಿಸಿದ ಕೃತಿಗಳ ಗ್ರಂಥಸೂಚಿ: ೧೯-೨೦ನೇ ಶತಮಾನದಿಂದೀಚೆಗೆ ಸ್ವತಂತ್ರವಾಗಿ ರಚಿಸಿದ ಗ್ರಂಥಗಳ ವಿವರಗಳನ್ನು ಅಚ್ಚಿನ ಗ್ರಂಥಗಳ ವಿವರಗಳನ್ನು ಅಚ್ಚಿನ ಗ್ರಂಥಗಳ ವರ್ಣನಾತ್ಮಕ ಸೂಚಿಯಲ್ಲಿ ಕಾಣುತ್ತೇವೆ.
ಉದಾ : ಹೊಸಗನ್ನಡದಲ್ಲಿ ಕಾಣಿಸಿಕೊಂಡ ಕಥೆ ಕಾದಂಬರಿ, ನಾಟಕ ವಿಮರ್ಶೆ ಮುಂತಾದ ಪ್ರಕಾರದ ಕೃತಿಗಳು. ಉದಾಹರಣೆಗೆ, ವಿಜಯ ಅವರ ಸಣ್ಣಕತೆಗಳು, ಶಾಂತಿನಾಥ ದೇಸಾಯಿ ಅವರ 'ಮುಕ್ತಿ' ಕಾದಂಬರಿ, ಚಂದ್ರಶೇಖರ ಕಂಬಾರರ 'ಜೈಸಿದ್ಧ ನಾಯಕ' ನಾಟಕ, ಸಿಂಧುವಳ್ಳಿ ಅನಂತಮೂರ್ತಿಯವರ 'ರಂಗ' ನಾಟಕ ಕುರಿತ ವಿಮರ್ಶೆ ಮುಂತಾದವುಗಳನ್ನು ಸ್ವತಂತ್ರವಾಗಿ ರಚಿಸಿದ ಕೃತಿಗಳ ಗ್ರಂಥ ಸೂಚಿಗೆ ಉಲ್ಲೇಖಿಸಬಹುದು.

ಈ ಎರಡೂ ಬಗೆಯನ್ನು ಗ್ರಂಥಗಳ ವಿವರಗಳನ್ನು ಮುದ್ರಿತ ಸೂಚಿಯಲ್ಲಿ ಕಾಣುತ್ತೇವೆ.

ಮುದ್ರಿತ ಗ್ರಂಥ ಸೂಚಿಯನ್ನು ಕುರಿತು ಮತ್ತು ಅವುಗಳ ಪ್ರಯೋಜನಗಳನ್ನು ಕುರಿತು ಮೈ.ವಿ.ವಿ. ಕನ್ನಡ ಗ್ರಂಥ ಸೂಚಿಯ ಮುನ್ನುಡಿಯಲ್ಲಿ ಹೀಗೆ ಹೇಳಿದೆ.

"ಗ್ರಂಥ ಸೂಚಿ ಸಂಶೋಧಕರಿಗೆ ಅತ್ಯಂತ ಅವಶ್ಯಕವಾದ ಆಕರ ಗ್ರಂಥ. ಯಾವುದೇ ವಿಷಯದಲ್ಲಿ ಸಂಶೋಧನೆಗೆ ತೊಡಗುವ ಮೊದಲು ಸಂಶೋಧಕ ಮಾಡುವ ಕೆಲಸ ಆವರೆಗೆ ಆ ವಿಷಯವಾಗಿ ಹೊರಬಂದಿರುವ ವಿಷಯಗಳನ್ನು ಸಂಗ್ರಹಿಸುವುದು. ಈ ಕೆಲಸಕ್ಕೆ ಗ್ರಂಥ ಸೂಚಿಯಿಂದ ದೊರೆಯುವಂಥ ತಕ್ಷಣದ ಸಿದ್ಧ ನೆರವು ಬೇರೆ ಯಾವುದರಿಂದಲೂ ದೊರಕುವುದಿಲ್ಲ. ಅಲ್ಲದೆ ಗ್ರಂಥಸೂಚಿ ಕೊಡುವ ಚಿತ್ರ ಅತ್ಯಂತ ವಿಸ್ತಾರವೂ ವರ್ಣನಾಮಯವೂ ಆದುದು. ಬರೆವಣಿಗೆ ರೂಪುಗೊಂಡಂದಿನಿಂದಲೂ ಮಾನವ ತತ್ವ, ಕಲೆ, ಸಾಹಿತ್ಯ, ಶಾಸ್ತ್ರ, ವಿಜ್ಞಾನ, ತಂತ್ರ ಮೊದಲಾದ ಅಸಂಖ್ಯ ಕ್ಷೇತ್ರಗಳಲ್ಲಿ ಹೇಗೆ ಚಿಂತನೆ ಮಾಡಿದ್ದಾನೆ. ಆ ಚಿಂತನೆಗೆ ಹೇಗೆ ಅಭಿವ್ಯಕ್ತಿ ನೀಡಿದ್ದಾನೆ. ಅವನ ಅಭಿರುಚಿಗಳು ಕಾಲದಿಂದ ಕಾಲಕ್ಕೆ ಹೇಗೆ ಬದಲಾಗಿವೆ, ಶೈಲಿ ಹೇಗೆ ರೂಪಾಂತರಗೊಳ್ಳುತ್ತಾ ಹೋಗಿದೆ, ಅವನ ಸಂಸ್ಕೃತಿಯ ಮೇಲೆ ಇದರ ಪರಿಣಾಮ ಏನಾಗಿದೆ ಎಂಬೆಲ್ಲ ವಿಚಾರಗಳನ್ನು ಅಧ್ಯಯನ ಮಾಡಲು ಗ್ರಂಥಸೂಚಿಯೇ ಆಧಾರವಾಗಿದೆ".[೯]

೨) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು

"ಹಸ್ತಪ್ರತಿಗಳು ಸುಲಭಸಾಧ್ಯವಾಗಬೇಕಾದರೆ ಇವುಗಳ ವರ್ಣನಾತ್ಮಕ ಸೂಚಿ ಅತ್ಯಂತ ಅವಶ್ಯವಾಗುತ್ತದೆ ಇಂಗ್ಲಿಷಿನ (Catalogue) ಸೂಚಿ ಮತ್ತು (Descriptive catalogue) ವರ್ಣನಾತ್ಮಕ ಸೂಚಿ ಇವು ಒಂದಕ್ಕಿಂತ ಮತ್ತೊಂದು ವ್ಯಾಪಕಾರ್ಥವುಳ್ಳ ಶಬ್ದಗಳು. ಕೇವಲ ಸೂಚಿಗಿಂತ (Catalogue) ವರ್ಣನಾತ್ಮಕ (Descriptive catalogue) ಸೂಚಿ ಬಹು ಉಪಯುಕ್ತವಾದುದು ಎಂಬುದು ಸರ್ವವಿದಿತ, ಯಾವುದೇ ಗ್ರಂಥಭಂಡಾರಗಳಲ್ಲಿನ ಹಸ್ತಪ್ರತಿಗಳ ಕೃತಿಗಳ ವರ್ಣನಾತ್ಮಕ ಸೂಚಿ ಅವಶ್ಯವಷ್ಟೇ ಅಲ್ಲ ಅನಿವಾರ್ಯವೂ ಹೌದು. ಈ ವರ್ಣನಾತ್ಮಕ ಸೂಚಿಯಿಂದ ಯಾವುದೇ ಒಂದು ಕೃತಿಯ ಸಂಕ್ಷಿಪ್ತ ಸಮಗ್ರ ಮಾಹಿತಿ ದೊರಕಿದಂತಾಗುತ್ತದೆ".[೧೦]

ಕನ್ನಡದಲ್ಲಿ ಬಂದಿರುವ ಹಸ್ತಪ್ರತಿ ಸೂಚಿಗಳಲ್ಲಿ ವರ್ಣನಾತ್ಮಕ ಸೂಚಿಗಳೇ ಹೆಚ್ಚು. ಸಾಮಾನ್ಯ ಸೂಚಿಗಳು ಹಸ್ತಪ್ರತಿಗಳಲ್ಲಿರುವ ಗ್ರಂಥದ ಹೆಸರು, ಕವಿಯ ಹೆಸರು, ಕಾಲ ಭಾಷೆ, ಪ್ರಕಾರ ಮುಂತಾದ ಸಾಮಾನ್ಯ ವಿವರಗಳಿರುವ ಹಸ್ತಪ್ರತಿಗಳ ಪಟ್ಟಿಯಾದರೆ, ವರ್ಣನಾತ್ಮಕ ಸೂಚಿ ಹಸ್ತಪ್ರತಿಯೊಂದರ ಸಮಗ್ರ ವಿವರಗಳನ್ನು ನೀಡುವ ಕೈಪಿಡಿಯಾಗಿದೆ.

ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಒಂಭತ್ತು ಸಂಪುಟಗಳ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳನ್ನೂ, ಧಾರವಾಡ ವಿಶ್ವವಿದ್ಯಾಲಯ ೧೩ ಸಂಪುಟಗಳ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚಿಗಳನ್ನೂ, ಹಾಗೂ ಇತರೇ ಸಂಸ್ಥೆಗಳೂ, ವಿಶ್ವವಿದ್ಯಾಲಯಗಳೂ ವರ್ಣನಾತ್ಮಕ ಸೂಚಿಗಳನ್ನು ಪ್ರಕಟಿಸಿರುವುದು ಅಧ್ಯಯನ ಯೋಗ್ಯವಾಗಿದೆ.

ಪ್ರಕಟಿತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳನ್ನು ಕುರಿತು ಎಸ್. ಶಿವಣ್ಣ ನವರು "ಹಸ್ತಪ್ರತಿ ಸೂಚಿಗಳು ಮತ್ತು ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು ಎಂದು ಎರಡು ವಿಭಾಗಗಳಾಗಿ ವರ್ಗೀಕರಿಸಬಹುದಾಗಿದೆ ಎಂದಿದ್ದಾರೆ. ಇದರಲ್ಲಿ ಎರಡನೆಯದಾದ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳಲ್ಲಿ ಹಸ್ತಪ್ರತಿ ಸೂಚಿಗಳಿಗಿಂತ ಹೆಚ್ಚಿನ ವಿವರಗಳು ಎಂದರೆ ವಿವರಗಳು ಎಂದರೆ ಕೃತಿಯ ಉದ್ದ, ಅಗಲಗಳ ಉಲ್ಲೇಖ, ಪತ್ರಸಂಖ್ಯೆ ಪ್ರತಿಪತ್ರದಲ್ಲಿನ ಪಂಕ್ತಿಗಳು ಹಾಗೂ ಪ್ರತಿ ಪಂಕ್ತಿಯಲ್ಲಿನ ಅಕ್ಷರಗಳು, ಕೃತಿಯ ಆದಿ, ಅಂತ್ಯಗಳ ಉಲ್ಲೇಖ ಈ ಹಲವಾರು ಸಂಗತಿಗಳು ಕ್ರಮಬದ್ಧವಾಗಿ ರೂಪಿತವಾಗಿರುತ್ತದೆ".[೧೧]

ಎಂ.ಎಂ. ಕಲ್ಬುರ್ಗಿಯವರು ಕನ್ನಡ ಹಸ್ತಪ್ರತಿ ಸೂಚಿಗಳನ್ನು ಮೂರು ವಿಧಗಳಾಗಿ ವಿಂಗಡಿಸಿದ್ದಾರೆ. "ಕೆಲವೇ ವಿಚಾರಗಳನ್ನು ತೋರಿಸಿಕೊಡುವುದು ಸೂಚಿ ; ಎಲ್ಲ ವಿವರಗಳನ್ನು ತೋರಿಸಿಕೊಡುವುದು ವಿವರಣಾತ್ಮಕ ಸೂಚಿ : ಇನ್ನೊಂದು ಬಗೆಯೆಂದರೆ, ಒಂದು ಕೃತಿಯ ಪ್ರತಿಗಳು ಯಾವ ಯಾವ ಸ್ಥಳಗಳಲ್ಲಿ ಇವೆಯೆಂಬುದನ್ನು ವಿಶಿಷ್ಟ ವಿವರಗಳೊಂದಿಗೆ ತೋರಿಸಿ ಕೊಡುವ ಸಮಗ್ರ ಸೂಚಿ : ಈ ಮೂರರಲ್ಲಿ ಸೂಚಿಯೆನ್ನುವುದು ಹಸ್ತಪ್ರತಿ ಸೂಚಿಯೇ ಆದರೂ ಕೃತಿಯ ಶೀರ್ಷಿಕೆ, ಕವಿನಾಮ, ಪ್ರಕಾರ ಇಷ್ಟು ವಿವರಗಳ ಕಾಲಂಗಳನ್ನು ಒಳಗೊಂಡಿರುತ್ತದೆ. ಇಲ್ಲಿ ಶೀರ್ಷಿಕೆಗಳನ್ನು ಅಕಾರಾದಿಯಾಗಿ ಹೊಂದಿಸಲಾಗುತ್ತದೆ. ಇದಕ್ಕೆ ಬದಲು ಕವಿನಾಮಗಳನ್ನು ಅಕಾರಾದಿಯಾಗಿ ಹೊಂದಿಸಬಹುದು. ಆಗ, ಶೀರ್ಷಿಕೆ, ಕವಿನಾಮ ಕಾಲಂ ಪಲ್ಲಟವಾಗುತ್ತದೆ. ಕವಿ ನಾಮದ ಕೆಳಗೆ ಅವನ ಕೃತಿಗಳನ್ನು ಅಕಾರಾದಿಯಾಗಿ ಹೊಂದಿಸಬೇಕು. ಮೂರನೆಯದಾಗಿ ಕೃತಿಗಳನ್ನು ಪ್ರಕಾರವಾಗಿ ವರ್ಗೀಕರಿಸಿ ಆಯಾ ಪ್ರಕಾರದ ಕೆಳಗೆ ಶೀರ್ಷಿಕೆಗಳನ್ನು ಅಕಾರಾದಿಯಾಗಿ ಜೋಡಿಸಬೇಕು. ಇದು ತೀರಾ ಸಾಮಾನ್ಯ ಸೂಚಿ ಆಗಿದ್ದು, 'ದರ್ಶಕ ಸೂಚಿ' ಎಂದು ಇಂಥವುಗಳನ್ನು ಕರೆಯಬಹುದು".[೧೨]

ಹಸ್ತಪ್ರತಿ ವರ್ಣನಾತ್ಮಕ ಸೂಚಿಗಳನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು.

1) ಪ್ರಕಟಿತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ – ಅಪ್ರಕಟಿತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ:

ಹಸ್ತಪ್ರತಿಗಳ ವರ್ಣನಾತ್ಮಕ ಗ್ರಂಥಸೂಚಿಯಲ್ಲಿ ತಾಳೆಗರಿ ಗ್ರಂಥಗಳು, ಕೋರಿ ಕಾಗದದ ಗ್ರಂಥಗಳೂ ಇರುತ್ತವೆ. ಈ ಗ್ರಂಥಗಳು ಅಚ್ಚಾಗಿರಬಹುದು ಇಲ್ಲವೇ ಅಚ್ಚಾಗದೇ

ಇರಬಹುದು. ಅಚ್ಚಾಗಿದ್ದು ಪ್ರಕಟವಾಗಿದ್ದರೆ ಅವು ಪ್ರಕಟಿತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ಅಚ್ಚಾಗದೇ ಇದ್ದು ಅವುಗಳ ಬಗ್ಗೆ ಸೂಚಿ ತಯಾರಿಸಿದ್ದರೆ ಅವು ಅಪ್ರಕಟಿತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ.

ಹಾಗಾಗಿ ಗ್ರಂಥ ಸಂಪಾದನ ಶಾಸ್ತ್ರಾನುಸಾರ ಸಂಪಾದಿಸಲ್ಪಟ್ಟ ಗ್ರಂಥಗಳು ಅಚ್ಚಾದ ಕಾರಣ ಅವು ಮುದ್ರಿತ ಪ್ರತಿಗಳಾಗಿ ಪರಿಗಣಿಸಲ್ಪಟ್ಟಿರುತ್ತವೆ. ಆದ್ದರಿಂದ Manuscript – ಹಸ್ತಪ್ರತಿ ಎಂದಾಗ ಅಚ್ಚಾಗದೆ ಕೈಯಲ್ಲಿ ಬರೆದಿರುವ ಪ್ರತಿ ಎಂದೇ ಅರ್ಥಮಾಡಬೇಕು. ಇಂಥ ಹಸ್ತಪ್ರತಿಗಳ ಸೂಚೀಕರಣ ಕಾರ್ಯ ಹಸ್ತಪ್ರತಿ ಶಾಸ್ತ್ರದ ಒಂದಂಗವಾಗಿದೆ.

2) ಸಮಗ್ರ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಮತ್ತು ಅಸಮಗ್ರ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ:

ಸಮಗ್ರ ಸೂಚಿಯನ್ನು ಕಲಬುರ್ಗಿ ಹೀಗೆ ವಿವರಿಸಿದ್ದಾರೆ. "ಸಮಗ್ರ ಸೂಚಿ ಎನ್ನುವುದು ಕೃತಿ ಶೀರ್ಷಿಕೆಯ ಸೂಚಿ ಆಗಿದ್ದು ಇಲ್ಲಿ ಎಲ್ಲ ಶೀರ್ಷಿಕೆಗಳನ್ನು ಅಕಾರಾದಿಯಲ್ಲಿ ಹೊಂದಿಸಲಾಗುತ್ತದೆ. ಒಂದು ಕೃತಿ ಶೀರ್ಷಿಕೆ ಬರೆದು ಅದರ ಪ್ರತಿಗಳು ಎಲ್ಲೆಲ್ಲಿ ದೊರೆಯುತ್ತವೆ ಎಂಬುದಕ್ಕೆ ವಿವರಗಳನ್ನು ಸೂಕ್ತ ಸಂಕೇತಗಳೊಂದಿಗೆ ಕೊಡಲಾಗುತ್ತದೆ. ಲಭ್ಯ ಕೃತಿಗಳೊಂದಿಗೆ ಅಲಭ್ಯ ಕೃತಿಗಳ ಉಲ್ಲೇಖವೂ ಅಲ್ಲಿ ಸೇರಿಕೊಂಡಿರುತ್ತದೆ. ಸೂಚಿಯಿಂದ ವಿವರಗಳನ್ನು ಸ್ವೀಕರಿಸಿದ್ದರೆ ಆ ಸೂಚಿಯನ್ನು ಸಂಕೇತದೊಂದಿಗೆ ದಾಖಲಿಸಲಾಗಿರುತ್ತದೆ. ಕೃತಿ ಪ್ರಕಟವಾಗಿದ್ದರೆ ಆ ಪ್ರಕಟನೆಯ ವಿವರಗಳನ್ನೂ, ಪ್ರಕಟವಾಗದೆ ಇದ್ದರೆ, ಪರಿಚಯಾತ್ಮಕ, ಲೇಖನ ಬೆಳಕು ಕಂಡಿದ್ದರೆ ಆ ಲೇಖನದ ವಿವರಗಳನ್ನು ಕೊಡಲಾಗುತ್ತದೆ. ಕೃತಿ ಬೇರೆ ಭಾಷೆಯಿಂದ ಅನುವಾದಗೊಂಡಿದ್ದರೆ, ಬೇರೆ ಭಾಷೆಗಳಿಗೆ ಅನುವಾದಗೊಂಡಿದ್ದರೆ ಆ ಸೂಚನೆಯನ್ನು ಇದು ಒಳಗೊಂಡಿರುತ್ತದೆ. ಕವಿಯ ಬಗ್ಗೆ ಗ್ರಂಥ ಮತ್ತು ಲೇಖನ ರೂಪದ ವಿವರಗಳಿದ್ದರೆ ಅವುಗಳನ್ನೂ ಸೂಚಿಸಲಾಗುತ್ತದೆ. ಹೀಗೆ ಅಂಗೈ ನೆಲ್ಲಿಯಂತೆ ಒಂದು ಕೃತಿಯ ಸಮಸ್ತ ಪ್ರತಿಗಳ ಬಗ್ಗೆ ತಿಳಿವಳಿಕೆ ಮಾಡಿಕೊಡುವುದೇ ಈ ಸಮಗ್ರ ಸೂಚಿಯ ಮುಖ್ಯ ಗುರಿಯಾಗುತ್ತದೆ".[೧೩]

ಹೀಗೆ ಒಂದು ಕೃತಿಯ ಬಗ್ಗೆ ಸಮಗ್ರ ಮಾಹಿತಿಗಳು ಸಿಕ್ಕಿದ್ದು ಅವುಗಳನ್ನು ಅವಲಂಬಿಸಿ ವರ್ಣನಾತ್ಮಕ ಸೂಚಿ ರಚಿಸಿದರೆ ಅದು ಸಮಗ್ರ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಾಗುತ್ತದೆ. ಒಂದು ಕೃತಿ ಅಸಮಗ್ರವಾಗಿ ದೊರೆತಿದ್ದು ಅಥವಾ ಆ ಕೃತಿಯಲ್ಲಿ ಅನೇಕ ಮಾಹಿತಿಗಳೂ ಅಲಭ್ಯವಾಗಿದ್ದರೆ ಅದು ಅಸಮಗ್ರ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಾಗುತ್ತದೆ.

ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ತಯಾರಿಕೆ

ಹಸ್ತಪ್ರತಿ ಸೂಚಿಗಳನ್ನು ತಯಾರಿಸುವುದರಿಂದ ಆ ಹಸ್ತಪ್ರತಿ ಯಾವ ಬಗೆಯದು ಆ ಹಸ್ತಪ್ರತಿಯಲ್ಲಿರುವ ಕೃತಿ ಯಾರದು, ಆ ಹಸ್ತಪ್ರತಿಯಲ್ಲಿ ಎಷ್ಟು ಕೃತಿಗಳಿವೆ ಎಂಬ ಸಾಮಾನ್ಯ ಮಾಹಿತಿ ಸಿಗುತ್ತದೆ. ಒಂದು ಗ್ರಂಥ ಭಂಡಾರದಿಂದ ತಿಳಿಯಬಹುದಾದ ಈ ಸಂಗತಿ ಸಾಮಾನ್ಯವಾಗಿ ಸಾಕಾಗುತ್ತದೆ. ಅಂದರೆ ಸಾಮಾನ್ಯರಿಗೆ ಹಸ್ತಪ್ರತಿ ಸೂಚಿಯಿಂದ ಸಿಗುವ ಮಾಹಿತಿಯಷ್ಟು ಸಾಕು. ಆದರೆ ಸಂಶೋಧಕರಿಗೆ, ಗ್ರಂಥಸಂಪಾದಕರಿಗೆ ಇಷ್ಟೇ ವಿಷಯ ಸಾಲದು. ವರ್ಣನಾತ್ಮಕ ಸೂಚಿಯೇ ಬೇಕಾಗುತ್ತದೆ. ವರ್ಣನಾತ್ಮಕ ಸೂಚಿಯು ಸಾಮಾನ್ಯವಾಗಿ ಈ ಕೆಳಗಿನ ೨೦ ಅಂಶಗಳನ್ನು ಒಳಗೊಂಡಿರಬೇಕು.

೧. ಶೀರ್ಷಿಕೆ
೨. ಕೃತಿ
೩. ಕಾಲ
೪. ಕರ್ತೃ
೫. ಲಿಪಿ
೬. ಪತ್ರಸಂಖ್ಯೆ
೭. ಕ್ರಮಸಂಖ್ಯೆ
೮. ಪತ್ರದ ವಸ್ತು (ಕೋರಿಕಾಗದವೇ, ಓಲೆಗರಿಯೇ?)
೯. ಪತ್ರದ ಒಂದು ಮಗ್ಗುಲಲ್ಲಿರುವ ಸಾಲುಗಳು
೧೦. ಪ್ರತಿಸಾಲಿನಲ್ಲಿರುವ ಅಕ್ಷರಗಳ ಸರಾಸರಿ ಅಕ್ಷರಗಳು
೧೧. ಪ್ರತಿ ಸಮಗ್ರವೇ ಅಸಮಗ್ರವೇ
೧೨. ಪ್ರತಿಯ ಕಾಲ
೧೩. ಲುಪ್ತ (ಇಲ್ಲ) ಹಾಳೆಗಳು ಅಥವಾ ಹರಿದ ಹಾಳೆಗಳು
೧೪. ಪ್ರತಿಕಾರ ಹೆಸರು
೧೫. ಪ್ರತಿ ದೊರೆತ ಸ್ಥಳ
೧೬. ಪ್ರಕಟಿತವೇ ? ಅಪ್ರಕಟಿತವೇ
೧೭. ಕೃತಿಯ ಆದಿ
೧೮. ಕೃತಿಯ ಅಂತ್ಯ
೧೯. ಕಟ್ಟಿನಲ್ಲಿರುವ ಇತರ ಗ್ರಂಥಗಳು

೨೦. ಕೃತಿಯ ಸಾಹಿತ್ಯ ಪ್ರಕಾರ ಕಾವ್ಯ, ಗದ್ಯ, ಪದ್ಯ, ಹೆಸರು ಇತ್ಯಾದಿ ವಿವರಗಳನ್ನು ಒಳಗೊಂಡಿರುತ್ತದೆ.

ಹಸ್ತಪ್ರತಿಗಳ ಬಗ್ಗೆ ಪೂರ್ಣ ಮಾಹಿತಿ ದೊರೆಯುವುದು ವಿವರಣಾತ್ಮಕ ಹಸ್ತಪ್ರತಿ ಸೂಚಿಗಳಿಂದಲೇ. ಈ ಬಗೆಯ ವಿವರಗಳನ್ನು ಒಳಗೊಂಡ ಹಸ್ತಪ್ರತಿಗಳ ಸೂಚೀಕರಣ ಬಹು ಹಿಂದಿನಿಂದಲೂ ವಿದೇಶಿಯರಿಂದ ನಡೆದು ಬಂದಿದೆ. "ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಬಾಡ್ಲೆಯಿನ್ ಗ್ರಂಥಾಲಯದಲ್ಲಿದ್ದ ಭಾರತೀಯ ಹಸ್ತಪ್ರತಿಗಳ ಸೂಚಿಯೊಂದನ್ನು ಥಿಯೋಡೋರ ಜಾಫ್ರೆಟ್ ಎಂಬ ಪಾಶ್ಚಾತ್ಯ ವಿದ್ವಾಂಸರು ಪರಿಶೀಲಿಸಿ. ೧೮೫೯ರಲ್ಲಿಯೇ ಪ್ರಕಟಿಸಿದರು. ತದನಂತರ ಫ್ರಾಂರ್ಝ್, ಕೀಲ್ ಹಾರ್ನ್, ಜಾರ್ಜ್ ಬುಹ್ಲರ್ ಆಗಿನ ಮುಂಬೈ ಪ್ರಾಂತದ ದಕ್ಷಿಣ ಹಾಗೂ ಮಧ್ಯಪ್ರಾಂತದಲ್ಲಿನ ವಿಭಾಗದಲ್ಲಿದ್ದ ಖಾಸಗಿ ಹಸ್ತಪ್ರತಿಗಳ ಗ್ರಂಥಾಲಯ ಸೂಚಿಗಳನ್ನು ತಯಾರಿಸಿದರೆ ಬುಹ್ಲರ್ ಅವರು ಗುಜರಾತ್, ಸಿಂಧ್, ರಾಜಪುತಾನ ಮೊದಲಾದ ಕಡೆಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಯನ್ನು ಬರ್ನೆಲ್ ಅವರು ತಂಜಾವೂರು ಅರಮನೆಯಲ್ಲಿದ್ದು ಹಸ್ತಪ್ರತಿಗಳನ್ನು ತಯಾರಿಸಿದರು".[೧೪]

ಎಂ.ಎಂ.ಕಲ್ಬುರ್ಗಿಯವರು ದರ್ಶಕ ಸೂಚಿ, ವಿವರಣಾತ್ಮಕ ಸೂಚಿ ಸಮಗ್ರ ಸೂಚಿ ಎಂದು ಸೂಚೀಕರಣ ವಿಧಾನಗಳನ್ನು ವರ್ಗೀಕರಿಸಿದ್ದಾರೆ. ಈಗಾಗಲೇ ಬೇರೆ ಬೇರೆ ಸಂಸ್ಥೆಗಳು ಪ್ರಕಟಿಸಿದ ಸೂಚಿಗಳನ್ನು, ಅದರ ವಿವರಗಳನ್ನು ಗಮನಿಸಿ ಅವರು ತಮ್ಮದೇ ಆದ ಸೂಚೀಕರಣ ವಿಧಾನವನ್ನು ರೂಪಿಸಿದ್ದಾರೆ. ಇದು ಜನಪ್ರಿಯವೂ ಆಗಿದೆ. ಅಷ್ಟೇ ಉಪಯುಕ್ತವೂ ಆಗಿದೆ. ಆದರೂ ಅದಕ್ಕೆ ಕೆಲವಾರು ಮಿತಿಗಳೂ ಇವೆ. ಹೀಗಿದ್ದರೂ ಉಳಿದ ಸಂಸ್ಥೆಗಳ ಸೂಚಿಗಳಿಗಿಂತ ಮೇಲೆನಿಸಿದೆ. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಕನ್ನಡ ಹಸ್ತಪ್ರತಿಗಳ ನಾಲ್ಕು ಸಂಪುಟಗಳಲ್ಲಿ ಕಲ್ಬುರ್ಗಿಯವರು ತಮ್ಮ ಕೃತಿಯಲ್ಲಿ ನಿರೂಪಿಸಿದ ಕೃತಿ – ಪ್ರತಿ ಪರಿಚಯ ವಿಧಾನವನ್ನೇ ಸೂಚೀಕರಣಕ್ಕೆ ಬಳಸಿಕೊಂಡಿದ್ದಾರೆ. ಅಲ್ಲಲ್ಲಿ ಕೆಲವಾರು ಮಾರ್ಪಾಡುಗಳನ್ನು ಅವರು ಮಾಡಿಕೊಂಡಿದ್ದಾರೆ. ಉದಾಹರಣೆಗೆ ಕಲ್ಬುರ್ಗಿ ಹೇಳುವಂತೆ "ಒಂದು ಕಟ್ಟಿನಲ್ಲಿ ಅನೇಕ ಪ್ರತಿಗಳು ಅಡಕವಾಗಿದ್ದರೆ ಮೊದಲಿನ ಪ್ರತಿಯ ಸೂಚೀ ಕಾರ್ಡಿನಲ್ಲಿ ಮಾತ್ರ ಎಲ್ಲ ಪ್ರತಿಗಳ ಯಾದಿಯನ್ನು ಕೊಡಬೇಕು".[೧೫] ಆದರೆ ಹಂಪಿ ಕನ್ನಡ ವಿಶ್ವವಿದ್ಯಾಲಯ "ಸಂಸ್ಕೃತ ಮತ್ತು ಇತರ ಭಾಷೆಗಳ ಕೃತಿಸೂಚಿಯನ್ನು ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಿಸಲಾಗುವುದರಿಂದ ಅಂಥ ಕೃತಿಗಳನ್ನು ಕೈಬಿಟ್ಟು ಇಲ್ಲಿ ಕೇವಲ ಕನ್ನಡ ಕೃತಿಗಳನ್ನು ಗಮನಿಸಲಾಗಿದೆ"[೧೬] ಎಂದು ಹೇಳಿದ್ದಾರೆ. ಇಲ್ಲಿ ಕಟ್ಟಿನಲ್ಲಿರುವ ಎಲ್ಲ ಕೃತಿಗಳ ಯಾದಿ ಕೊಡಬೇಕೆಂಬ ನಿಯಮ ಪಾಲಿಸಿಲ್ಲ. ಇದು ತಪ್ಪೂ ಅಲ್ಲ. ತನ್ನ ನೀತಿಗೆ ಅನುಗುಣವಾಗಿ ಮಾಡಿಕೊಂಡ ಅರ್ಥಪೂರ್ಣ ಮಾರ್ಪಾಡು.

ಸೂಚೀಕರಣ ವಿಧಾನ – ಕೃತಿ – ಪ್ರತಿ ಪದ್ಧತಿ :

ಯಾವುದೇ ಹಸ್ತಪ್ರತಿಯಲ್ಲಿ ಕೃತಿ ಮತ್ತು ಪ್ರತಿ ಎಂಬ ಎರಡು ಅಂಶಗಳು ಒಳಗೊಂಡಿರುತ್ತದೆ. ಕೃತಿ ಎಂದರೆ ಕವಿ ನಿರ್ಮಿತ ಪಾಠ. ಪ್ರತಿಯೆಂದರೆ ಲಿಪಿಕಾರ ನಿರ್ಮಿತ ಪಾಠ ಮತ್ತು ಬಳಸಿದ ವಸ್ತುಗಳಾಗಿದೆ. ಆದ್ದರಿಂದ ಹಸ್ತಪ್ರತಿ ವಿವರವನ್ನು ಕೃತಿ ಪರಿಚಯ – ಪ್ರತಿಪರಿಚಯ ಎಂದು ಎರಡು ಹಂತಗಳಲ್ಲಿ ಹೀಗೆ ಸೂಚಿಯಲ್ಲಿ ಸಂಗ್ರಹಿಸಬಹುದು.

ಕೃತಿ ಪರಿಚಯ

೧. ಶೀರ್ಷಿಕೆ
೨. ಪ್ರಕಾರ
೩. ವಿಶೇಷ
೪. ಕವಿ
೫. ಕಾಲ
೬. ಸ್ಥಳ
೭. ವಿಷಯ
೮.ಪ್ರಕಟಿತ/ಅಪ್ರಕಟಿತ

ಪ್ರತಿ ಪರಿಚಯ

೧. ಬರೆಯಲು ಬಳಸಿದವಸ್ತು ಮತ್ತು ಸಂಖ್ಯೆ
೨. ಹಸ್ತಪ್ರತಿಯ ಸ್ವರೂಪ
೩. ಆದಿ
೪. ಅಂತ್ಯ
೫. ವಿಶೇಷ
೬. ಕಟ್ಟಿನಲ್ಲಿರುವ ಪ್ರತಿಗಳು
೭. ಆಕಾರ
೮. ಪುಟ ಸಂಖ್ಯೆ
೯. ಲಿಪಿಸ್ವರೂಪ
೧೦. ಭಾಷಾ ಸ್ವರೂಪ

ಕೃತಿ ಪರಿಚಯದ ಮಾದರಿ

೧. ಅನುಭವಾಮೃತ
(ಶೀರ್ಷಿಕೆ)

೨. ಮಹಲಿಂಗರಂಗ – ೧೬೭೫
(ಕವಿ – ಕಾಲ)

೩. ಭಾಮಿನಿ ಷಟ್ಪದಿ
(ಪ್ರಕಾರ)

೪. ವೇದಾಂತ ವಿಚಾರ ತಿಳಿಯುತ್ತದೆ.
(ವಿಷಯ)

೫. ತಾ.ಪ್ರ. ೪೧೪	೭. ೧೪" + ೨"	೯. ೩೫–೯೯
(ವಸ್ತು – ಸಂಖ್ಯೆ)	(ಆಕಾರ)	(ಪುಟಸಂಖ್ಯೆ)
೬. ಹಸ್ತಪ್ರತಿ (ಮಧ್ಯಮ ಸ್ವರೂಪ)	೮. ಮಧ್ಯಮ	೧೦.ಸಾಧಾರಣ
	(ಲಿಪಿ ಸ್ವರೂಪ)	(ಭಾಷಾ ಸ್ವರೂಪ)

ಆದಿ : ಬಾಲಕನೆ ಕೇಳು ಚಾಕ್ಷುಷ ಮೂಲವೆಂದೇ ಪ್ರಬಲ ಶೃತಿ ಶಿಲ ಜಾಲದುರ್ಬಲ ಶೃತಿ ಶಶಿಗಳನ್ನು ಖಂಡಿಸುವುದೆಂದಾ ೬೪ ಘಟಕೆ ಬೆಳಗುವ ದೀಪವೆಕೆಂತಾ ಘಟಕೆ ಭಿನ್ನಕೆಯಾಗಿ ತೋರ್ಪುದೆ ಸಟೆಯನಿಪ ಸುಶ್ರಾದ್ಧ್ಯನಾತ್ಮಗಳು ಪ್ರಕಾಶಿಸುವಾ.

ಅಂತ್ಯ: ಅನ್ನಮಯ ಮೊದಲಾದ ಕೋಶಗಳಂ + + + + ನಲ್ಲೆಂದಾತ್ಮ ಬುದ್ಧಿಯ ಬನ್ನ ಬಿಡಿಸುವ ಬುದವು ತಾನಲ್ಲವೆಂದೆಂಬಾ / ಭಿನ್ನ ಬುದ್ಧಿ......"

ವಿಶೇಷ : ಅಸಮಗ್ರ, ಅಕ್ಷರಗಳು ಸಾಧಾರಣ.

ಈ ಕಟ್ಟಿನಲ್ಲಿರುವ ಕೃತಿಗಳು

ಅನುಭವಾಮೃತ (ತಾ.ಪ್ರ ಮ ೧೪೩.೧)

ಗಂಗೆ ಗೌರಿ ಸಂವಾದ (ತಾ.ಪ್ರ.ಮ ೧೪೩.೨)

ಭೈರವೇಶ್ವರನ ಕಥೆ (ತಾ.ಪ್ರ.ಮ ೧೪೩.೩)

ಅನುಬಂಧದಲ್ಲಿ ಕವಿಸೂಚಿ, ಸ್ಥಳನಾಮಸೂಚಿ, ಹಸ್ತಪ್ರತಿ ಲಿಪಿಕಾರರ ಸೂಚಿ, ಹಸ್ತಪ್ರತಿ ನೀಡಿದ ದಾನಿಗಳ ಹೆಸರುಗಳನ್ನು ನೀಡಲಾಗಿದೆ. ಇದು ಕರ್ನಾಟಕ ವಿಶ್ವವಿದ್ಯಾಲಯದ ಸೂಚಿಯ ವೈಶಿಷ್ಟ್ಯವಾಗಿದೆ.[೧೭]

ಮೇಲ್ಕಂಡ ಸೂಚಿಯ ಶೀರ್ಷಿಕೆಗಳ ಬಗ್ಗೆ ಕಲ್ಬುರ್ಗಿ ಅವರು ಈ ಕೆಳಕಂಡ ವಿವರಗಳನ್ನು ನೀಡಿದ್ದಾರೆ.

೧. ಸೂಚಿ ಪತ್ರದಲ್ಲಿ ಇಲ್ಲಿ ತೋರಿಸಿರುವ ಶೀರ್ಷಿಕೆ ಪದಗಳಲ್ಲಿ ಆದಿ, ಅಂತ್ಯ, ವಿಶೇಷ ಕಟ್ಟಿನಲ್ಲಿರುವ ಪ್ರತಿಗಳು ಈ ಶೀರ್ಷಿಕೆಗಳನ್ನು ಬಳಸಿಕೊಂಡು ವಿವರಗಳನ್ನು ತುಂಬಬೇಕು.

೨. ಉಳಿದ ಅಂಶಗಳನ್ನು ಶೀರ್ಷಿಕೆ ಬರೆಯದೆ ಒಂದು ಕ್ರಮದಲ್ಲಿ ಆಯಾ ಸ್ಥಾನದಲ್ಲಿ ವಿವರಗಳನ್ನು ತುಂಬಬೇಕು.

ಉದಾ : ಸೂಚಿಯ ಮೊದಲಿಗೆ ಮೇಲ್ಭಾಗದಲ್ಲಿ ಮಧ್ಯದಲ್ಲಿ ಕೃತಿಯ ಹೆಸರಿದೆ. ಅನುಭವಾಮೃತ ಕೃತಿ ಶೀರ್ಷಿಕೆ ಎಂಬ ಶೀರ್ಷಿಕೆ ಇಲ್ಲ.

೩. ಪ್ರಕಾರ ಎಂಬಲ್ಲಿ ಗದ್ಯ, ಚಂಪೂ, ರಗಳೆ, ಷಟ್ಪದಿ ಇತ್ಯಾದಿ ದಾಖಲೆಗಳಿರಬೇಕು.

೪. ವಿಷಯ ಎಂಬಲ್ಲಿ ಪುರಾಣ, ಚರಿತ್ರೆ, ಛಂದಸ್ಸು ಹೀಗೆ ನಮೂದಿಸಬೇಕು.

೫. ವಸ್ತು, ಸಂಖ್ಯೆ ಎಂಬಲ್ಲಿ ಬರೆಯಲು ಬಳಸಿದುದು ತಾಳೆಗರಿಯೋ ಸ್ವದೇಶಿ ಕಾಗದ ಪ್ರತಿಯೋ ಎಂಬ ಸೂಚನೆ ಮತ್ತು ಆ ಹಸ್ತಪ್ರತಿಯ ನಂಬರು ಬರೆಯಬೇಕು. ಉದಾ : ತಾ ಪ್ರ ೧/೪೫, ಸ್ವ ಕಾ ಪ್ರ ೧/೪೫, ವಿ ಕಾ ಪ್ರ/೯೫

೬. ಆಕಾರ ಎಂಬಲ್ಲಿ ಉದ್ದ – ಅಗಲಗಳನ್ನು ಅಂಗಲಗಳಲ್ಲಿ ೩" X ೧೫" ಹೀಗೆ ಬರೆಯಬೇಕು.

೭. ಪುಟದ ಸ್ಥಾನದಲ್ಲಿ ಪ್ರಸ್ತುತ ಕೃತಿ ಯಾವ ಪುಟದಿಂದ ಯಾವ ಪುಟದವರೆಗೆ ವ್ಯಾಪಿಸಿದೆ ಎಂಬುದನ್ನು ಸೂಚಿಸಬೇಕು. ಉದಾ : ೨೫–೭೫

ಕಾರ್ಡುಗಳು

ಇನ್ನು ಹಸ್ತಪ್ರತಿ ಸ್ವರೂಪ, ಲಿಪಿಸ್ವರೂಪ, ಭಾಷಾ ಸ್ವರೂಪಗಳ ವಿಷಯವಾಗಿ ಉತ್ತಮ, ಮಧ್ಯಮ, ಕನಿಷ್ಠ ಎಂಬ ಮಾತುಗಳನ್ನು ಬಳಸಿದರೆ ಸಾಕು ಒಂದು ಕಟ್ಟಿನಲ್ಲಿ ಅನೇಕ ಪ್ರತಿಗಳ ಅಡಕವಾಗಿದ್ದರೆ ಮೊದಲಿನ ಪ್ರತಿಯ ಸೂಚೀ ಕಾರ್ಡಿನಲ್ಲಿ ಮಾತ್ರ "ಕಟ್ಟಿನಲ್ಲಿರುವ ಪ್ರತಿಗಳು" ಶೀರ್ಷಿಕೆಯ ಮುಂದೆ ಅದರಲ್ಲಿರುವ ಪ್ರಥಮೇತರ ಪ್ರತಿಗಳನ್ನು ಪರಿಚಯಿಸುವಾಗ ಹೀಗೆ ಯಾದಿ ಕೊಡದೆ ಕಟ್ಟಿನಲ್ಲಿರುವ ಪ್ರತಿಗಳು ಕಾಲಂ ಮುಂದೆ ನೋಡಿ ಕ್ರಮಾಂಶ....... ಎಂದು ಪ್ರಥಮ ಪ್ರತಿಯ ಕ್ರಮಾಂಶ ಸೂಚಿಸಿದರೆ ಸಾಕು.

ಅನ್ಯ ಭಾಷೆಯ ಹಸ್ತಪ್ರತಿಗಳನ್ನು ಹೊರಗಿಟ್ಟು ಕನ್ನಡ ಭಾಷೆಯ ಹಸ್ತಪ್ರತಿಗಳನ್ನೇ ಕುರಿತು ಸೂಚಿಯನ್ನು ರಚಿಸುತ್ತಿರುವುದರಿಂದ ಭಾಷೆಯೆಂಬ ಶೀರ್ಷಿಕೆಯು ಇಲ್ಲಿ ಅನವಶ್ಯಕ. ಮುದ್ರಿತ ಗ್ರಂಥಗಳಿಗಾಗಿ ೩" + ೫" ಅಳತೆಯ ಕಾರ್ಡುಗಳನ್ನು ಬಳಸುತ್ತೇವೆ.

ಹಸ್ತಪ್ರತಿ ಸಂದರ್ಭದಲ್ಲಿ ವಿವರಗಳ ಸಂಖ್ಯೆ ಬಹಳವಿರುವುದರಿಂದ '೪+೬' ಅಳತೆಯ ಕಾರ್ಡುಗಳನ್ನು ಬಳಸಬಹುದಾಗಿದೆ. ಪ್ರತಿಯೊಂದು ಕಾರ್ಡನ್ನು ಮೂರು ಪ್ರತಿಗಳಾಗಿ ಮುದ್ರಿಸಬೇಕು ಇವುಗಳಲ್ಲಿ ಒಂದು ಕಾರ್ಡನ್ನು ಶೀರ್ಷಿಕೆ ಟೈಟಲ್ ವರ್ಗೀಕರಣಕ್ಕೆ ಸೇರಿಸುತ್ತಿದ್ದಾರೆ. ಅಲ್ಲಿಯ ಕೃತಿ ಶೀರ್ಷಿಕೆಯ ಕೆಳಗೆ ಗೆರೆ ಎಳೆಯಬೇಕು ಇನ್ನೊಂದು ಕಾರ್ಡನ್ನು ಲೇಖಕ ವರ್ಗೀಕರಣಕ್ಕೆ ಸೇರಿಸುತ್ತಿದ್ದರೆ, ಅಲ್ಲಿಯ ಲೇಖಕನ ಹೆಸರಿನ ಕೆಳಗೆ ಗೆರೆ ಎಳೆಯಬೇಕು ಇನ್ನೊಂದು ಕಾರ್ಡನ್ನು ವಿಷಯ (ಸಬ್ಜೆಕ್ಟ್) ವರ್ಗೀಕರಣಕ್ಕೆ ಸೇರಿಸುತ್ತಿದ್ದರೆ ಅಲ್ಲಿನ ವಿಷಯದ ಕೆಳಗೆ ಗೆರೆ ಎಳೆಯಬೇಕು. ಈ ಉದ್ದೇಶದ ಸಫಲತೆಗಾಗಿಯೇ ಕಾರ್ಡಿನಲ್ಲಿ ಶೀರ್ಷಿಕೆ ಲೇಖಕ ವಿಷಯಗಳಿಗೆ ಮೊದಲ ಸಾಲಿನಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದೆ.

ಹೀಗೇ ಸೂಚೀ ಕಾರ್ಡುಗಳನ್ನು ಸಿದ್ಧಪಡಿಸಿ ನೋಂದಣಿ ಪುಸ್ತಕದಲ್ಲಿ ವಿವರಗಳನ್ನು ಬರೆದುಕೊಂಡು, ಕಟ್ಟುಗಳಿಗೆ ಸಂಖ್ಯೆ ಹೆಸರುಗಳನ್ನು ಅಂಟಿಸಿ, ಅವುಗಳನ್ನು ಸಂರಕ್ಷಣಾ ವಿಭಾಗಕ್ಕೆ ಕಳಿಸಬೇಕು. ಒಟ್ಟಿನಲ್ಲಿ ಸೂಚಿಗಳು ರೈಲ್ವೆ ವೇಳಾ ಪಟ್ಟಿಯಂತೆ ಹಸ್ತಪ್ರತಿ ಅಭ್ಯಾಸಿಗಳಿಗೆ ನಿರ್ದಿಷ್ಟ ಮಾರ್ಗದರ್ಶನ ನೀಡಬೇಕು. ಈ ರೀತಿ ಕಾರ್ಡಿನಲ್ಲಿ ಅಡಕಗೊಂಡಿದ್ದರೆ ಗ್ರಂಥರೂಪದಲ್ಲಿ ಪ್ರಕಟಿಸಿದಾಗ ವರ್ಣಾನಾತ್ಮಕ ಹಸ್ತಪ್ರತಿಗಳ ಗ್ರಂಥಸೂಚಿ ಸಿದ್ಧವಾಗುತ್ತದೆ. ಕಲ್ಬುರ್ಗಿಯವರು ಅಚ್ಚುಕಟ್ಟಾಗಿ ಸೂಚೀಕರಣ ಪದ್ಧತಿಯನ್ನು ಸೂಚಿಸಿದ್ದಾರೆ. ಇದಕ್ಕೆ ಪೂರಕವಾಗಿ ಒಂದೆರೆಡು ಸಂಗತಿಗಳನ್ನು ಹೇಳಬಹುದಾಗಿದೆ.

ಕಾರ್ಡುಗಳನ್ನು ಕೆಲವು ವಿಭಾಗಗಳಿಗೆ ಶೀರ್ಷಿಕೆ ಕೊಟ್ಟು ಅಕ್ಷರಗಳು ಲುಪ್ತವಾದಾಗ ಲುಪ್ತಾಕ್ಷರ ಸಂಖ್ಯೆಯನ್ನು + ಚಿಹ್ನೆ ಬಳಸುವುದೂ ಸಾಕಷ್ಟು ಅಕ್ಷರ ಪದಗಳು ಬಿಟ್ಟಿದ್ದರೆ + ಚಿಹ್ನೆ ಹಾಕಿ ೮ ಅಕ್ಷರಗಳು ಇತ್ಯಾದಿ ಲುಪ್ತ ಅಕ್ಷರ ಸಂಖ್ಯೆ ನಮೂದಿಸಬಹುದು ಎನಿಸುತ್ತದೆ. ಇನ್ನು ಹಸ್ತಪ್ರತಿ ಸ್ವರೂಪವನ್ನು ಉತ್ತಮ, ಮಧ್ಯಮ ಕನಿಷ್ಠ ಎಂದು ಸೂಚಿಸುವ ಬದಲು ಸಮಗ್ರ, ಅಸಮಗ್ರ ಅಥವಾ ನಾಲ್ಕು ಗರಿಲುಪ್ತ ಇತ್ಯಾದಿ ಗುರುತಿಸುವುದು ಒಳ್ಳೆಯದು. ವಿಶೇಷದಲ್ಲಿ ಸಚಿತ್ರ – ಅಚಿತ್ರ ಎಂಬಂಶವನ್ನು ಬೆಳ್ಳಿ, ಬಂಗಾರದ ಬಳೆ ಕಟ್ಟು ಇತ್ಯಾದಿ ಇರುವುದನ್ನು ಇತರೆ ವಿಶೇಷ ಅಂಶಗಳನ್ನು ಗುರುತಿಸುವುದು ಒಳ್ಳೆಯದು ಇದು ವಸ್ತುವಿಗೆ ಸಂಬಂಧಿಸಿದ ಸಂಗತಿಯಾದರೂ ಅದನ್ನು ವಿಶೇಷದಲ್ಲಿ ಗುರುತಿಸಬೇಕು.

ಕಟ್ಟುಗಳು :

ಕಟ್ಟುಗಳನ್ನು ಸೂಚಿ ಮಾಡಿದ ಮೇಲೆ ಅವುಗಳನ್ನು ಜೋಡಿಸಿಟ್ಟ ಕ್ರಮವನ್ನು ಬದಲಿಸಬಹುದು. ಕಟ್ಟಿನ ಕ್ರಮಸಂಖ್ಯೆ ಬದಲಿಸಬೇಕಿಲ್ಲ. ಉದಾಹರಣೆಗೆ ವಿಷಯಾನುಸಾರ

ಕಟ್ಟುಗಳನ್ನು ಜೋಡಿಸಿ ಆ ಪ್ರಕಾರದ ವಿಭಾಗದಲ್ಲಿ ಇರುವ ಕಟ್ಟುಗಳ ಸಂಖ್ಯೆಯನ್ನು ಪಟ್ಟಿಮಾಡಿ ಇಟ್ಟರೆ ಆಯಾ ವಿಷಯದ ಅಭ್ಯಾಸಿಗಳು ಒಂದೆಡೆಯೇ ಕುಳಿತು ಅಭ್ಯಾಸಮಾಡಬಹುದು. ಒಟ್ಟಿನಲ್ಲಿ ಸೂಚೀಕರಣ ಕಾರ್ಯ ಅಗತ್ಯದ್ದು ಮಹತ್ವದ್ದು ಎಂಬುದರಲ್ಲಿ ಸಂಶಯವಿಲ್ಲ. ಸೂಚೀಕರಣ ಮಾಡಲು ವ್ಯಕ್ತಿಗೆ ಮುಖ್ಯವಾಗಿ ಭಾಷೆ ಲಿಪಿ ಪರಿಚಯ ಇರಬೇಕು. ಭಾಷೆ – ಲಿಪಿ ಪರಿಚಯ ಇದ್ದರೂ ಎಷ್ಟೋ ಮಂದಿಗೆ ಪರಿಣತಿ ಇರುವುದಿಲ್ಲ, ಕ್ರಮಬದ್ಧ ಅಧ್ಯಯನ ಇರುವುದಿಲ್ಲ ಇದಕ್ಕಾಗಿ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು ಅಗತ್ಯವಿದೆ. ಆಯಾ ಭಂಡಾರಗಳ ಹಿನ್ನೆಲೆಯಲ್ಲಿ ತರಬೇತಿ ಕೊಡುವುದು ಅಗತ್ಯವಿದೆ. ಉದಾಹರಣೆಗೆ ಒಂದು ಭಂಡಾರದಲ್ಲಿ ತಿಗಳಾರಿ ಲಿಪಿ ಹಸ್ತಪ್ರತಿಗಳು ಅಧಿಕವಿದ್ದರೆ ಅದರ ಬಗ್ಗೆ ವಿಶೇಷ ಶಿಬಿರ ಏರ್ಪಡಿಸಬೇಕು.

ಕೆಲವು ವಿಭಾಗಗಳಿಗೆ ಸೂಚಿಯಲ್ಲಿ ಸ್ಥಳ ನಿರ್ದೇಶನ ಮಾಡಿ ಶೀರ್ಷಿಕೆ ಕೊಡಬೇಕಿಲ್ಲ ಎಂದಿದ್ದಾರೆ. ಇದರ ಬದಲಿಗೆ ಆಯಾ ಶೀರ್ಷಿಕೆಗಳಿಗೆ ಸಂಖ್ಯೆಕೊಟ್ಟು ಸಂಖ್ಯೆ ಹಾಕಬಹುದು ಇಲ್ಲವೇ ಶೀರ್ಷಿಕೆಗಳನ್ನೇ ಅಚ್ಚುಮಾಡಿದ್ದರೆ. ತಪ್ಪಿಲ್ಲ, ಹೆಚ್ಚು ಅನುಕೂಲ ಎನಿಸುತ್ತದೆ. ಕಟ್ಟುಗಳಲ್ಲಿ ಇರುವ ಇತರ ಕೃತಿಗಳನ್ನು ಪಟ್ಟಿ ಮಾಡಬಹುದು ಸರಿ. ಆದರೆ, ಅದರಲ್ಲಿ ಕೇವಲ ಹೆಸರು ಹೇಳುವುದರ ಜೊತೆಗೆ ಭಾಷೆ / ಲಿಪಿ ತಿಳಿಯುವುದು ಮುಖ್ಯ ಅಥವಾ ಕನ್ನಡೇತರ ಕೃತಿ ಇದ್ದಲ್ಲಿ ತಿಳಿಯುತ್ತದೆ. ಕೃತಿಯ ಪರಿಚಯ ಮತ್ತು ಪ್ರತಿಯ ಪರಿಚಯದ ನಡುವೆ ದಪ್ಪ ದಪ್ಪ ಕಪ್ಪು ಚುಕ್ಕೆಗಳನ್ನು ಅವೆರಡನ್ನು ಪ್ರತ್ಯೇಕಿಸಲು ಬಳಸಲಾಗುತ್ತಿದೆ. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಗಳನ್ನು ಗಮನಿಸಬಹುದು. ಈ ಸೂಚಿಯನ್ನು ಕನ್ನಡ ಹಸ್ತಪ್ರತಿ ಶಾಸ್ತ್ರಗ್ರಂಥದಲ್ಲಿ ಎಂ.ಎಂ. ಕಲ್ಬುರ್ಗಿಯವರು ಉಲ್ಲೇಖಿಸಿದಂತಿಲ್ಲ (ನೋಡಿ : ಕನ್ನಡ ಹಸ್ತಪ್ರತಿಶಾಸ್ತ್ರ) ಆಮೇಲೆ ಅಳವಡಿಸಿಕೊಂಡ ಸೂಚನೆ ಆಗಿರಬೇಕು. ಕಪ್ಪು ದಪ್ಪ ಚುಕ್ಕೆ ಬದಲು ಅಡ್ಡಗೆರೆಯನ್ನು ಬಳಸಬಹುದು. ಏಕೆಂದರೆ ಕೈಯಲ್ಲಿ ಸೂಚೀ ಸಂಪುಟ ಬರೆಯುವಾಗ ಕಪ್ಪು ಚುಕ್ಕೆ ಗುರುತಿಸುವುದಕ್ಕಿಂತ ಗೆರೆ ಎಳೆಯುವುದು ಸುಲಭ. ಹಸ್ತಪ್ರತಿ ದೊರೆತ ಸ್ಥಳಗಳನ್ನು ಕನ್ನಡ ಅಧ್ಯಯನ ಪೀಠದ ಸೂಚಿಯಲ್ಲಿ ಲೇಖಕನ ಸ್ಥಾನದ ಕೆಳಗೆ ಮುದ್ರಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯದ ಸೂಚಿಯಲ್ಲಿ ಅನುಬಂಧವಾಗಿ ಹಸ್ತಪ್ರತಿ ದೊರೆತ ಸ್ಥಳಗಳ ಪಟ್ಟಿ ನೀಡಲಾಗಿದೆ. ಇವೆರಡೂ ಇಲ್ಲಿನ ಸೂಚಿಗಳಲ್ಲಿವೆ. ಇವೆರಡರಲ್ಲಿ ಒಂದು ಕ್ರಮವನ್ನು ಅಗತ್ಯವಾಗಿ ಅನುಸರಿಸಬಹುದು. ಇನ್ನು ವಿವರಗಳು ತಿಳಿಯುವಾಗ ಆ ಸ್ಥಾನದಲ್ಲಿ '?' ಬಳಸಿದ್ದಾರೆ. ಪ್ರತಿಯಲ್ಲಿ ಅಕ್ಷರ ವಾಕ್ಯ ಲುಪ್ತವಾಗಿದ್ದರೆ XXX ಚಿಹ್ನೆಯನ್ನು, ಹಸ್ತಪ್ರತಿಯಲ್ಲಿದ್ದು ಸೂಚಿಯಲ್ಲಿ ಬಿಟ್ಟಿದ್ದರೆ......... ಚುಕ್ಕೆ ಸಾಲುಗಳನ್ನು ಬಳಸಲಾಗಿದೆ ಇದು ಸೂಕ್ತವಾಗಿದೆ.

ಸೂಚೀಕರಣ ಮಾಡುವುದು ಹಸ್ತಪ್ರತಿ ಭಂಡಾರಗಳಲ್ಲಿ ಸಾಮಾನ್ಯ ಪದ್ಧತಿ. ಈಗ ಹಸ್ತಪ್ರತಿಗಳ ಪ್ರತಿ ತೆಗೆವ ಆಧುನಿಕ ವಿದ್ಯುನ್ಮಾನ ಯಂತ್ರ ವ್ಯವಸ್ಥೆ ಇರುವುದರಿಂದ ಹಾಗೆ

ಪ್ರತಿಗಳನ್ನು ತೆಗೆದು ವಿದ್ವಾಂಸರಿದ್ದ ಕಡೆಗೆ ಕಳಿಸಿ ಸೂಚೀ ಕಾರ್ಡುಗಳನ್ನು ಮಾಡಿದರೆ ಕೆಲಸ ಶೀಘ್ರವಾಗಿ ನಡೆಯುತ್ತದೆ. ನಮ್ಮಲ್ಲಿ ಎಲ್ಲಾ ಕಡೆ ಎಲ್ಲಾ ಭಾಷೆ ತಿಳಿದ ಪರಿಣಿತರು ಹಸ್ತಪ್ರತಿ ಭಂಡಾರಗಳಲ್ಲಿ ಇರುವುದಿಲ್ಲ ಅಥವಾ ಎಲ್ಲಾ ಭಾಷೆಗಳಿಗೆ ಕರೆಸಿ ಇರಿಸಿಕೊಳ್ಳಲು ಸಾಧ್ಯವಿಲ್ಲ ಶಾಸ್ತ್ರ ಗ್ರಂಥಗಳ ಸೂಚಿಗೆ ಕೇವಲ ಭಾಷೆ ಲಿಪಿ ತಿಳಿದರೆ ಸಾಲದು ಶಾಸ್ತ್ರ ಪರಿಚಯವೂ ಇರಬೇಕಾಗುತ್ತದೆ. ಈ ದಿಸೆಯಲ್ಲಿ ಪ್ರಯೋಗ ನಡೆಸಬಹುದು.

ಹಸ್ತಪ್ರತಿ ಸೂಚಿಗಳನ್ನು ಕಟ್ಟುಗಳ ಪ್ರಕಾರ ಮಾಡುವ ಬದಲು ಮೊದಲು ಏಕ ಪ್ರತಿಗಳನ್ನು ಜೀರ್ಣವಾದ ಪ್ರತಿಗಳನ್ನು ಮಹತ್ವದ ಕೃತಿಗಳನ್ನು ಅಪ್ರಕಟಿತ ಕೃತಿಗಳ ಸೂಚಿಯನ್ನು ಸಿದ್ಧಪಡಿಸಿ ಅನಂತರ ಉಳಿದ ಕೃತಿಗಳ ಸೂಚಿ ಮಾಡಬಹುದು. ತಜ್ಞರ ಸಮಿತಿ ಯಾವುದನ್ನು ಮಾಡಬೇಕು ಎಂಬುದನ್ನು ನಿರ್ಧರಿಸಬೇಕು.

ನಮ್ಮ ನಾಡಿನಲ್ಲಿ ಇರುವ ಹಸ್ತಪ್ರತಿಗಳ ಸಂಖ್ಯೆ, ಸೂಚೀ ಮಾಡಲು ಬೇಕಾದ ಜನ ಕಾಲ ಇವುಗಳನ್ನು ಲೆಕ್ಕ ಹಾಕಿ ಈ ಬಗ್ಗೆ ಯೋಜನೆಯನ್ನು ರೂಪಿಸಬೇಕು. ಹಂಪಿ ಕನ್ನಡ ವಿಶ್ವವಿದ್ಯಾಲಯ ಯೋಜಿಸಿರುವಂತೆ ವರ್ಷ ವರ್ಷ ಪದೇ ಪದೇ ಹಸ್ತಪ್ರತಿ ವ್ಯಾಸಂಗ ಶಿಬಿರಗಳನ್ನು ಏರ್ಪಡಿಸುವುದು ಅಗತ್ಯವಿದೆ. ಇನ್ನು ಸೂಚೀ ಕಾರ್ಡುಗಳನ್ನು ಏಕರೂಪವಾಗಿ ಸಿದ್ಧಗೊಳಿಸಿ ಎಲ್ಲ ಹಸ್ತಪ್ರತಿ ಭಂಡಾರಗಳೂ ಒಂದೇ ಬಗೆಯ ಸೂಚಿ ಮಾದರಿಯನ್ನು ಬಳಸುವುದು ಅಗತ್ಯವಾಗಿದೆ.

ಸಂಕೇತಾಕ್ಷರಗಳು ಮತ್ತು ಚಿಹ್ನೆಗಳು :

ಸೂಚೀಕರಣದಲ್ಲಿ ಸಂಕೇತಾಕ್ಷರಗಳನ್ನು ಸಂಕೇತ ಚಿಹ್ನೆಗಳನ್ನು ಬಳಸುತ್ತೇವೆ. ಈ ಬಗ್ಗೆ ಏಕರೂಪ ಬಳಕೆ ಇಲ್ಲದ್ದನ್ನು ಕಾಣುತ್ತೇವೆ. ಉದಾಹರಣೆಗೆ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿಯಲ್ಲಿ ಸಂಕೇತಾಕ್ಷರಗಳು ತಾಳೆಗರಿ ಪ್ರತಿ = ತಾಪ್ರ ಎಂದು ಬಳಸಿದರೆ, ಮತ್ತು ಕೆಲವು ಓಪ್ರ + ಓಲೆಗರಿ ಪ್ರತಿ ಎಂದಿದ್ದಾರೆ. ದಪ್ಪ ಕಪ್ಪು ಚುಕ್ಕೆಗಳನ್ನು ಕೃತಿ ವಿವರ ಪ್ರತಿ ವಿವರಗಳನ್ನು ಪ್ರತ್ಯೇಕಿಸಲು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಯಲ್ಲಿ ಬಳಸುತ್ತಿದ್ದಾರೆ. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿಯಲ್ಲಿ ಕಟ್ಟಿನಲ್ಲಿರುವ ಪ್ರತಿಗಳ ವಿವರಕ್ಕೆ ಕಪ್ಪು ಚುಕ್ಕೆ ಬಳಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಸೂಚಿಯಲ್ಲಿ ಕನಿಷ್ಠ ಉತ್ತಮ ಮಧ್ಯಮ ಮಾತುಗಳನ್ನು ಬಳಸಿದರೆ ಉತ್ತಮ ಸಾಧಾರಣ ಎಂಬ ಎರಡೇ ಮಾತನ್ನು ಕನ್ನಡ ಅಧ್ಯಯನ ಪೀಠದ ಸೂಚಿಗಳಲ್ಲಿ ಬಳಸಿದೆ. ಬೆಂಗಳೂರು ಹಸ್ತಪ್ರತಿ ವರ್ಣನಾತ್ಮಕ ಸೂಚಿಯಲ್ಲಿ ಪಂಕ್ತಿ ಎಂಬ ಮಾತನ್ನು ಬಳಸಿದರೆ, ಸಾಲು ಎಂಬ ಪದವನ್ನು ಕನ್ನಡ ಅಧ್ಯಯನ ಪೀಠದ ಸೂಚಿಯಲ್ಲಿ ಬಳಸಿದೆ. ವಿಷಯವೆಂಬ ಶೀರ್ಷಿಕೆ ಕೊಟ್ಟರೆ ಪ್ರಾಚ್ಯ ವಿದ್ಯಾಸಂಶೋಧನಾಲಯದ ಸೂಚಿಯಲ್ಲಿ

ವಿಷಯವೆಂಬ ಶೀರ್ಷಿಕೆ ಇಲ್ಲದೆ ವಿಷಯವನ್ನು ಮೇಲ್ಭಾಗದಲ್ಲಿ ನಾಗನೂರು ರುದ್ರಾಕ್ಷಿ ಮಠದ ಹಸ್ತಪ್ರತಿ ಸೂಚಿಯಲ್ಲಿ ಕೊಟ್ಟಿದೆ. ಇದರರ್ಥ ಸರಿ ತಪ್ಪಿನ ಪ್ರಶ್ನೆ ಅಲ್ಲ ಏಕರೂಪತೆ ಇಲ್ಲ ಎಂಬುದನ್ನು ಗಮನಿಸಬೇಕು, ಒಟ್ಟಿನಲ್ಲಿ ಪಾರಿಭಾಷಿಕ ಪದಗಳು ಮತ್ತು ಸಂಕೇತಾಕ್ಷರಗಳು ಹಾಗೂ ಲೇಖನ ಚಿಹ್ನೆಗಳನ್ನು ಬಳಸುವಲ್ಲಿ ಒಂದು ಶಿಷ್ಟ ರೂಪ (ಸ್ಟ್ಯಾಂಡರ್ಡ್ ಫಾರಂ) ಬಳಸುವುದು ಉಚಿತ. ಹಸ್ತಪ್ರತಿ ಸೂಚಿ ಮಾಡಲು ಆಧಾರ ಪ್ರಾಯವಾದುದು ಹಸ್ತಪ್ರತಿ. ಹಸ್ತಪ್ರತಿಗಳು ನಿರ್ದಿಷ್ಟ ಭಾಷೆ ಮತ್ತು ಲಿಪಿಯನ್ನು ಒಳಗೊಂಡಿರುತ್ತದೆ. ಹಸ್ತಪ್ರತಿಯನ್ನು ಓದಿ ಅರ್ಥಮಾಡಿಕೊಳ್ಳಲು ಭಾಷೆಯ ಪರಿಚಯವೂ ಇರಬೇಕು. ಲಿಪಿಯ ಪರಿಚಯವೂ ಇರಬೇಕು ಭಾಷೆ ತಿಳಿದಿದ್ದು ಲಿಪಿಗೊತ್ತಿದ್ದರೆ, ಲಿಪಿ ಗೊತ್ತಿದ್ದು ಭಾಷೆ ತಿಳಿಯದಿದ್ದರೆ ಹಸ್ತಪ್ರತಿ ಅಧ್ಯಯನ ಪರಿಚಯ ಸಾಧ್ಯವಿಲ್ಲ ಉದಾಹರಣೆಗೆ, ಸಂಸ್ಕೃತ ಗ್ರಂಥವೊಂದು ಕನ್ನಡ ಲಿಪಿಯಲ್ಲಿ ಇದ್ದಾಗ ಓದಬಹುದು ಆದರೆ ಸಂಸ್ಕೃತ ಭಾಷೆ ತಿಳಿಯದಿದ್ದಾಗ ಗ್ರಂಥ ಅರ್ಥವಾಗುವುದಿಲ್ಲ ಹಾಗೆಯೇ ಕನ್ನಡ ಗ್ರಂಥವೊಂದನ್ನು ಉದಾಹರಣೆಗೆ, ಪುರಂದರದಾಸರ ಕೀರ್ತನೆಗಳು ದೇವನಾಗರಿ ಲಿಪಿಯಲ್ಲಿ ಇದ್ದಾಗ ಭಾಷೆ ತಿಳಿದಿದ್ದರೂ ಲಿಪಿಯ ಕಾರಣ ಓದಲಾಗುವುದಿಲ್ಲ. ಆದ್ದರಿಂದ ಹಸ್ತಪ್ರತಿಯ ವಿವರಗಳನ್ನು ತಿಳಿಯಲು ಭಾಷೆ ಲಿಪಿ ಎರಡೂ ಅವಶ್ಯವಿದೆ.

ಇನ್ನು ಭಾಷೆ ಮತ್ತು ಲಿಪಿಗಳು ಶತಮಾನಗಳಿಂದ ಬೆಳೆದುಬಂದು ಅದಕ್ಕೆ ಅದರದೇ ಇತಿಹಾಸವಿರುತ್ತದೆ. ಕನ್ನಡ ಭಾಷೆಯಲ್ಲಿ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ಅವಸ್ಥಾಂತರಗಳನ್ನು ಕಾಣುತ್ತೇವೆ. ಹಳಗನ್ನಡದ ವ್ಯಾಕರಣಕ್ಕೂ ಹೊಸಗನ್ನಡ ವ್ಯಾಕರಣಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಜತೆಗೆ ಹಳಗನ್ನಡ ಲಿಪಿಯೂ ಹೊಸಗನ್ನಡ ಲಿಪಿಯೂ ವ್ಯತ್ಯಾಸಗಳನ್ನು ಹೊಂದಿವೆ. ಭಾಷೆ ಮತ್ತು ಲಿಪಿ ಎರಡೂ ಕಾಲಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿದೆ. ಈ ಕಾರಣದಿಂದ ಹಸ್ತಪ್ರತಿ ಓದಿಗೆ, ಭಾಷಾ ವಿಕಾಸದ ಹಿನ್ನೆಲೆಯಲ್ಲಿ ವ್ಯಾಕರಣ ಛಂದಸ್ಸು ಮತ್ತು ಲಿಪಿ, ಭಾಷಾ ಅಧ್ಯಯನ ಬೇಕಾಗುತ್ತದೆ. ಹಸ್ತಪ್ರತಿಯ ಕಾಲನಿರ್ಧಾರಕ್ಕೂ ಈ ಲಿಪಿ, ಭಾಷಾ ಅಧ್ಯಯನ ನೆರವಾಗುತ್ತದೆ. ಉದಾಹರಣೆಗೆ : ೞ/ಱ ಪ್ರಯೋಗ ಇರುವ ಪ್ರತಿ ಇಲ್ಲದ ಪ್ರತಿ ಕಂಡಾಗ, ೞ/ಱ ಪ್ರಯೋಗದ ಪ್ರತಿ ಪ್ರಾಚೀನತೆ ಹಿನ್ನೆಲೆಯಲ್ಲಿ ಕೃತಿಯ ಕಾಲ ನಿರ್ಧರಿಸಲು ನೆರವು ಸಿಗುತ್ತದೆ. ಆದಕಾರಣ ಹಸ್ತಪ್ರತಿ ಸೂಚಿ ರಚನೆಗೆ ಮೊದಲ ಸಿದ್ಧತೆ ಎಂದರೆ ಹಸ್ತಪ್ರತಿಯ ಭಾಷೆ ಲಿಪಿಯ ಪರಿಚಯ ಇರುವುದೇ ಆಗಿದೆ.

ಇಲ್ಲಿಯವರೆಗೆ ಪ್ರಕಟವಾದ ಕನ್ನಡ ಹಸ್ತಪ್ರತಿಗಳ ಸೂಚೀ ಸಂಪುಟಗಳ ಸಂಖ್ಯೆ ನೂರನ್ನೂ ಮೀರಿದೆ. ೧೮೨೮ರಲ್ಲಿ ಪ್ರಕಟವಾದ ಎಚ್.ಎಚ್. ವಿಲ್ಸನ್ನರ ಸಂಪಾದಕತ್ವದಲ್ಲಿ ಪ್ರಕಟಿಸಿದ ಮೆಕೆಂಜಿ ಸಂಗ್ರಹವಾದ ಎ ಡಿಸ್ಕ್ರಿಪ್ಟೀವ್ ಕ್ಯಾಟಲಾಗ್ ಆಫ್ ದಿ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಎಂಬುದೇ ಹಸ್ತಪ್ರತಿ ಸೂಚಿಯ ಮೊದಲ ಕೃತಿ. ಇದರಲ್ಲಿ ಹಲವಾರು ಕನ್ನಡ ಕೃತಿಗಳ ವಿವರಗಳಿರುವುದನ್ನು ಗಮನಿಸಬಹುದು.

೧೮೨೮ರ ನಂತರ, ಮೊದಲ ಹಸ್ತಪ್ರತಿ ಸೂಚಿ ಪ್ರಕಟಣೆಯಾದ ನಂತರ ಮದ್ರಾಸ್, ಹೈದರಾಬಾದ್, ಮೈಸೂರು, ಧಾರವಾಡ, ಬೆಂಗಳೂರು, ಹಂಪಿ ಮೊದಲಾದ ಭಾಗಗಳ ವಿಶ್ವವಿದ್ಯಾಲಯ, ಪ್ರಾಚ್ಯ ವಿದ್ಯಾಕೇಂದ್ರ, ಸಾರ್ವಜನಿಕ ಸೇವಾ ಸಂಸ್ಥೆ, ಧಾರ್ಮಿಕ ಕೇಂದ್ರಗಳು ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿ ಸಂಪುಟಗಳನ್ನು ನಿರಂತರವಾಗಿ ಪ್ರಕಟಿಸುತ್ತಾ ಬಂದಿವೆ. ಈ ಬಗ್ಗೆ ಎಂ.ಎಂ. ಕಲ್ಬುರ್ಗಿ ಮತ್ತು ಎಸ್. ಶಿವಣ್ಣ ಅವರು ಕನ್ನಡ ಹಸ್ತಪ್ರತಿ ಸೂಚಿಗಳ ಪಟ್ಟಿಯನ್ನು ಪ್ರಕಟಿಸಿದ್ದಾರೆ.

ಶಿವಣ್ಣನವರು ಅ) ಹಸ್ತಪ್ರತಿ ಸೂಚಿಗಳು
ಆ) ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು ಎಂದು

ಟಿಪ್ಪಣಿ ರೂಪದಲ್ಲಿ ವಿಂಗಡಿಸಿದ್ದಾರೆ.[೧೮] ಆದರೆ ಎಂ.ಎಂ. ಕಲ್ಬುರ್ಗಿಯವರು ಹಸ್ತಪ್ರತಿಗಳು ಪ್ರಕಟಿಸಿದ ಸ್ಥಳಗಳನ್ನು ಗಮನದಲ್ಲಿಟ್ಟು ಕೊಂಡು ಸ್ಥಳಾನುಸಾರ ಪಟ್ಟಿಯ ರೂಪದಲ್ಲಿ ವರ್ಗೀಕರಿಸಿದ್ದಾರೆ.

೧) ಮದ್ರಾಸ್ ಹಸ್ತಪ್ರತಿ ಸೂಚಿಗಳು
೨) ಮೈಸೂರು ಹಸ್ತಪ್ರತಿ ಸೂಚಿಗಳು
೩) ಧಾರವಾಡ ಹಸ್ತಪ್ರತಿ ಸೂಚಿಗಳು
೪) ಬೆಂಗಳೂರು ಮತ್ತು ಹೈದರಾಬಾದ್ ಹಸ್ತಪ್ರತಿ ಸೂಚಿಗಳು
೫) ಇತರ ಸೂಚಿಗಳು
೬) ಲೇಖನ ರೂಪದ ಸೂಚಿಗಳು.[೧೯]

ಈ ಇಬ್ಬರು ವಿದ್ವಾಂಸರ ಪಟ್ಟಿಯನ್ನು ಸಮನ್ವಯಗೊಳಿಸಿ ಒಂದು ವಿಶೇಷ ಪಟ್ಟಿಯನ್ನು ಈ ಕೆಳಗಿನಂತೆ ಮಾಡಲಾಗಿದೆ.

೧) ಮಠಗಳಲ್ಲಿರುವ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು
೨) ವ್ಯಕ್ತಿಗಳಲ್ಲಿರುವ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು
೩) ಸರ್ಕಾರಿ ಸಂಸ್ಥೆಗಳ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು

೪) ಖಾಸಗೀ ಸಂಸ್ಥೆಗಳ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು

೫) ವಿಶಿಷ್ಟ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು

೬) ಇತರೇ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು

೧) ಮಠಗಳಲ್ಲಿರುವ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು

1) ಎ ಕ್ಯಾಟಲಾಗ್ ಆಫ್ ಸಂಸ್ಕೃತ ಪ್ರಾಕೃತ ಆ್ಯಂಡ್ ಹಿಂದಿ ವರ್ಕ್ಸ್ ಇನ್ ದಿ ಜೈನ ಸಿದ್ಧಾಂತ ಭವನ ಅರಾ. ೧೯೧೯ರಲ್ಲಿ ಶ್ರೀ ಸುಪಾರ್ಶ್ವದಾಸ್‌ಗುಪ್ತ ಮತ್ತು ಮೂಲಚಂದ್ರ ಜೈನ್ ಅವರಿಂದ ಸಂಪಾದಿತವಾಗಿ ದೇವನಾಗರಿ ಲಿಪಿಯಲ್ಲಿ ಪ್ರಕಟವಾಗಿದೆ. ಇಲ್ಲಿ ಸುಮಾರು ೫೦೦ ಕೃತಿಗಳಿವೆ.

2) ಅ) ಸ್ವಾದಿಯ ಜೈನಮಠದೊಳಗಿರುವ ಕನ್ನಡ ಗ್ರಂಥಗಳು (ಪು. ೧೬೯)

ಆ) ಧರಣೇಂದ್ರಪ್ಪಾ ಅಣ್ಣಾ ಆಲೂರ, ಸಿರ್ಸಿ, ಇವರಲ್ಲಿನ ತಾಡಪತ್ರ ಗ್ರಂಥಗಳು (ಪು. ೧೬೯)

ಇ) ಇಸ್ಲೂರ ಮಠದಲ್ಲಿರುವ ವೀರಶೈವ ಗ್ರಂಥಗಳು (ಪು. ೧೭೦)

ಇವುಗಳನ್ನು ಶ್ರೀ ಕೆ.ಜಿ. ಕುಂದಣಗಾರು ಸಿದ್ಧಪಡಿಸಿದ್ದರು. ಜಯಕರ್ನಾಟಕ ೭.೩.೧೯೨೯ ಪುಟ. ೧೬೯-೭೦ರಲ್ಲಿ ಪ್ರಕಟಿಸಿದ್ದಾರೆ. ಸ್ವಾದಿಯ ಮಠದಲ್ಲಿನ ೨೮ ಕೃತಿಗಳ ಕೃತಿ ಹಾಗೂ ಕರ್ತೃಗಳನ್ನು ಸೂಚಿಸಿದೆ. ಅಲ್ಲದೆ ಕೆಲವು ಕೃತಿಗಳ ಇತರ ಪ್ರತಿಗಳನ್ನು ತಿಳಿಸಿದೆ. ಈ ರೀತಿಯಲ್ಲಿರುವ ಪ್ರತ್ಯಂತರಗಳ ಸಂಖ್ಯೆ ೧೭ ಆಲೂರ ಸಂಗ್ರಹದಲ್ಲಿನ ೮+೨ ಕೃತಿಗಳನ್ನು ಕೊಟ್ಟಿದೆ. ಇಸ್ಲೂರ ಮಠದಲ್ಲಿನ ೨೭ ಕೃತಿಗಳನ್ನು ಸೂಚಿಸಿದ್ದು ಅಚ್ಚಾದ ಕೃತಿಗಳನ್ನು ದಪ್ಪ ಅಕ್ಷರದ ಮೊಳೆಗಳಿಂದ ಸೂಚಿಸಿದೆ.

3) ಶ್ರವಣಬೆಳಗೊಳ ಶ್ರೀ ಜೈನಮಠದ ತಾಡ ಪ್ರತೀಯ ಗ್ರಂಥ ಸೂಚಿ ಶ್ರೀದೇವಕುಮಾರ ಶಾಸ್ತ್ರಿಗಳಿಂದ ಸಂಪಾದಿತವಾಗಿ ೧೯೮೦ರಲ್ಲಿ ಅಚ್ಚಾಗಿದೆ. ಶಾಸ್ತ್ರಿಗಳು ಸೂಚಿಯನ್ನು ಕೆ. ಭುಜಬಲಿ ಶಾಸ್ತ್ರಿಗಳ ಕನ್ನಡ ಪ್ರಾಂತೀಯ ತಾಡಪ್ರತೀಯ ಗ್ರಂಥ ಸೂಚಿ ಮಾದರಿಯಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿ ೪೪೮ ಓಲೆ ಹಾಗೂ ೧೯ ಕಾಗದ ಕಟ್ಟುಗಳ ವಿವರವಿದೆ. ಈ ಸೂಚಿಯಲ್ಲಿ ಕೆಲವು ಕನ್ನಡ ಲಿಪಿಯಲ್ಲಿನ ಸಂಸ್ಕೃತ ಪ್ರಾಕೃತ ಕೃತಿಗಳು ಹಾಗೂ ತಮಿಳು ಲಿಪಿಯ ತಮಿಳು ಕೃತಿಗಳು ಉಲ್ಲೇಖಗೊಂಡಿವೆ.

4) ದೇವನಾಗರಿ ಪ್ರಿಂಟೆಡ್ ಕ್ಯಾಟಲಾಗ್ಸ್ ಆಫ್ ದಿ ಮಾನ್ಯುಸ್ಕ್ರಿಪ್ಟ್ ಇನ್ ದಿ ಮಠ ಆಫ್ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮಿನ್ ಕೊಲ್ಹಾಪೂರ ೧೯೦೦ ೪೪

ಪುಟಗಳಲ್ಲಿ ಮುದ್ರಿತವಾದ ಈ ಸೂಚಿಯನ್ನು ನಾನು ನೋಡಿಲ್ಲ. ೧೯೭೮ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ 'ಕನ್ನಡ ಅಧ್ಯಯನ ಪೀಠ' ದ ಕೆಲವರು ಡಾ॥ ಎಂ.ಎಂ. ಕಲಬುರ್ಗಿಯವರೊಡನೆ ಹೋಗಿ ಈ ಭಂಡಾರದಲ್ಲಿನ ಕನ್ನಡ ಕೃತಿಗಳನ್ನು ಸಮಗ್ರವಾಗಿ ಪರಿಶೀಲಿಸಿದ್ದಾರೆ. ಅವರಂತೆ ಇಲ್ಲಿ ೬೪೬ ಕಟ್ಟುಗಳಿವೆ ಇವುಗಳಲ್ಲಿ ತಾಳೆಗರಿ ೩೫೭, ಕಾಗದ ೨೮೯.

5) ಕೊಲ್ಲಾಪುರ ಶ್ರೀಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿಯ ಹಸ್ತಪ್ರತಿ ಸೂಚಿ ಸಂ.ಎಂ.ಎಂ. ಕಲಬುರ್ಗಿ, ಬಿ.ಆರ್. ಹಿರೇಮಠ ಎಸ್.ವಿ. ಅಯ್ಯನಗೌಡರ ೧೯೮೮.

6) ಗದುಗಿನ ತೋಂಟದಾರ್ಯ ಮಠದ ಹಸ್ತಪ್ರತಿ ಸೂಚಿ. ಸಂ.ಎಸ್. ಶಿವಣ್ಣ ೧೯೮೫.

7) ಎ ಕ್ಯಾಟಲಾಗ್ ಆಫ್ ಸಂಸ್ಕೃತ ಪ್ರಾಕೃತ ಅ್ಯಂಡ್ ಹಿಂದಿ ವರ್ಕ್ಸ್ ಇನ್ ದಿ ಜೈನ ಸಿದ್ಧಾಂತ ಭವನ ಆರಾ. ಸಂ. ಸುಪಾರ್ಶ್ವದಾಸ್ ಗುಪ್ತ ಮೂಲಚಂದ್ರ ಜೈನ – ೧೯೧೯.

8) ಶ್ರೀ ಜಗದ್ಗುರು ಮೂರು ಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ. ಸಂ. ಕೆಳದಿ ಗುಂಡಾಜೋಯಿಸ್ – ೧೯೮೯.

9) ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹ್ಮಠದ ಹಸ್ತಪ್ರತಿ ಸೂಚಿ ಸಂ. ಎಸ್. ಶಿವಣ್ಣ – ೧೯೯೧.

10) ಕಂಚಗಲ್ – ಬಿದಿರೆ ದೊಡ್ಡಮಠದಲ್ಲಿ ದೊರೆತ ತಾಡವೋಲೆ ಗ್ರಂಥಗಳು ಈ ಸೂಚಿಯನ್ನು ಸಿದ್ಧಪಡಿಸಿದವರು ಶ್ರೀ ಜಿ.ಎಂ. ಉಮಾಪತಿ ಶಾಸ್ತ್ರಿಗಳು ಸುಕುಮಾರ ಪತ್ರಿಕೆಯ ಸಂಪುಟ – ೪-೩-೧೯೫೩ ಹಾಗೂ ೪-೯-೧೯೫೪ರಲ್ಲಿ ಪ್ರಕಟವಾಗಿದೆ.

11) ಗದಗದ ತೋಂಟದಾರ್ಯ ಮಠದ ತಾಡವೋಲೆ ಶ್ರೀ ಜಿ.ಎಂ. ಉಮಾಪತಿ ಶಾಸ್ತ್ರಿಗಳು ಸಿದ್ಧಪಡಿಸಿದ್ದು 'ಸುಕುಮಾರ' – ೧೯೫೪ರಲ್ಲಿ ಪ್ರಕಟಿಸಿದೆ.

12) ಹಾವೇರಿ ಹುಕ್ಕೇರಿ ಮಠದ ಓಲೆ ಸಂಗ್ರಹ ಶ್ರೀ ಜಿ.ಎಂ. ಉಮಾಪತಿ ಶಾಸ್ತ್ರಿಗಳು ಸಂಗ್ರಹಿಸಿದ್ದು 'ಸುಕುಮಾರ' ೫-೫-೧೯೫೫ರಲ್ಲಿ ಪ್ರಕಟವಾಗಿದೆ.

13) ಹಾರ್ನಹಳ್ಳಿ ಕೋಡಿಮಠದ ಓಲೆಗಳು ಶ್ರೀ ಜಿ.ಎಂ. ಉಮಾಪತಿಶಾಸ್ತ್ರಿಗಳು ಸಿದ್ಧಗೊಳಿಸಿದ್ದು 'ಸುಕುಮಾರ' ೮-೯-೧೯೫೫ರಲ್ಲಿ ಪ್ರಕಟವಾಗಿದೆ.

14) ಬಳ್ಳಾರಿ – ಹೊಸ ಪೇಟೆಯ ಶ್ರೀ ಜಗದ್ಗುರು ಕೊಟ್ಟೂರಸ್ವಾಮಿ ಸಂಸ್ಥಾನ ಮಠದ ಗ್ರಂಥ ಭಂಡಾರದಲ್ಲಿರುವ ಓಲೆಗರಿ ಹಸ್ತಪ್ರತಿ ಗ್ರಂಥಗಳ ಸೂಚಿ 'ಹೇಮಕೂಟ' ಮಾಸಪತ್ರಿಕೆಯ ೧-೨-೧೯೭೫ರಲ್ಲಿನ ಪ್ರಕಟಿತ ಸೂಚಿಯನ್ನು ಶ್ರೀ ಜಿ.ಎಂ. ಉಮಾಪತಿ

ಶಾಸ್ತ್ರಿಗಳು ಸಿದ್ಧಗೊಳಿಸಿದ್ದಾರೆ. ಇದರ ಮುಂದುವರಿದ ಭಾಗವನ್ನು ಶ್ರೀ ಎಸ್.ಎಸ್. ಹಿರೇಮಠ ಅವರು ಅಣಿಗೊಳಿಸಿದ್ದು, 'ಹೇಮಕೂಟ'ದ ೧-೧೧-೧೯೭೭ ಮತ್ತು ೧-೪-೧೯೭೬ ರಲ್ಲಿ ಪ್ರಕಟವಾಗಿದೆ. ಸೂಚಿಯಲ್ಲಿ ೩೩ ಕಟ್ಟುಗಳಲ್ಲಿನ ೧೧೬ ಕೃತಿಗಳ ವಿವರವಿದೆ.

೨) ವ್ಯಕ್ತಿಗಳಲ್ಲಿರುವ ವರ್ಣನಾತ್ಮಕ ಸೂಚಿಗಳು

1) ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ ಕೆ. ಭುಜಬಲಿ ಶಾಸ್ತ್ರಿ – ೧೯೪೮

2) ಪ್ರೊ॥ ಸಿ. ಮಹಾದೇವಪ್ಪನವರು ೧೯೬೦ರಲ್ಲಿ ದಿ ಅನ್‌ನೋನ್ ಪೇಜಸ್ ಇನ್ ದಿ ಹಿಸ್ಟರಿ ಆಫ್ ಕನ್ನಡ ಲಿಟರೇಚರ್ ೧ ಎಂಬ ಹೆಸರಿನಲ್ಲಿ ಪುಸ್ತಕವನ್ನು ಪ್ರಕಟಿಸಿದ್ದು ಅದರಲ್ಲಿ ೧೩ ಕೃತಿಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ.

3) ದಿ ಮೆಕೆಂಜಿ ಕಲೆಕ್ಷನ್ : ಎ ಡಿಸ್ಕ್ರಿಪ್ಟೀವ್ ಕ್ಯಾಟಲಾಗ್ ಆಫ್ ದಿ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಸಂ.ಎಚ್.ಎಚ್. ವಿಲ್ಸನ್. ಸಂ.೧ ಇಸವಿ ೧೮೨೮ ಈ ಸೂಚಿ ನನ್ನ ಅವಲೋಕನಕ್ಕೆ ಸಿಕ್ಕಿಲ್ಲ. ಇದರಲ್ಲಿ ಕನ್ನಡಕ್ಕೆ ಸಂಬಂಧಿಸಿದ ೧೫೨ ಕೃತಿಗಳ ವಿವರವಿದೆಯೆಂದು ಶ್ರೀ ಎಚ್. ದೇವೀರಪ್ಪನವರು 'ಕನ್ನಡ ಹಸ್ತಪ್ರತಿಗಳ ಇತಿಹಾಸ' ಪು. ೧೦೦ರಲ್ಲಿ (ಬೆಂಗಳೂರು – ೧೯೭೭) ತಿಳಿಸಿದ್ದಾರೆ. ಮೆಕೆಂಜಿ ಸಂಗ್ರಹಿಸಿದ್ದ ಕೈಫಿಯತ್ತುಗಳು ಹಾಗೂ ಶಾಸನದ ಪಡಿಯಚ್ಚುಗಳ ಸೂಚಿಯೆಂದು ೧೯೫೨ರಲ್ಲಿ ಪ್ರಕಟವಾಗಿದೆ.

೩) ಸರ್ಕಾರಿ ಸಂಸ್ಥೆಗಳ ವರ್ಣನಾತ್ಮಕ ಸೂಚಿಗಳು

1) ಆಲ್ಫಬೆಟಿಕಲ್ ಇಂಡೆಕ್ಸ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ ಇನ್ ದಿ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ, ಮದ್ರಾಸ್. ಸಂಸ್ಕೃತ, ತೆಲುಗು, ತಮಿಳು, ಕೆನರೀಸ್, ಮಲೆಯಾಳಂ, ಮರಾಠಿ, ಓರಿಯಾ, ಅರೇಬಿಕ್, ಪರ್ಶಿಯನ್ ಮತ್ತು ಹಿಂದೂಸ್ತಾನಿ, ೧೮೯೩ ಕನ್ನಡಕ್ಕೆ ಸಂಬಂಧಿಸಿದಂತೆ ಇದರಲ್ಲಿನ ಪುಟಗಳಲ್ಲಿ ಶಿರೋನಾಮೆ ಸೂಚೀ ವಿಷಯ ಸೂಚಿ ಕೈಫಿಯತ್ತು ಇತ್ಯಾದಿ ಸೂಚಿ ಎಂಬ ೩ ಪ್ರಕಾರಗಳಿವೆ.

2) ಎ ಕ್ಲಾಸಿಫೈಡ್ ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ ಇನ್ ದಿ ಸರಸ್ವತೀ ಭಂಡಾರಮ್ (ಪ್ಯಾಲೇಸ್ ಸಂಸ್ಕೃತ ಲೈಬ್ರರಿ) ಆಫ್ ಎಚ್.ಎಚ್. ಮಹಾರಾಜ ಆಫ್ ಮೈಸೂರು ಕಲೆಕ್ಷನ್ ಆಫ್ ೧೯೦೦-೧೯೦೫. ಇದರಲ್ಲಿ ಸುಮಾರು

೩೦೦ ಓಲೆ ಕೃತಿಗಳ ವಿವರವಿದೆ. ಇದೇ ಸಂಸ್ಥೆಗೆ ಸೇರಿದ ಮತ್ತೊಂದು ಸೂಚಿ ೧೯೪೩ರಲ್ಲಿ ಪ್ರಕಟವಾಗಿದ್ದು ಮುಂದೆ ಪ್ರಸ್ತಾಪಿಸಿದೆ.

3) ಮೈಸೂರು ಗೌರ್ನಮೆಂಟ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈ ಬರಹದ ಕರ್ನಾಟಕ ಪುಸ್ತಕಗಳ ಪಟ್ಟಿ ೧೯೨೧ ಇದರಲ್ಲಿ ಮುದ್ರಿತ ಕೃತಿಗಳ ವಿವರದೊಡನೆ ಕೈ ಬರಹದ ಕೃತಿಗಳನ್ನು ಹೆಸರಿಸಿದೆ.

4) ಆ್ಯನ್ ಅಲ್ಫಬೆಟಿಕಲ್ ಇಂಡೆಕ್ಸ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ ಇನ್ ದಿ ಗವರ್‌ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮದ್ರಾಸ್ ಎಸ್. ಕುಮಾರಸ್ವಾಮಿ ಶಾಸ್ತ್ರಿಯವರು ಸಂಪಾದಿಸಿದ್ದಾರೆ. ೧೯೨೯ರಲ್ಲಿ ಇದರಲ್ಲಿ ೧೫೪೦ ಕೃತಿಗಳ ವಿವರಗಳಿವೆ.

5) ಆ್ಯನ್ ಅಲ್ಫಬೆಟಿಕಲ್ ಇಂಡೆಕ್ಸ್ ಆಫ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ ಇನ್ ದಿ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮದ್ರಾಸ್ ಸಂ.ಟಿ. ಚಂದ್ರಶೇಖರನ್ ೧೯೫೨. ಕೈಫಿಯತ್ತು ಹಾಗೂ ಶಾಸನ ಪಡಿಯಚ್ಚುಗಳ ಸೂಚಿ ೧೮೦೫ಕ್ಕೂ ಮಿಕ್ಕಿನ ಉಲ್ಲೇಖಗಳಿವೆ.

6) ಎ. ಡಿಸ್ಕ್ರಿಪ್ಟೀವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮದ್ರಾಸ್ ಸಂ. ೧.೨.೩.೪.೫. ೬.೭ ಹೀಗೆ ೭ ಸಂಪುಟಗಳಿವೆ. ಇವುಗಳನ್ನು ಕುಪ್ಪುಸ್ವಾಮಿಶಾಸ್ತ್ರಿ ಮತ್ತು ಪಿ.ಪಿ.ಎಸ್.ಶಾಸ್ತ್ರಿ, ಎ.ಶಂಕರನ್ , ಟಿ. ಚಂದ್ರಶೇಖರನ್‌ರವರು ಸಂಪಾದಿಸಿದ್ದಾರೆ ೧೯೩೪ರಿಂದ ೧೯೫೮ರವರೆಗೆ.

7) ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈಬರೆಹದ ಕನ್ನಡ ಪುಸ್ತಕಗಳ ಪಟ್ಟಿ ೧೯೩೦ ಇದರಲ್ಲಿ ೧೬೪ ಕನ್ನಡ ಕೃತಿಗಳಿವೆ.

8) ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈಬರಹದ ಪುಸ್ತಕಗಳ ಪಟ್ಟಿ.

9) ಮೈಸೂರು ಗವರ್ನಮೆಂಟ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ದಲ್ಲಿ ೧೯೪೧ರಿಂದ ೧೯೫೪ರವರೆಗೆ ಸಂಗ್ರಹಿಸಿದ ಕೈಬರಹದ ಪುಸ್ತಕಗಳ ಪಟ್ಟಿ ೧೯೫೫.

10) ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನ ಸಂಸ್ಥೆಯಲ್ಲಿರುವ ಕೈಬರಹದ ಕನ್ನಡ ಗ್ರಂಥಗಳ ಅಕಾರಾದಿ ಸೂಚೀ ೧೯೫೫ ಇದರಲ್ಲಿ ೧೮೨೭ ಕೃತಿಗಳ ವಿವರಗಳಿವೆ.

11) ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಬಿ.ಎಸ್. ಸಣ್ಣಯ್ಯನವರ ಸಂಪಾದಕತ್ವದಲ್ಲಿ ನಾಲ್ಕು ಸಂಪುಟಗಳು ಪ್ರಕಟವಾಗಿವೆ. ೧೯೬೨ರಿಂದ ೧೯೬೩ರವರೆಗೆ.

12) ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ ಕನ್ನಡ ಸಂಶೋಧನಾ ಸಂಸ್ಥೆ ಧಾರವಾಡ ಮೇಲಿನ ಹೆಸರಿನಿಂದ ಕನ್ನಡ ಸಂಶೋಧನ ಸಂಸ್ಥೆಯ ಮೂಲಕ ೧೯೫೩ ರಿಂದ ೧೯೯೦ ರವರೆಗೆ ೧೩ ಸಂಪುಟಗಳಲ್ಲಿ ವಿವರಣಾತ್ಮಕ ಹಸ್ತಪ್ರತಿ ಸೂಚಿಗಳನ್ನು ಪ್ರಕಟಿಸಿದ್ದಾರೆ.

13) ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಕೆ.ವಿ.ವಿ. ಧಾರವಾಡ ಇವರು ೧೯೯೨ರಲ್ಲಿ ೬ ಸಂಪುಟಗಳನ್ನು ಪ್ರಕಟಿಸಿದ್ದಾರೆ ಇನ್ನೂ ನಾಲ್ಕು ಸಂಪುಟಗಳು ಪ್ರಕಟವಾಗಿಲ್ಲ ಅಥವಾ ಲಭ್ಯವಿಲ್ಲ.

14) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂ. ೧ ಬೆಂಗಳೂರು ಕನ್ನಡ ಅಧ್ಯಯನ ಕೇಂದ್ರವು ಎಸ್. ಶಿವಣ್ಣನವರ ಸಂಪಾದಕತ್ವದಲ್ಲಿ ಸಂಪಾದಿಸಿ ಪ್ರಕಟಿಸಿದೆ – ೧೯೮೨ರಲ್ಲಿ.

15) ದಿ ಲಾಸ್ಟ್ ಆಫ್ ದಿ ಅನ್ ಪ್ರಿಂಟೆಡ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಪ್ಯಾಲೇಸ್ ಸರಸ್ವತಿ ಭಂಡಾರ (ಮಹಾರಾಜ ಸಂಸ್ಕೃತ ಕಾಲೇಜು ಮೈಸೂರು) ೧೯೪೩.

16) ಮೈಸೂರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿರುವ ಕೈಬರಹದ ೧೧೦೭ ಕನ್ನಡ ಗ್ರಂಥಗಳ ಅಕಾರಾದಿ ಸೂಚಿ (೧೮೮೯ ರಿಂದ ೧೯೫೧ರವರೆಗೆ) ೧೯೫೫. ಇದರಲ್ಲಿ ೧೮೨೭ ಕೃತಿಗಳ ವಿವರಗಳಿವೆ.

೪) ಖಾಸಗೀ ಸಂಸ್ಥೆಗಳ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು

1) ಕೈಬರಹದ ಗ್ರಂಥಗಳ ಶೋಧನೆಯ ಶಿವಾನುಭವ ೭.೧ (ಪು. ೫೨-೬೨) ೧೯೩೨ ಡಾ॥ ಎಸ್.ಸಿ. ನಂದೀಮಠರು "ಧಾರವಾಡದ ಲಿಂಗಾಯತ ವಿದ್ಯಾವರ್ಧಕ ಸಂಘಕ್ಕೆ ಸಂಬಂಧಿಸಿದ ವಾಙ್ಮಯ ಸಂಘದ ಅಧಿಪತಿಗಳಿಗೆ ಕಳುಹಿಸಿದ ವರದಿಯ ಸಾರಾಂಶ"ವಾಗಿದೆ. ಸಂಸ್ಕೃತ ಹಾಗೂ ಕನ್ನಡ ಕೃತಿಗಳ ಬಗೆಗೆ ಪ್ರಸ್ತಾಪಿಸಲಾಗಿದ್ದು ೨೧೫ ಕನ್ನಡ ಕೃತಿಗಳನ್ನು ಹೆಸರಿಸಿದೆ.

2) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟವನ್ನು ಬಿ.ಎಂ.ಶ್ರೀ ಪ್ರತಿಷ್ಠಾನವು ಕೆಳದಿ ಗುಂಡಾಜೋಯಿಸ್ ಮತ್ತು ನಾ. ಗೀತಾಚಾರ್ಯ ಇವರ ಸಂಪಾದಕತ್ವದಲ್ಲಿ ಸಂಪಾದಿಸಿ ಪ್ರಕಟಿಸಿದೆ. ೧೯೮೭.

3) ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಪ್ರಾಕೃತ ಮ್ಯಾನ್ಯುಸ್ಕ್ರಿಪ್ಟ್ ಇನ್ ದಿ ಸೆಂಟ್ರಲ್ ಪ್ರಾವಿನ್ಸಸ್ ಆ್ಯಂಡ್ ಬೆರಾರ್ ಸಂ.ರಾವ್ ಬಹದ್ದೂರ ಹೀರಾಲಾಲ – ೧೯೨೬.

4) ಕೆಳದಿ ಸಂಗ್ರಹಾಲಯ ಮತ್ತು ಐತಿಹಾಸಿಕ ಸಂಶೋಧನ ಕೇಂದ್ರ ವರ್ಣನಾತ್ಮಕ ಹಸ್ತಪ್ರತಿಗಳ ಸೂಚಿ. ಸಂ.ಎಸ್.ಆರ್.ರಾವ್, ಕೆಳದಿ ಗುಂಡಾಜೋಯಿಸ್.

5) ಐನೂಲಿ ಗುಂಡಯ್ಯನ ಮನೆಯ ಸಂಗ್ರಹ. ಶ್ರೀ ಕಪಟರಾಳ ಕೃಷ್ಣರಾಯರು ೮೩ ಕೃತಿಗಳ ಪಟ್ಟಿಯನ್ನು ಸಿದ್ಧಪಡಿಸಿದ್ದು ಅದು 'ಶರಣಸಾಹಿತ್ಯದ' ಸಂಪುಟ ೪ ಸಂಚಿಕೆ ೭.೧೯೪ ಪುಟ ೨೨೧ರಲ್ಲಿ ಅಚ್ಚಾಗಿವೆ.

೫) ವಿಶಿಷ್ಟ ವರ್ಣನಾತ್ಮಕ ಹಸ್ತಪ್ರತಿ ಸೂಚಿಗಳು

1) ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ ೫ ರಿಂದ ೯ ರವರೆಗೆ (೧೯೮೦ – ೧೯೮೮) ಪ್ರಕಟವಾಗಿವೆ. ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲ್ಮ್ ಸೂಚಿ ೧೯೮೮ರಲ್ಲಿ ಪ್ರಕಟವಾಗಿದೆ.

2) ಬಾಹುಬಲಿ ಬ್ರಹ್ಮಚರ್ಯಾಶ್ರಮದಲ್ಲಿ ಮೈಕ್ರೋಫಿಲ್ಮ್ ಮಾಡಿರುವ ಗ್ರಂಥಗಳು ಕನ್ನಡ ಅಧ್ಯಯನ ಸಂಸ್ಥೆಯ ಸಂಗ್ರಹಗಳಿವೆ. ಇವುಗಳ ಯಾದಿಯನ್ನು ಶ್ರೀ ಬಿ.ಎಸ್. ಸಣ್ಣಯ್ಯನವರು ಸಿದ್ಧಗೊಳಿಸಿದ್ದು 'ಸನ್ಮತಿ' ಮಾಸಪತ್ರಿಕೆ ೨೨–೧–೧೯೭೮ ರಲ್ಲಿ ಪ್ರಕಟವಾಗಿದೆ. ಇದರಲ್ಲಿ ೩೭ ಕೃತಿಗಳನ್ನು ಹೆಸರಿಸಿದೆ.

3) ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ ಶ್ರೀ ಕೆ.ಭುಜಬಲಿಶಾಸ್ತ್ರಿಗಳಿಂದ ಸಂಪಾದಿತವಾಗಿದ್ದು, ದೇವನಾಗರಿ ಲಿಪಿಯಲ್ಲಿ ೧೯೪೮ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಮೂಡಬಿದಿರೆ ಜೈನಮಠ, ಮೂಡಬಿದಿರೆ ಜೈನಭವನ (ಪು. ೨೫೪ – ೨೮೧) ಕಾರ್ಕಳದ ಜೈನಮಠ (ಪು. ೨೮೨–೩೦೬) ಮತ್ತು ಅತಿಯಾದ ಆದಿನಾಥ ದೇವಾಲಯದಲ್ಲಿನ ಸಂಗ್ರಹ (ಪು. ೩೦೭–೩೧೨) ಗಳ ವಿವರಗಳಿವೆ. ಈ ಸೂಚಿ ಕನ್ನಡ ಕೃತಿಗಳ ಬಗೆಗೆ ತಿಳಿಸುವುದಲ್ಲದೆ ಕನ್ನಡ ಲಿಪಿಯಲ್ಲಿ ರಚಿತವಾದ ಪ್ರಾಕೃತ, ಸಂಸ್ಕೃತ, ಕೃತಿಗಳ ವಿವರಗಳನ್ನು ಒಳಗೊಂಡಿದೆ.

೬) ಇತರೆ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು

1) ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಸೆಂಟ್ರಲ್ ಪ್ರಾವಿನ್ಸಸ್ ಆ್ಯಂಡ್ ಬೆರಾರ್ ೧೯೭೬ ರಾವ ಬಹುದ್ದೂರ ಹೀರಾಲಾಲರ ಸಂಪಾದಕತ್ವದಲ್ಲಿ ಸಂಪಾದಿಸಲಾಗಿದೆ ಇಲ್ಲಿ ೪೩ ಕೃತಿಗಳ ಉಲ್ಲೇಖವಿದೆ.

2) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಉಸ್ಮಾನಿಯ ವಿಶ್ವವಿದ್ಯಾಲಯ ಹೈದರಾಬಾದ್. ಶ್ರೀ ಬಿ. ರಾಮಚಂದ್ರರಾವ್ ಮತ್ತು ಶ್ರೀ.ಟಿ.ಕಿ.ವೆಂಕಟಾಚಲಶಾಸ್ತ್ರಿಗಳಿಂದ ಸಂಪಾದಿತವಾದ ಈ ಸೂಚಿ ೧೯೬೬ರಲ್ಲಿ ಪ್ರಕಟವಾಗಿದೆ. ಇಲ್ಲಿನ ಹಸ್ತಪ್ರತಿಗಳಲ್ಲಿ ಬಹುಪಾಲು ಸವಣೂರು ನವಾಬರಿಗೆ ಸಂಬಂಧಿಸಿದುವು. ಈ ಸೂಚಿಯಲ್ಲಿ ೨೯೫ ಜಾತಿ ಹಾಗೂ ಕಾಗದದ ಪ್ರತಿಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳೂ ಸೇರ್ಪಡೆಯಾಗಿದೆ.

3) ವೀರಶೈವ ಅಪ್ರಕಟಿತ ಗ್ರಂಥಸೂಚಿ ಸಂ.ಎಸ್. ಶಿವಣ್ಣ ೧೯೮೨.

4) ದಿ ಅನ್‌ನೋನ್ ಪೇಜಸ್ ಇನ್ ದಿ ಹಿಸ್ಟರಿ ಆಫ್ ಕನ್ನಡ ಲಿಟರೇಚರ್ ಸಂ. ಸಿ. ಮಹಾದೇವಪ್ಪ.

5) ಮದರಾಸು – ಅಡಿಯಾರ್ ಪುಸ್ತಕಾಲಯದಲ್ಲಿರುವ ಕನ್ನಡ ಗ್ರಂಥಗಳು 'ಶರಣ ಸಾಹಿತ್ಯ' ೨೦–೬–೧೯೫೭. ಇದರಲ್ಲಿ ೫೬ ಕೃತಿಗಳ ನಾಮೋಲ್ಲೇಖವಿದೆ.

6) 'ಶರಣ ಸಾಹಿತ್ಯ' ಕಾರ್ಯಾಲಯದಲ್ಲಿರುವ ತಾಳೆಯೋಲೆ ಹಾಗೂ ಕಾಗದ ಪ್ರತಿಗಳು 'ಶರಣಸಾಹಿತ್ಯ' ೨೧–೫–೧೯೫೮.

7) ಹೈದರಾಬಾದು ಪ್ರಾಂತ್ಯದಲ್ಲಿ ಕನ್ನಡ ಗ್ರಂಥಗಳ ಸಂಶೋಧನೆ 'ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ' ೨೧–೩–೧೯೩೬ (ಪು – ೧೮೩–೯೨) ಪ್ರೊ॥ ಡಿ.ಕೆ. ಭೀಮಸೇನ್‌ರಾವ್ ಅವರು ಸಿದ್ಧಗೊಳಿಸಿದ್ದು ೨೦ ಕನ್ನಡ ಕೃತಿಗಳನ್ನು ಹೆಸರಿಸಿದೆ.

೧. ಟಿ.ವಿ.ವೆಂಕಟಾಚಲಶಾಸ್ತ್ರಿ – ಗ್ರಂಥ ಸಂಪಾದನಾ ಪರಿಭಾಷಾಕೋಶ – ಪುಟ : ೬೦

೨. ನಾ.ಗೀತಾಚಾರ್ಯ – ಹಸ್ತಪ್ರತಿಶಾಸ್ತ್ರ ವಿವೇಚನೆ – ಪುಟ : ೨೪

೩. ಎಚ್.ಎಲ್.ಎನ್. ಭಾರತಿ – ಪ್ರಾಚೀನ : ಹಸ್ತಪ್ರತಿಗಳು – ಪುಟ : ೧೩

೪. ಎಸ್.ಶಿವಣ್ಣ – ಕನ್ನಡ ಹಸ್ತಪ್ರತಿ ಸೂಚಿಗಳು – ಮಣಿಹ – ಪುಟ : ೩೮೦

೫. ಡಾ॥ ಎಂ.ಎಂ. ಕಲ್ಬುರ್ಗಿ – ಹಸ್ತಪ್ರತಿಶಾಸ್ತ್ರ – ಹಸ್ತಪ್ರತಿಶಾಸ್ತ್ರ : ಅದರ ವಿವಿಧ ಮೂಲಗಳು – ಬಿ.ಎಂ.ಶ್ರೀ ಪ್ರತಿಷ್ಠಾನ – ಪುಟ : ೩೨

೬. ಸಂಪಾದಕರ ಮುನ್ನುಡಿ – ಮೈ.ವಿ.ವಿ. ಕನ್ನಡ ಗ್ರಂಥ ಸೂಚಿ – ಸಂ : ೦೧ – ಪುಟ : xxiv

೭. ಟಿ.ವಿ. ಸುಬ್ರಹ್ಮಣ್ಯಂ – ಗ್ರಂಥಸೂಚಿಯ ವಿನ್ಯಾಸ – ಪುಟ : ೩೭

೮. ಸಂಪಾದಕರ ಮುನ್ನುಡಿ – ಮೈ.ವಿ.ವಿ. ಕನ್ನಡ ಗ್ರಂಥಸೂಚಿ – ಸಂಪುಟ : ೦೧ – ಪುಟ : xxiv

೯. ಸಂಪಾದಕರ ಮುನ್ನುಡಿ – ಮೈ.ವಿ.ವಿ. ಕನ್ನಡ ಗ್ರಂಥಸೂಚಿ – ಸಂಪುಟ : ೦೧

೧೦. ಎಸ್. ಬಸವಾರಾಧ್ಯ – ವಿಭಾಗ ಸಂಪಾದಕರ ಮಾತು – ಮೈ.ವಿ.ವಿ. ವರ್ಣನಾತ್ಮಕ ಹಸ್ತಪ್ರತಿ ಸೂಚಿ ಸಂಪುಟ : ೦೫

೧೧. ಎಸ್. ಶಿವಣ್ಣ – ಹಸ್ತಪ್ರತಿಶಾಸ್ತ್ರ – ಬಿ.ಎಂ.ಶ್ರೀ ಪ್ರತಿಷ್ಠಾನ – ಪುಟ : ೬೯–೭೦

೧೨. ಎಂ.ಎಂ. ಕಲ್ಬುರ್ಗಿ – ಕನ್ನಡ ಹಸ್ತಪ್ರತಿ ಶಾಸ್ತ್ರ – ಪುಟ : ೧೦೩ – ೧೦೪

೧೩. ಎಂ.ಎಂ. ಕಲ್ಬುರ್ಗಿ – ಕನ್ನಡ ಹಸ್ತಪ್ರತಿ ಶಾಸ್ತ್ರ – ಪುಟ : ೧೦೬

೧೪. ಬಿ.ಎಸ್. ಸಣ್ಣಯ್ಯ – ಹಸ್ತಪ್ರತಿಶಾಸ್ತ್ರ ಪರಿಚಯ – ಪುಟ : ೪೫

೧೫. ಎಂ.ಎಂ. ಕಲುಬುರ್ಗಿ – ಕನ್ನಡ ಹಸ್ತಪ್ರತಿಶಾಸ್ತ್ರ

೧೬. ಎಂ.ಎಂ. ಕಲುಬುರ್ಗಿ – ಕನ್ನಡ ಹಸ್ತಪ್ರತಿಶಾಸ್ತ್ರ

೧೭. ರವೀಂದ್ರ ಬೋಳೇಗಾಂವ್ – ಕರ್ನಾಟಕ ವಿಶ್ವವಿದ್ಯಾನಿಲಯದ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು ಒಂದು ಅಧ್ಯಯನ – ಅಪ್ರಕಟಿತ

೧೮. ಎಸ್. ಶಿವಣ್ಣ – ಬಿ.ಎಂ.ಶ್ರೀ – ಹಸ್ತಪ್ರತಿಶಾಸ್ತ್ರ – ಪುಟ : ೭೦–೭೨

೧೯. ಎಂ.ಎಂ. ಕಲ್ಬುರ್ಗಿ – ಕನ್ನಡ ಹಸ್ತಪ್ರತಿಶಾಸ್ತ್ರ – ಪುಟ : ೮೮

ಅಧ್ಯಾಯ – ೪.

ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳು

ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಮೈಸೂರು

"ಕರ್ನಾಟಕದ ಹಸ್ತಪ್ರತಿ ಭಂಡಾರಗಳಲ್ಲಿ ವಿಸ್ತಾರವಾದ ಮತ್ತು ವಿವಿಧತೆಯಿಂದ ಬಹುಪ್ರಸಿದ್ಧವಾಗಿರುವ ಭಂಡಾರವೆಂದರೆ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದಲ್ಲಿರುವ ಹಸ್ತಪ್ರತಿಭಂಡಾರ. ಇದಕ್ಕೆ ಸುಮಾರು ಒಂದು ಶತಮಾನದ ಇತಿಹಾಸವಿದೆ. ತನ್ನ ಸುದೀರ್ಘ ಪಯಣದಲ್ಲಿ ಹಲವು ತಿರುವುಗಳನ್ನು ಪಡೆಯುತ್ತ ಮುನ್ನಡೆದಿದೆ. ಈ ಭಂಡಾರವು ಜನ್ಮ ತಳೆದಿದ್ದು ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ. ಪ್ರಾಚೀನ ಸಾಹಿತ್ಯದ ಅಮೂಲ್ಯ ಆಕರಗಳಾದ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸುವ ಜರೂರನ್ನು ಮನಗಂಡ ಅಂದಿನ ವಿದೇಶೀ ವಿದ್ವಾಂಸರು ಒಂದು ಸುಸಜ್ಜಿತವಾದ ಹಸ್ತಪ್ರತಿ ಭಂಡಾರದ ಕನಸು ಕಂಡರು ಇದರ ಫಲವಾಗಿ ಬಿ.ಎಲ್.ರೈಸ್ ಅವರ ಮುಂದಾಳತ್ವದಲ್ಲಿ ಮೈಸೂರು ಸಂಸ್ಥಾನದ ಅರಸರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರಿಂದ ಕ್ರಿ.ಶ.೧೮೮೦ರಲ್ಲಿ "ಗೌರ್ನ್ಮೆಂಟ್ ಓರಿಯಂಟಲ್ ಲೈಬ್ರರಿ" ಎಂಬ ನಾಮಾಂಕಿತದಲ್ಲಿ ಮೈಸೂರಿನಲ್ಲಿರುವ ಈಗಿನ ಪ್ರಾಚ್ಯವಿದ್ಯಾ ಸಂಶೋಧನಾಲಯ ಕಟ್ಟಡದಲ್ಲಿ ಅನಾವರಣಗೊಂಡಿತು. ವಿಕ್ಟೋರಿಯ ರಾಣಿಯ ಸುವರ್ಣ ಮಹೋತ್ಸವದ ನೆನಪಿಗಾಗಿ ಇದನ್ನು ೧೮೮೦ಕ್ಕೂ ಮೊದಲೇ ಖಾಸಗಿಯಾಗಿ ಸ್ಥಾಪಿಸಿದ್ದರೆಂದೂ ಅನಂತರ ವಿದ್ವಾಂಸರ ಉಪಯೋಗಕ್ಕೆ ಸಾರ್ವಜನಿಕವಾಗಿ ತೆರೆಯಲಾಯಿತೆಂಬ ಅಭಿಪ್ರಾಯವೂ ಇದೆ".[೧]

೧೮೯೧ರಲ್ಲಿ ಪುರಾತತ್ವ ಇಲಾಖೆ ಮತ್ತು ಓರಿಯಂಟಲ್ ಲೈಬ್ರರಿ ಪ್ರತ್ಯೇಕಗೊಂಡು ಸ್ವತಂತ್ರ ಶಾಖೆಗಳಾದವು. ಓರಿಯಂಟಲ್ ಲೈಬ್ರರಿಯ ಪ್ರಥಮ ಕ್ಯೂರೇಟರ್ "ಪಂಡಿತ್ ಎ.ಮಹದೇವ ಶಾಸ್ತ್ರಿಗಳಾಗಿದ್ದರು. "'ಕೌಟಿಲ್ಯನ ಅರ್ಥಶಾಸ್ತ್ರ"ದ ಅಮೂಲ್ಯ ಹಸ್ತಪ್ರತಿಯನ್ನು ಪತ್ತೆಹಚ್ಚಿ ಪ್ರಕಟಿಸಿದ ಅರ್ಥಶಾಸ್ತ್ರದ ಖ್ಯಾತಿಯ ಡಾ॥ ಆರ್.ಶಾಮಾಶಾಸ್ತ್ರಿ ಅವರು ಪ್ರಕಟಣೆಗಳನ್ನು ಆರಂಭಿಸಿದರು."[೨] "ಆಮೇಲೆ ಆರ್.ರಾಘವೇಂದ್ರಾಚಾರ್, ಡಿ.ಶ್ರೀನಿವಾಸಾಚಾರ್, ಎಂ.ಎಸ್.ಬಸಲಿಂಗಯ್ಯ, ಎಚ್.ಆರ್.ರಂಗಸ್ವಾಮಿ ಅಯ್ಯಂಗಾರ್, ಎಚ್.ದೇವೀರಪ್ಪ ಮೊದಲಾದವರು ನಿರ್ದೇಶಕರಾಗಿದ್ದರು"[೩]

"೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾಲಯ ಆರಂಭವಾದಾಗ ಅದರ ಒಂದು ಭಾಗವಾಗಿ ಓರಿಯಂಟಲ್ ಲೈಬ್ರರಿ ಸೇರ್ಪಡೆಯಾಯಿತು. ೧೯೪೩ರಲ್ಲಿ ಇದನ್ನು "ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್" (ಪ್ರಾಚ್ಯ ವಿದ್ಯಾ ಸಂಶೋಧನಾಲಯ)

ಎಂದು ಹೆಸರಿಸಿ ಇನ್ನೊಂದು ಅಧಿಕೃತ ಸಂಶೋಧನಾ ಸಂಸ್ಥೆಯಾಗಿ ಪರಿವರ್ತಿಸಲಾಯಿತು. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಇದರ ಕನ್ನಡ ಹಸ್ತಪ್ರತಿ ವಿಭಾಗವನ್ನು ಸೇರಿಸಿದ ನಂತರ ಈ ಸಂಸ್ಥೆ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಒಂದು ಭಾಗವಾಗಿ ಸಂಸ್ಕೃತ ಹಸ್ತಪ್ರತಿಗಳ ಸಂಗ್ರಹಾಲಯವಾಗಿ ಕಾರ್ಯನಿರ್ವಹಿಸುತ್ತಿದೆ. ಕೌಟಿಲ್ಯನ ಅರ್ಥಶಾಸ್ತ್ರವನ್ನು ದೇಶಕ್ಕೆ ಕೊಟ್ಟ ಕೀರ್ತಿ ಈ ಸಂಸ್ಥೆಯದು. ಪಾಳಿ, ಪ್ರಾಕೃತ ಉರ್ದು ಪರ್ಶಿಯನ್ ಮುಂತಾದ ಪ್ರಾಚೀನ ಭಾಷೆಗಳ ೧೦೦ ಅಪೂರ್ವ ಹಸ್ತಪ್ರತಿಗಳೊಂದಿಗೆ ಸಂಸ್ಕೃತದ ೨೫ ಸಾವಿರಕ್ಕೂ ಅಧಿಕ ಹಸ್ತಪ್ರತಿಗಳನ್ನು ಹೊಂದಿರುವ ದೇಶದ ಅತಿದೊಡ್ಡ ಹಸ್ತಪ್ರತಿ ಭಂಡಾರವೆನಿಸಿದೆ. ಕರ್ನಾಟಕದಲ್ಲಿನ "ಏಕೈಕ ಮೈಕ್ರೋಫಿಲಂ ಯೂನಿಟ್ ಹೊಂದಿರುವ ಭಂಡಾರವೂ ಇದೇ ಆಗಿವೆ. ಇದರಲ್ಲಿ ಶ್ರೀ ತತ್ವ ನಿಧಿಯಂತಹ ಅಪೂರ್ವ ಚಿತ್ರಗಳಿರುವ ಹಸ್ತಪ್ರತಿಗಳೂ ಅನೇಕವಿವೆ. ಈ ಸಂಸ್ಥೆ ಪ್ರಕಟಿಸಿರುವ ಸೂಚಿಗಳೆಂದರೆ ಸಂಸ್ಕೃತದ ನಾಲ್ಕು ಮತ್ತು ಕನ್ನಡದ ನಾಲ್ಕು (೧೯೫೮ರವರೆಗೆ) ಸಂಪುಟಗಳು. ಇವುಗಳಲ್ಲಿ ಶೋಧಿಸಿ ಸಂಪಾದಿಸಿರುವ ಕೃತಿಗಳು ಕನ್ನಡ ಸಂಸ್ಕೃತ ಸೇರಿ ೧೦೦ಕ್ಕೂ ಹೆಚ್ಚು'.[೪]

ಮೈಕ್ರೋಫಿಲಂ ಹಸ್ತಪ್ರತಿ ಗ್ರಂಥಸೂಚಿ

೧೯೭೧ರಲ್ಲಿ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿದ್ದ ಪ್ರಾಚೀನ ಮಹತ್ವಪೂರ್ಣ ಹಸ್ತಪ್ರತಿಗಳ ಹಾಗೂ ಅಪೂರ್ವ ಮುದ್ರಿತಗ್ರಂಥಗಳ ಅಕಾರಾದಿ ಸೂಚಿ ಪ್ರಕಟವಾಯಿತು ಇದು ದಿ ಮೈಸೂರು ಓರಿಯಂಟಲಿಸ್ಟ್ ಪತ್ರಿಕೆಯ ಸಂಪುಟ ೪ ಸಂಚಿಕೆ ೨ರಲ್ಲಿ ಪ್ರಕಟವಾಯಿತು. ೧೯೭೨ರವರೆಗೆ ಭಂಡಾರಕ್ಕೆ ಸೇರ್ಪಡೆ ಆದ ಗ್ರಂಥಗಳ ವಿವರವಿದೆ. ಪ್ರತಿಗ್ರಂಥದ ಬಗ್ಗೆ ೧. 'ಮೈಕ್ರೋ ಫಿಲಂ ಸಂಖ್ಯೆ ೨. ಹಸ್ತಪ್ರತಿ ಶೀರ್ಷಿಕೆ, ೩. ಲೇಖಕ ೪.ಲಿಪಿ, ೫. ಭಾಷೆ ೬. ವಸ್ತು, ೭. ಹಾಳೆಗಳ ಸಂಖ್ಯೆ, ೮ ಅಕ್ಷಗಳ ಸಂಖ್ಯೆ (ಸಾಲಿಗೆ) ೯. ಪ್ರತಿ ಸಮಗ್ರವೇ ಅಸಮಗ್ರವೇ ಎಂಬ ವಿವರಗಳನ್ನು ಕೊಡಲಾಗಿದೆ. ಸೂಚಿಯಲ್ಲಿ ತಾಳೆಗರಿ, ಕಾಗದ ಪ್ರತಿಗಳನ್ನೇ ಅಲ್ಲದೆ ಕೆಲವು ಅಚ್ಚಿನ ಪ್ರತಿಗಳನ್ನು ಪಟ್ಟಿ ಮಾಡಲಾಗಿದೆ. ಕನ್ನಡ ಹಸ್ತಪ್ರತಿಗಳಿಗಿಂತ ಇತರ ಭಾಷಾ ಪ್ರತಿಗಳೇ ಹೆಚ್ಚಾಗಿವೆ. ಮೈಕ್ರೋಫಿಲಂ ವ್ಯವಸ್ಥೆ ಆಧುನಿಕ ವಿಜ್ಞಾನದ ಪ್ರಗತಿಯನ್ನು ಪುಸ್ತಕ ಭಂಡಾರ ವಿಜ್ಞಾನಕ್ಕೆ ಸೂಚೀಕಾರ್ಯಕ್ಕೆ ಬಳಸಿಕೊಂಡಿದ್ದಕ್ಕೆ ಸಾಕ್ಷಿಯಾಗಿದೆ. ಹಸ್ತಪ್ರತಿಗಳ ಸಂರಕ್ಷಣೆಗೆ ಉತ್ತಮ ವಿಧಾನವಾಗಿದೆ. ಸ್ಥಳಾವಕಾಶ ಉಳಿಯುತ್ತದೆ ಮತ್ತು ಹಸ್ತಪ್ರತಿಯನ್ನು ಯಾವ ಸ್ಥಳದಲ್ಲಾದರೂ ಮೈಕ್ರೋಫಿಲಂ ಮೂಲಕ ಪರಿಶೀಲಿಸಬಹುದಾಗಿದೆ. ಸೂಚಿಗಳ ಬಳಕೆ ತಯಾರಿಕೆಗೆ ಮೈಕ್ರೋಫಿಲಂ ವಿಧಾನ ಒಂದು ವರವಾಗಿದೆ. ಇದನ್ನು ಬಹುಶಃ ಮೊದಲ

ಬಾರಿಗೆ ವ್ಯಾಪಕವಾಗಿ ಕರ್ನಾಟಕದಲ್ಲಿ ಬಳಸಿದ ವಿಶ್ವವಿದ್ಯಾಲಯ ಮೈವಿವಿ ಆಗಿದೆ ಎನ್ನಬಹುದು.

ಈ ಹಸ್ತಪ್ರತಿಸೂಚಿ ಆಂಗ್ಲಭಾಷೆಯಲ್ಲಿದೆ. ಬಿ.ಎಲ್.ರೈಸ್‌ರವರು ಅಧಿಕಾರಿಗಳಾಗಿದ್ದಾಗ ಪ್ರಾರಂಭಿಸಿದ ಮಾಲೆ "ಬಿಬ್ಲಿಯಾಥಿಕಾ ಕರ್ನಾಟಕ". ಈ ಮಾಲೆಯ ಮೂಲಕ ಅನೇಕ ಪ್ರಮುಖ ಗ್ರಂಥಗಳು ಪ್ರಕಟವಾದವು. ಅವುಗಳಲ್ಲಿ ಮುಖ್ಯವಾದವು. ಪಂಪಭಾರತ (೧೮೯೮), ಭಾಷಾಭೂಷಣ (೧೮೮೪) ಶಬ್ದಾನುಶಾಸನ (೧೮೯೦), ಪಂಪರಾಮಾಯಣ (೧೮೭೪), ಕರ್ನಾಟಕ ಶಬ್ದಾನುಶಾಸನಂ (೧೯೯೦) ಮುಂತಾದವು.

೧೮೯೧ರಲ್ಲಿ ಈ ಓರಿಯಂಟಲ್ ಲೈಬ್ರರಿ ಅಸ್ತಿತ್ವಕ್ಕೆ ಬಂದ ಬಳಿಕವೂ ಬಿಬ್ಲಿಯಾಥಿಕಾ ಕರ್ನಾಟಕಾ ಮಾಲೆಯಲ್ಲಿ ಕವಿರಾಜಮಾರ್ಗ (ಸಂ.ಕೆ.ಬಿ.ಪಾಠಕ್ ೧೮೯೧) ಆದಿಪುರಾಣ (೧೯೦೦) ಗದಾಯುದ್ಧ (೧೯೨೫) ಕುಮಾರವ್ಯಾಸ ಭಾರತದ ಬಿಡಿಬಿಡಿ ಪರ್ವಗಳು (೧೯೧೨ ರಿಂದ ೧೯೪೩) ಪ್ರಕಟಿಸಲಾಯಿತು.

ಆಮೇಲೆ "ಕನ್ನಡ ಗ್ರಂಥಮಾಲೆ" ಹೆಸರಿನಲ್ಲಿ ದಶಪರ್ವ ಭಾರತ, ಜಗನ್ನಾಥ ವಿಜಯ, ಧರ್ಮಾಮೃತ, ಆನಂತನಾಥಪುರಾಣ, ಸೂಕ್ತಿರ್ಧಾರ್ಣವ, ಸಿಂಗಿರಾಜಪುರಾಣ, ರಾಮನಾಥ ಚರಿತೆ, ಶಿವತತ್ವ ಚಿಂತಾಮಣಿ, ತೊರವೆ ರಾಮಾಯಣ ಮೊದಲಾದ ಕೃತಿಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಅಪಸ್ತಂಭ ಗೃಹ್ಯಸೂತ್ರವನ್ನೂ ಬೆಳಕಿಗೆ ತರಲಾಯಿತು.

ಕನ್ನಡ ಅಧ್ಯಯನ ಸಂಸ್ಥೆ–ಮೈಸೂರು

"ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಕನ್ನಡ ವಿಭಾಗವು ಕನ್ನಡ ಅಧ್ಯಯನ ಸಂಸ್ಥೆಯಾಗಿ ೧೯೬೬ರಲ್ಲಿ ಮಾರ್ಪಟ್ಟಿದ್ದು ಚರಿತ್ರಾರ್ಹ ಘಟನೆ. ಕನ್ನಡದ ಚಟುವಟಿಕೆಗಳನ್ನೆಲ್ಲ ಕೇಂದ್ರೀಕರಿಸಲು ಕೈಗೊಂಡ ಈ ಪ್ರಯತ್ನದ ಫಲವಾಗಿ ಹೊಸ ಹೊಸ ಶಾಖೆಗಳು ಹುಟ್ಟಿಕೊಂಡುವಲ್ಲದೆ ಅಲ್ಲಲ್ಲಿ ಅಸ್ತಿತ್ವದಲ್ಲಿದ್ದ ಕನ್ನಡ ಪರ ಶಾಖೆಗಳು ಒಂದುಗೂಡಿದವು. ಇದರ ಅಂಗವಾಗಿ ೧೯೬೬ರಲ್ಲಿ ಗವರ್ನ್‌ಮೆಂಟ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ದಿಂದ ಕನ್ನಡ ಹಸ್ತಪ್ರತಿಗಳನ್ನು ಈ ಸಂಸ್ಥೆಗೆ ವರ್ಗಾಯಿಸಲಾಯಿತು. ಆಮೇಲೆ ಪ್ರತಿವರ್ಷ ಕೈಗೊಂಡ ಕ್ಷೇತ್ರಕಾರ್ಯದ ಫಲವಾಗಿ ಸುಮಾರು ೫೦೦೦ ಕಟ್ಟುಗಳು ಇಲ್ಲಿ ಶೇಖರಿಸಲ್ಪಟ್ಟಿವೆ. ಈ ಅವಧಿಯಲ್ಲಿ ಅನೇಕ ಪ್ರಸಿದ್ಧ ಹಸ್ತಪ್ರತಿಗಳನ್ನು ಶೋಧಿಸಿ ಸಂಗ್ರಹಿಸಲಾಗಿದ್ದು, ಎರಡನೆಯ ನಾಗವರ್ಮನ ವರ್ಧಮಾನ ಪುರಾಣದ ಶೋಧ ಈ ಸಂಸ್ಥೆಯ ಒಂದು ಅಪೂರ್ವ ಕಾಣಿಕೆಯೆಂದೇ ಹೇಳಬೇಕು"[೫] "೧೫೦ಕ್ಕೂ ಹೆಚ್ಚು ಗ್ರಂಥಗಳ ಸಂಪಾದನ ಕಾರ್ಯ ಇಲ್ಲಿ ನಡೆದಿದೆ. ಶ್ರೀ ಹೆಚ್. ದೇವೀರಪ್ಪ, ಎನ್.ಬಸವಾರಾಧ್ಯ. ಬಿ.ಎಸ್.ಸಣ್ಣಯ್ಯ, ಮೈಲಹಳ್ಳಿ ರೇವಣ್ಣ, ಕೆ.ಆರ್.ಶೇಷಗಿರಿ,

ಎನ್.ಎಸ್.ಕೃಷ್ಣಜೋಯಿಸ್, ಜಿ.ಜಿ.ಮಂಜುನಾಥ್, ಮಂಜಪ್ಪಶೆಟ್ಟಿ, ವೈ.ಸಿ.ಭಾನುಮತಿ ಮುಂತಾದ ತಜ್ಞರು ಈ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾಗಿ ಸಂಪಾದಕರಾಗಿ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ”[೬] ಅವುಗಳಲ್ಲಿ ಮುಖ್ಯವಾದುವೆಂದರೆ ನೇಮಿನಾಥ ಪುರಾಣ, ಆರಾಧ್ಯಚರಿತ್ರೆ, ಶಬ್ದಮಣಿದರ್ಪಣ, ರಾಜಾವಳಿ ಕಥೆ ಮುಂತಾದವು. ಪ್ರಾಚ್ಯ ವಿದ್ಯಾ ಇಲಾಖೆ ಪ್ರಾರಂಭಿಸಿದ್ದ ಕುಮಾರವ್ಯಾಸ ಭಾರತದ ಪರ್ವವಾರು ಪ್ರಕಟನೆಯನ್ನು ಮುಂದುವರಿಸಿದ್ದಲ್ಲದೇ ಇಡೀ ಕಾವ್ಯವನ್ನು ಸಂಪೂರ್ಣವಾಗಿ ಪ್ರಕಟಿಸಿದ ಸಾಧನೆಯೂ ಮುಖ್ಯವಾದುದಾಗಿದೆ.

ದಾಸ ಸಾಹಿತ್ಯ ಪ್ರಕಟಣಾ ಯೋಜನೆಯಡಿ ಶ್ರೀಪಾದರಾಜರು, ವಾದಿರಾಜರು, ಗೋಪಾಲದಾಸರು, ಜಗನ್ನಾಥ ದಾಸರುಗಳ ಸಮಗ್ರ ಕೀರ್ತನೆ ಸಂಪುಟಗಳನ್ನು ಪ್ರಕಟಿಸಲಾಯಿತು. ಈ ಮೂಲಕ ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ ಮುಂತಾದ ಹೊಸ ಕೀರ್ತನೆ ಕಾರ್ತಿಯರನ್ನು ಪರಿಚಯಿಸಲಾಯಿತು. ಕೀರ್ತನ ಸಾಹಿತ್ಯದ ಬಗೆಗೆ ಹಲವು ಸಂಶೋಧಿತ ಪೂರ್ಣಗ್ರಂಥಗಳನ್ನು ಪ್ರಕಟಿಸಿದ ಈ ಸಂಸ್ಥೆ. ಜಿ. ವರದರಾಜರಾವ್ ಮತ್ತು ಟಿ.ನಾಗರತ್ನ ಅವರ ನೇತೃತ್ವದಲ್ಲಿ ಈ ಕಾರ್ಯವನ್ನು ಮುಂದುವರೆಸಿಕೊಂಡು ಬಂತು.

ಈ ಸಂಸ್ಥೆ ಕೈಗೊಂಡ ಇನ್ನೊಂದು ಪ್ರಮುಖ ಕಾರ್ಯ ತನ್ನಲ್ಲಿರುವ ಎಲ್ಲ ಹಸ್ತಪ್ರತಿಗಳ ಸೂಚಿಗಳನ್ನು ವೈಜ್ಞಾನಿಕವಾಗಿ ವರ್ಣನಾತ್ಮಕವಾಗಿ ಪ್ರಕಟಿಸಿದ್ದು. ಪ್ರಾಚ್ಯ ವಿದ್ಯಾ ಇಲಾಖೆಯಲ್ಲಿ ಆರಂಭವಾಗಿದ್ದ ಈ ಸೂಚೀ ಪ್ರಕಟನಾ ಕಾರ್ಯ ಈ ಸಂಸ್ಥೆಯಲ್ಲಿ ಮುಂದುವರೆಯಿತು. ಅಲ್ಲಿ ನಾಲ್ಕು ಸಂಪುಟಗಳವರೆಗೆ ೨೦೭೪ ಕೃತಿಗಳು ಸೂಚಿಯಾಗಿದ್ದವು. ಕನ್ನಡ ಅಧ್ಯಯನ ಸಂಸ್ಥೆಯು ಐದನೇ ಸಂಪುಟದಿಂದ ೯ನೇ ಸಂಪುಟದವರೆಗೆ ೫ ಸಂಪುಟಗಳನ್ನು ಹೊರತಂದು ಅದರಲ್ಲಿ ೨೬೪೩ ಕೃತಿಗಳನ್ನು ಸವಿವರವಾಗಿ ಪಟ್ಟಿ ಮಾಡಲಾಗಿದೆ.

ಅಷ್ಟೇ ಅಲ್ಲದೆ ರಾಜ್ಯದ ಮತ್ತು ಹೊರರಾಜ್ಯದ ಎಲ್ಲ ಭಂಡಾರಗಳಲ್ಲಿರುವ ಪ್ರಮುಖ ಕನ್ನಡ ಹಸ್ತಪ್ರತಿಗಳ ಮೈಕ್ರೋಫೊಲಂ ಪ್ರಿಂಟ್‌ಗಳನ್ನು ತೆಗೆದು ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲಂ ಸೂಚಿಯೊಂದನ್ನು ಈ ಸಂಸ್ಥೆ ಪ್ರಕಟಿಸಿದೆ (೧೯೮೮). ಇದು ಬಹಳ ಉಪಯುಕ್ತವಾದ ಕಾರ್ಯವಾಗಿದೆ. ಓ.ಆರ್.ಐ.ನಲ್ಲಿರುವ ಮೈಕ್ರೋಫಿಲಂ ಯೂನಿಟ್ ಅನ್ನು ಸಂಚಾರಿ ಯೂನಿಟ್ ಅನ್ನಾಗಿ ಪರಿವರ್ತಿಸಿ ಒಂದು ಯೋಜನೆಯ ರೂಪದಲ್ಲಿ ಆಯಾ ಭಂಡಾರಗಳಿಗೇ ಹೋಗಿ ಹಸ್ತಪ್ರತಿಗಳ ಮೈಕ್ರೋಫಿಲಂಗಳನ್ನು ತೆಗೆದದ್ದು ಕನ್ನಡ ಹಸ್ತಪ್ರತಿ ಅಧ್ಯಯನದ ಇತಿಹಾಸದಲ್ಲೇ ಮಹತ್ವದ ಸಾಧನೆಯಾಗಿದೆ. ಅರಾ, ಹೈದರಾಬಾದು, ಮಹಾರಾಷ್ಟ್ರ, ಕರ್ನಾಟಕದ ಹಲವು ಖಾಸಗಿ ಭಂಡಾರಗಳಲ್ಲೂ ಮಠ, ಸಂಸ್ಥೆಗಳ ಸಂಗ್ರಹಗಳಲ್ಲೂ ಇದ್ದ ೧೩೨೪ ಹಸ್ತಪ್ರತಿಗಳನ್ನೇ ಇದರಲ್ಲಿ ಸೂಚೀಕರಿಸಲಾಗಿದೆ.

"ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹಲವು ಅಮೂಲ್ಯ ಹಸ್ತಪ್ರತಿಗಳಿವೆ. ಓಲೆಗರಿ ಹಸ್ತಪ್ರತಿಗಳಲ್ಲೇ ಅತ್ಯಂತ ಪ್ರಾಚೀನತಮ ಹಸ್ತಪ್ರತಿಯಾದ ನಾಮಲಿಂಗಾನುಶಾಸನ ಟೀಕು (ಕ್ರಿ.ಶ.೧೧೩೦) ಈ ಹಸ್ತಪ್ರತಿ ಭಂಡಾರದಲ್ಲಿದೆ. ಗುಣವರ್ಮನ ಪುಷ್ಪದಂತ ಪುರಾಣದ ಪ್ರಾಚೀನ ಹಸ್ತಪ್ರತಿ (ಕ್ರಿ.ಶ.೧೪೧೬) ಕುಮಾರವ್ಯಾಸನ ಮಹಾಭಾರತದ ಪ್ರಾಚೀನ ಹಸ್ತಪ್ರತಿ (ಕ್ರಿ.ಶ.೧೫೫೪) ಗಳೂ ಈ ಹಸ್ತಪ್ರತಿ ಭಂಡಾರದ ಆಸ್ತಿಯಾಗಿವೆ. ಕಾಗದದ ಹಸ್ತಪ್ರತಿಯಲ್ಲಿಯೂ ಕರ್ನಾಟಕದಲ್ಲಿಯೇ ಅತ್ಯಂತ ಪ್ರಾಚೀನ ಹಸ್ತಪ್ರತಿಯಾದ ಏಕೋತ್ತರ ಶತಸ್ಥಲ ಟೀಕು (ಕ್ರಿ.ಶ.೧೫೦೦) ಎಂಬ ಕೃತಿಯೂ ಈ ಭಂಡಾರದಲ್ಲಿದೆ. ಆದಿಪುರಾಣ, ವಡ್ಡಾರಾಧನೆ, ಗದಾಯುದ್ಧ, ಸರ್ವಜ್ಞನ ವಚನಗಳ ಪ್ರಾಚೀನ ಹಸ್ತಪ್ರತಿಗಳೂ ಈ ಭಂಡಾರದಲ್ಲಿವೆ. ಕೆಲವು ವಿಶೇಷ ಹಸ್ತಪ್ರತಿಗಳೂ ಇದರಲ್ಲಿವೆ. ಇದರಲ್ಲಿರುವ ಕುಮಾರವ್ಯಾಸ ಭಾರತದ ಹಸ್ತಪ್ರತಿಯ ಪ್ರತಿ ಗರಿಯ ದಾರ, ರಂಧ್ರಗಳಿಗೂ ಬೆಳ್ಳಿಯ ಉಂಗುರವನ್ನು ತೊಡಿಸಿರುವುದು ವಿಶೇಷವಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್, ಅಳಿಯ ಲಿಂಗರಾಜ ಮುಂತಾದವರ ೧೮೫೦ರ ಕಾಲದ ಸ್ವಹಸ್ತಾಕ್ಷರಗಳು ಓಲೆಗರಿಯಲ್ಲಿರುವ ಇನ್ನೊಂದು ವಿಶೇಷ. ನಂಜುಂಡ ಕವಿಯ ಕೃತಿಗೆ ಅಂದವಾದಂತಹ ಕೆತ್ತನೆಯ ಪಟ್ಟಿಕೆ ಇರುವುದನ್ನೂ ಅನೇಕ ಹಸ್ತಪ್ರತಿಗಳಿಗೆ ದಂತ, ಶ್ರೀಗಂಧ ಕೆತ್ತನೆಯ ಪಟ್ಟಿಕೆಗಳಿರುವುದನ್ನೂ ಕಾಣಬಹುದು ಮತ್ತು ಅನೇಕ ಚಿತ್ರಮಯ ಹಸ್ತಪ್ರತಿಗಳು ಈ ಭಂಡಾರದ ಮಹತ್ವವನ್ನು ಹೆಚ್ಚಿಸಿವೆ. ಕರ್ನಾಟಕದಲ್ಲಿ ಅತ್ಯಂತ ಮೌಲಿಕವಾದ ಮತ್ತು ಶ್ರೇಷ್ಠ ಹಸ್ತಪ್ರತಿ ಭಂಡಾರವಾಗಿ ಇದು ಜನಜನಿತವಾಗಿದೆ.

೧೮೧೭ರಿಂದ ಈಚಿನವರೆಗೆ ಕನ್ನಡದಲ್ಲಿ ಅಚ್ಚಾಗಿ ಪ್ರಕಟವಾಗಿರುವ ಗ್ರಂಥಗಳ ವಿವರಣ ನೀಡುವ "ಕನ್ನಡ ಗ್ರಂಥಸೂಚಿ"ಯ ೧೨ ಸಂಪುಟಗಳು ಕನ್ನಡ ಅಧ್ಯಯನ ಸಂಸ್ಥೆಯ ಮತ್ತೊಂದು ಮಹತ್ವದ ಮೈಲುಗಲ್ಲಾಗಿದೆ.

ಪ್ರಕಟಿತ ೯ ಸಂಪುಟಗಳ ಹಸ್ತಪ್ರತಿ ಸೂಚಿಗಳ ವಿಷಯ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ ಮೊದಲ ಸಂಪುಟ "ಪ್ರಾಚ್ಯ ವಿದ್ಯಾಸಂಶೋಧನಾಲಯ"ದ ಮೂಲಕ ೧೯೬೨ರಲ್ಲಿ ಪ್ರಕಟವಾಯಿತು. ಒಂಬತ್ತನೆಯ ಸಂಪುಟ "ಕನ್ನಡ ಅಧ್ಯಯನ ಸಂಸ್ಥೆ: ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ೧೯೮೧ರಲ್ಲಿ ಪ್ರಕಟವಾಗಿದೆ. ಈ ಒಂಬತ್ತು ಸಂಪುಟಗಳ ವಿವರ ಹೀಗಿದೆ.

೧ : ಪ್ರಧಾನ ಸಂಪಾದಕರು : ಹೆಚ್.ದೇವೀರಪ್ಪ -೧೯೬೨
ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ : ಒಂದು (ಅ-ಚಾ)
ಪ್ರ: ಪ್ರಾಚ್ಯ ವಿದ್ಯಾಸಂಶೋಧನಾಲಯ
ಮೈಸೂರು ವಿಶ್ವವಿದ್ಯಾಲಯ: ಮೈಸೂರು
ವಿಷಯ: ಈ ಸಂಪುಟದಲ್ಲಿ 'ಅ' ದಿಂದ 'ಚಾ' ಕಾರದವರೆಗೆ ಪೂರ್ತಿ ಒಟ್ಟು ೪೦೭ ಕೃತಿಗಳ ವಿವರಣೆಯಿದೆ.

೨ : ಪ್ರಧಾನ ಸಂಪಾದಕರು ಹೆಚ್. ದೇವೀರಪ್ಪ _೧೯೬೨
ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ ಎರಡು (ಚಿ-ಪ) ಪ್ರ: ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ: ಮೈಸೂರು
ವಿಷಯ: ಈ ದ್ವಿತೀಯ ಸಂಪುಟದಲ್ಲಿ 'ಚಿ' ಕಾರದಿಂದ 'ಪ'ಕಾರದವರೆಗೆ ಪೂರ್ತಿ ಒಟ್ಟು ೫೦೨ ಕೃತಿಗಳ ವಿವರಣೆಯನ್ನು ಕೊಟ್ಟಿದೆ.

೩ : ಪ್ರಧಾನ ಸಂಪಾಕದರು : ಹೆಚ್ ದೇವೀರಪ್ಪ -೧೯೬೩
ಸಂಪಾದಕರು: ಬಿ.ಎಸ್.ಸಣ್ಣಯ್ಯ
ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ : (ಮೂರು) (ಬಲಲೋ)
ಪ್ರ: ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ: ಮೈಸೂರು
ವಿಷಯ: ಈ ತೃತೀಯಾ ಸಂಪುಟದಲ್ಲಿ 'ಬ' ಕಾರದಿಂದ 'ಲ'ಕಾರದವರೆಗೆ ಪೂರ್ತಿ ಒಟ್ಟು ೫೧೪ (೧೦೦೨-೧೫೧೫) ಕೃತಿಗಳ ವಿವರಣೆಯನ್ನು ಕೊಟ್ಟಿದೆ.

೪ : ಪ್ರಧಾನ ಸಂಪಾದಕರು ಹೆಚ್ ದೇವೀರಪ್ಪ -೧೯೬೩
ಸಂಪಾದಕರು: ಬಿ.ಎಸ್.ಸಣ್ಣಯ್ಯ
ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ-ಸಂಪುಟ: ನಾಲ್ಕು (ವ-ಹೋ)
ಪ್ರ: ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ: ಮೈಸೂರು
ವಿಷಯ: ಈ ನಾಲ್ಕನೇ ಸಂಪುಟದಲ್ಲಿ 'ವ' ಕಾರದಿಂದ 'ಹೋ' ಕಾರದವರೆಗೆ ಪೂರ್ತಿ ಒಟ್ಟು ೫೪೮ (೧೫೧೬ರಿಂದ ೨೦೬೩) ಕೃತಿಗಳ ವಿವರಣೆಯನ್ನು ಕೊಟ್ಟಿದೆ.

೫ : ಪ್ರಧಾನ ಸಂಪಾದಕರು : ಡಾ.ಹಾ.ಮಾ.ನಾಯಕ
ವಿಭಾಗ ಸಂಪಾದಕರು : ಎನ್.ಬಸವಾರಾಧ್ಯ

ಸಂಯೋಜಕ ಸಂಪಾದಕರು: ಬಿ.ಎಸ್.ಸಣ್ಣಯ್ಯ

ಸಂಶೋಧನ ಸಹಾಯಕರು: ದಿ॥ ಶ್ರೀ ಎಸ್. ಬಸಪ್ಪ
ಶ್ರೀ.ಎಸ್.ಎನ್. ಕೃಷ ಜೋಯಿಸ್
ಶ್ರೀಮತಿ. ಎಂ.ಎನ್.ಲೀಲಾವತಿ
ಶ್ರೀ ನಂ. ತಪಸ್ವೀಕುಮಾರ್
ಶ್ರೀ.ಎಂ.ಸಿ.ಪದ್ಮನಾಭಶರ್ಮ
ಶ್ರೀ.ಎ.ಆರ್.ಶೇಷಗಿರಿ
ಶ್ರೀ.ಜಿ.ಜಿ.ಮಂಜುನಾಥನ್
ಶ್ರೀ.ಹ.ಕ.ರಾಜೇಗೌಡ
ಶ್ರೀಮತಿ.ವೈ.ಸಿ.ಭಾನುಮತಿ
ಶ್ರೀ.ಎಂ.ಪಿ.ಮಂಜಪ್ಪ ಶೆಟ್ಟಿ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ–ಸಂಪುಟ–ಐದು (ಅ–ಫ)

ಪ್ರ: ಕನ್ನಡ ಅಧ್ಯಯನ ಸಂಸ್ಥೆ–ಮೈಸೂರು ವಿಶ್ವವಿದ್ಯಾನಿಲಯ

ವಿಷಯ: ಈ ಐದನೇ ಸಂಪುಟದಲ್ಲಿ 'ಅ' ಕಾರದಿಂದ 'ಫ' ಕಾರದವರೆಗೆ ಪೂರ್ತಿ ಒಟ್ಟು ೭೩೫ ಕೃತಿಗಳ ವಿವರವಿದೆ.

೬ : ಪ್ರಧಾನ ಸಂಪಾದಕರು : ಡಾ.ಹಾ.ಮಾ.ನಾಯಕ

ವಿಭಾಗ ಸಂಪಾದಕರು: ಎನ್.ಬಸವಾರಾಧ್ಯ

ಸಂಶೋಧನ ಸಹಾಯಕರು: ದಿ॥ ಶ್ರೀ ಎಸ್. ಬಸಪ್ಪ
ಶ್ರೀ.ಎಸ್.ಎನ್. ಕೃಷ ಜೋಯಿಸ್
ಶ್ರೀಮತಿ. ಎಂ.ಎನ್.ಲೀಲಾವತಿ
ಶ್ರೀ ನಂ. ತಪಸ್ವೀಕುಮಾರ್
ಶ್ರೀ.ಎಂ.ಸಿ.ಪದ್ಮನಾಭಶರ್ಮ
ಶ್ರೀ.ಎ.ಆರ್.ಶೇಷಗಿರಿ
ಶ್ರೀ.ಜಿ.ಜಿ.ಮಂಜುನಾಥನ್

ಶ್ರೀ.ಹ.ಕ.ರಾಜೇಗೌಡ

ಶ್ರೀಮತಿ.ವೈ.ಸಿ.ಭಾನುಮತಿ

ಶ್ರೀ.ಎಂ.ಪಿ.ಮಂಜಪ್ಪ ಶೆಟ್ಟಿ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ–ಆರು (ಚ–ಪ)

ಪ್ರ: ಕನ್ನಡ ಅಧ್ಯಯನ ಸಂಸ್ಥೆ– ಮೈಸೂರು ವಿಶ್ವವಿದ್ಯಾನಿಲಯ

ವಿಷಯ: ಈ ಆರನೇ ಸಂಪುಟದಲ್ಲಿ 'ಚ' ಕಾರದಿಂದ 'ಪ'ಕಾರದವರೆಗೆ ಒಟ್ಟು ೭೪೪೪ ಕೃತಿಗಳ ವಿವರಣೆಯಿದೆ.

೭ : ಪ್ರಧಾನ ಸಂಪಾದಕರು : ಡಾ.ಹಾ.ಮಾ.ನಾಯಕ

ವಿಭಾಗ ಸಂಪಾದಕರು: ಎನ್.ಬಸವಾರಾಧ್ಯ

ಸಂಯೋಜಕ ಸಂಪಾದಕರು: ಬಿ.ಎಸ್.ಸಣ್ಣಯ್ಯ

ಸಂಶೋಧನ ಸಹಾಯಕರು: ದಿ॥ ಶ್ರೀ ಎಸ್. ಬಸಪ್ಪ

ಶ್ರೀ.ಎಸ್.ಎನ್. ಕೃಷ ಜೋಯಿಸ್

ಶ್ರೀಮತಿ. ಎಂ.ಎನ್.ಲೀಲಾವತಿ

ಶ್ರೀ ನಂ. ತಪಸ್ವೀಕುಮಾರ್

ಶ್ರೀ.ಎಂ.ಸಿ.ಪದ್ಮನಾಭಶರ್ಮ

ಶ್ರೀ.ಎ.ಆರ್.ಶೇಷಗಿರಿ

ಶ್ರೀ.ಜಿ.ಜಿ.ಮಂಜುನಾಥನ್

ಶ್ರೀ.ಹ.ಕ.ರಾಜೇಗೌಡ

ಶ್ರೀಮತಿ.ವೈ.ಸಿ.ಭಾನುಮತಿ

ಶ್ರೀ.ಎಂ.ಪಿ.ಮಂಜಪ್ಪ ಶೆಟ್ಟಿ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಸಂಪುಟ: ಏಳು (ಬ–ಲ)

ಪ್ರ: ಕನ್ನಡ ಅಧ್ಯಯನ ಸಂಸ್ಥೆ–ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ವಿಷಯ: ಈ ಏಳನೆಯ ಸಂಪುಟದಲ್ಲಿ 'ಬ' ಕಾರದಿಂದ "ಲ'ಕಾರದವರೆಗೆ ಪೂರ್ತಿ ಬಿಟ್ಟು ೮೦೨ ಕೃತಿಗಳ ವಿವರಣೆಯಿದೆ.

೮ : ಪ್ರಧಾನ ಸಂಪಾದಕರು : ಡಾ.ಹಾ.ಮಾ.ನಾಯಕ

ವಿಭಾಗ ಸಂಪಾದಕರು: ಎನ್.ಬಸವಾರಾಧ್ಯ

ಸಂಯೋಜಕ ಸಂಪಾದಕರು: ಬಿ.ಎಸ್.ಸಣ್ಣಯ್ಯ

ಸಂಶೋಧನ ಸಹಾಯಕರು: ದಿ॥ ಶ್ರೀ ಎಸ್. ಬಸಪ್ಪ

ಶ್ರೀ.ಎಸ್.ಎನ್. ಕೃಷ ಜೋಯಿಸ್

ಶ್ರೀಮತಿ. ಎಂ.ಎನ್.ಲೀಲಾವತಿ

ಶ್ರೀ ನಂ. ತಪಸ್ವೀಕುಮಾರ್

ಶ್ರೀ.ಎಂ.ಸಿ.ಪದ್ಮನಾಭಶರ್ಮ

ಶ್ರೀ.ಎ.ಆರ್.ಶೇಷಗಿರಿ

ಶ್ರೀ.ಜಿ.ಜಿ.ಮಂಜುನಾಥನ್

ಶ್ರೀ.ಹ.ಕ.ರಾಜೇಗೌಡ

ಶ್ರೀಮತಿ.ವೈ.ಸಿ.ಭಾನುಮತಿ

ಶ್ರೀ.ಎಂ.ಪಿ.ಮಂಜಪ್ಪ ಶೆಟ್ಟಿ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ-ಸಂಪುಟ: ಎಂಟು (ವ-ಷ)

ಪ್ರ: ಕನ್ನಡ ಅಧ್ಯಯನ ಸಂಸ್ಥೆ-ಮೈಸೂರು ವಿಶ್ವವಿದ್ಯಾನಿಲಯ-ಮೈಸೂರು

ವಿಷಯ: ಈ ಎಂಟನೇ ಸಂಪುಟದಲ್ಲಿ 'ವ' ಕಾರದಿಂದ 'ಷ'ಕಾರದವರೆಗೆ ಒಟ್ಟು ೭೨೬ ಕೃತಿಗಳ ವಿವರಣೆಯಿದೆ.

೯ : ಪ್ರಧಾನ ಸಂಪಾದಕರು : ಡಾ.ಹಾ.ಮಾ.ನಾಯಕ

ವಿಭಾಗ ಸಂಪಾದಕರು: ಎನ್.ಬಸವಾರಾಧ್ಯ

ಸಂಯೋಜಕ ಸಂಪಾದಕರು: ಬಿ.ಎಸ್.ಸಣ್ಣಯ್ಯ

ಸಂಶೋಧನ ಸಹಾಯಕರು: ದಿ॥ ಶ್ರೀ ಎಸ್. ಬಸಪ್ಪ

ಶ್ರೀ.ಎಸ್.ಎನ್. ಕೃಷ ಜೋಯಿಸ್

ಶ್ರೀಮತಿ. ಎಂ.ಎನ್.ಲೀಲಾವತಿ

ಶ್ರೀ ನಂ. ತಪಸ್ವೀಕುಮಾರ್

ಶ್ರೀ.ಎಂ.ಸಿ.ಪದ್ಮನಾಭಶರ್ಮ

ಶ್ರೀ.ಎ.ಆರ್.ಶೇಷಗಿರಿ

ಶ್ರೀ.ಜಿ.ಜಿ.ಮಂಜುನಾಥನ್

ಶ್ರೀ.ಹ.ಕ.ರಾಜೇಗೌಡ

ಶ್ರೀಮತಿ.ವೈ.ಸಿ.ಭಾನುಮತಿ

ಶ್ರೀ.ಎಂ.ಪಿ.ಮಂಜಪ್ಪ ಶೆಟ್ಟಿ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ: ಒಂಬತ್ತು (ಸ–ಹ)

ಪ್ರ : ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು ವಿಶ್ವವಿದ್ಯಾಲಯ–ಮೈಸೂರು

ವಿಷಯ: ಈ ಒಂಬತ್ತನೇ ಸಂಪುಟದಲ್ಲಿ 'ಸ' ಕಾರದಿಂದ 'ಹ'ಕಾರದವರೆಗೆ ಒಟ್ಟು ೪೧೧೬ ಕೃತಿಗಳ ವಿವರವನ್ನು ಕೊಟ್ಟಿದೆ ಅಲ್ಲದೆ ಈಗ ಪ್ರಕಟವಾಗಿರುವ ಎಲ್ಲ ಒಂಬತ್ತು ಸಂಪುಟಗಳಲ್ಲಿಯ ಕೃತಿ ಸೂಚಿ ಮತ್ತು ಕರ್ತೃಸೂಚಿಗಳನ್ನು ಐದರಿಂದ ಒಂಬತ್ತು ಸಂಪುಟಗಳವರೆಗಿನ ೫ ಸಂಪುಟಗಳಲ್ಲಿನ ಕೃತಿಗಳಲ್ಲಿ ಸೇರಿರುವ ಇತರ ಭಾಷಾ ಕೃತಿಗಳ ಹೆಸರುಗಳನ್ನೂ ಪಟ್ಟಿ ಮಾಡಿಕೊಡಲಾಗಿದೆ.

ಶೀರ್ಷಿಕೆ ಪುಟ

ಒಂಬತ್ತು ಸಂಪುಟಗಳ ಶೀರ್ಷಿಕೆ ಪುಟಗಳಲ್ಲಿ (ಟೈಟಲ್‌ಪೇಜ್) ಸಂಪುಟ ಒಂದರಂದ ನಾಲ್ಕನೇ ಸಂಪುಟದವರೆಗೆ (೧೯೭೨–೧೯೭೩) ಶೀರ್ಷಿಕೆ ಹೀಗಿದೆ: ಒಂದು ಪುಟದಲ್ಲಿ ಆಂಗ್ಲಭಾಷೆಯಲ್ಲೂ ಮತ್ತೊಂದು ಪುಟದಲ್ಲಿ ಕನ್ನಡದಲ್ಲೂ ಶೀರ್ಷಿಕೆ ಕೊಡಲಾಗಿದೆ.

ಆದರೆ ಸಂಪುಟ ಐದರಿಂದ ಸಂಪುಟ ಒಂಬತ್ತರವರೆಗೆ ಕನ್ನಡದಲ್ಲಿ ಮಾತ್ರ ಶೀರ್ಷಿಕೆ ಪುಟ ಕೊಡಲಾಗಿದೆ.

ಸಂಪುಟ ಒಂದರಿಂದ ಸಂಪುಟ ನಾಲ್ಕರವರೆಗೆ ಆಂಗ್ಲಭಾಷೆಯಲ್ಲಿ ಕೊಟ್ಟಿರುವ ಶೀರ್ಷಿಕೆ ಪುಟದ ಒಂದು ಮಾದರಿ ಈ ರೀತಿ ಇದೆ.

A DESCRIPTIVIE
CATALOGUE OF KANNADA MANUSCRIPTS

In the

Oriental Research Institutde, Mysore
Vol (no)

General Editor
H.Deveerappa M.A.
Director

Editor
B.S.Sannaiah M.A
Asst. Director

Assisted by
The Research Assistants

(UNIVERSITY EMBLUM)

ORIENTAL RESEARCH INSTITUTE
University of Mysore
Mysore

Year

ಸಂಪುಟ ಒಂದರಿಂದ ಸಂಪುಟ ನಾಲ್ಕರವರೆಗೆ ಕನ್ನಡದಲ್ಲಿ ಕೊಟ್ಟಿರುವ ಶೀರ್ಷಿಕೆ ಪುಟದ ಒಂದು ಮಾದರಿ ಈ ಕೆಳಕಂಡಂತಿದೆ

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ
ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ

ಸಂಪುಟ (ಸಂಖ್ಯೆ)

ಪ್ರಧಾನ ಸಂಪಾದಕರು
ಹೆಚ್. ದೇವೀರಪ್ಪ ಎಂ.ಎ.
ಡೈರೆಕ್ಟರ್

(ಮೈ.ವಿ.ವಿ.ಲಾಂಛನ ಚಿತ್ರ)

ಪ್ರಾಚ್ಯ ವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಇಸವಿ

ಸಂಪುಟ ೫ರಿಂದ ಸಂಪುಟ ೯ರವರೆಗೆ ಕನ್ನಡದಲ್ಲಿ ಕೊಟ್ಟಿರುವ ಶೀರ್ಷಿಕೆ ಪುಟದ ಒಂದು ಮಾದರಿ ಈ ಕೆಳಕಂಡಂತಿದೆ

> ಕನ್ನಡ ಹಸ್ತಪ್ರತಿಗಳ
> ವರ್ಣನಾತ್ಮಕ ಸೂಚೀ
>
> ಸಂಪುಟ – (ಸಂಖ್ಯೆ)
>
> ಸಂಯೋಜಕ ಸಂಪಾದಕ
> ಬಿ.ಎಸ್. ಸಣ್ಣಯ್ಯ
>
> (ವಿ.ವಿ. ಲಾಂಛನ ಚಿತ್ರ)
>
> ಕನ್ನಡ ಅಧ್ಯಯನ ಸಂಸ್ಥೆ
> ಮೈಸೂರು ವಿಶ್ವವಿದ್ಯಾನಿಲಯ
>
> ಇಸವಿ

ಮೈಸೂರು ವಿಶ್ವವಿದ್ಯಾನಿಲಯ ಹಸ್ತಪ್ರತಿ ಸೂಚಿಗಳ ರಚನೆ ಮತ್ತು ಬಳಕೆ

೧ ಈ ಸೂಚಿ ಪಟ್ಟಿಕೆಯಲ್ಲಿ ಮೊದಲು ಕ್ರಮಾಂಕವನ್ನು ಆಂಗ್ಲ ಸಂಖ್ಯೆಯಲ್ಲಿ ಕೊಟ್ಟು ಅನಂತರ ಗ್ರಂಥದ ಸಂಖ್ಯೆಯನ್ನು ಕನ್ನಡ ಅಂಕಿಗಳಲ್ಲಿ ಕೊಡಲಾಗಿದೆ.

೨ ಈ ಅಂಕಿಗಳ ಹಿಂದೆ 'ಕೆ' ಎಂದಿದ್ದರೆ ಓಲೆಯ ಪ್ರತಿಯೆಂದೂ 'ಕೆ.ಎ' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿಯೆಂದೂ 'ಕೆ.ಬಿ' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ತಿಳಿಯಬೇಕು.

೩ ಒಂದೇ ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಆ ಕಟ್ಟಿನಲ್ಲಿ ಎಷ್ಟನೆಯದೆಂಬುದನ್ನು ಸೂಚಿಸಲು ಹಸ್ತಪ್ರತಿಸಂಖ್ಯೆಯ ಮುಂದೆ

ಒಂದು ಓರೆ ಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಡಲಾಗಿದೆ.

೪ ಅನಂತರ ಗ್ರಂಥದ ಹೆಸರು, ಪ್ರಭೇದಗಳನ್ನು ಸೂಚಿಸಿದೆ.

೫ ಎರಡನೆಯ ಸಾಲಿನಲ್ಲಿ ಹಸ್ತಪ್ರತಿಯ ಅಳತೆ, ಗ್ರಂಥದ ಕರ್ತೃ, ಆತನ ಕಾಲಗಳನ್ನು ವಿವರಿಸಲಾಗಿದೆ. ಇವು ತಿಳಿಯದಿದ್ದಾಗ ಪ್ರಶ್ನಾರ್ಥಕ ಚಿಹ್ನೆಗಳನ್ನು ಸೂಚಿಸಲಾಗಿದೆ. ಕವಿ ಮತ್ತು ಕಾಲ ವಿಚಾರಗಳಿಗೆ ಬಹುಮಟ್ಟಿಗೆ ಕರ್ಣಾಟಕ ಕವಿಚರಿತೆಯನ್ನೇ ಅವಲಂಬಿಸಿದೆ.

೬ ಮೂರನೇ ಸಾಲಿನಲ್ಲಿ ಪತ್ರಸಂಖ್ಯೆಗಳನ್ನು, ಪ್ರತಿ ಪತ್ರದ ಒಮ್ಮುಖದಲ್ಲಿ ಎಷ್ಟು ಪಂಕ್ತಿಗಳಿವೆಯೆಂಬುದನ್ನೂ ಕೊಟ್ಟಿದೆ. ಪತ್ರ ಎಂದಿದ್ದಾಗ ಎರಡು ಕಡೆಯೂ ಸೇರಿ ಒಂದು ಪತ್ರವೆಂತಲೂ, ಪುಟ ಎಂದಿದ್ದರೆ ಪ್ರತಿಪತ್ರಕ್ಕೂ ಪುಟ ಸಂಖ್ಯೆ ಇದೆಯೆಂದೂ ಮೂಲಕ್ಕೆ ತಿಳಿಯಬೇಕು.

೭ ಪತ್ರದ ಒಂದು ಕಡೆ ಬರವಣಿಗೆಯಿದ್ದರೆ ಅದನ್ನು ವಿಶೇಷದಲ್ಲಿ ಸೂಚಿಸಲಾಗಿದೆ.

೮ ಗ್ರಂಥದ 'ಆದಿ' ಮತ್ತು 'ಅಂತ್ಯ' ಭಾಗಗಳಿಂದ ಉದ್ಧರಿಸುವಾಗ ಹಸ್ತಪ್ರತಿಗಳಲ್ಲಿ ಇದ್ದಂತೆಯೇ ಯಾವ ತಿದ್ದುಪಡಿಯೂ ಇಲ್ಲದೆ ಕೊಡಲಾಗಿದೆ. ಆದರೆ ಕೆಲವು ಕಡೆ ಪದ್ಯಗಳನ್ನು ಕೊಡುವಾಗ ಛಂದಸ್ಸಿಗನುಸಾರವಾಗಿ ವಿಭಾಗಿಸಲಾಗಿದೆ. ಮೂಲ ಪ್ರತಿಯಲ್ಲಿ ಇದ್ದಂತೆಯೇ ಕೊಡುವುದರಿಂದ ಹಸ್ತಪ್ರತಿಗಳ ಸ್ವರೂಪ ವ್ಯಕ್ತವಾಗುತ್ತದೆ.

೯ ಈ ಉದ್ಧೃತ ಭಾಗಗಳಲ್ಲಿ ಕೆಲವು ಕಡೆ (......) ಈ ಚಿಹ್ನೆಯನ್ನು ಹಾಕಿರುವಲ್ಲಿ ಗ್ರಂಥ ಲೋಪವೆಂದೂ (XXX) ಈ ಗುರುತಿರುವೆಡೆಯಲ್ಲಿ ಗ್ರಂಥಭಾಗವಿದ್ದರೂ ಬಿಟ್ಟು ಮುಂದಿನ ಭಾಗ ಕೊಟ್ಟಿದೆಯೆಂದೂ ತಿಳಿಯಬೇಕು.

೧೦ 'ವಿಷಯ' ವಿಭಾಗದಲ್ಲಿ ಗ್ರಂಥದ ಪ್ರತಿಪಾದ್ಯ ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಲಾಗಿದೆ.

೧೧ 'ವಿಶೇಷ' ವಿಭಾಗದಲ್ಲಿ ಗ್ರಂಥದ ಲಿಪಿ, ಸ್ಥಿತಿ, ಶಕಟರೇಫದ ಬಳಕೆ, ಅಸಮಗ್ರ, ಲುಪ್ತಪತ್ರಗಳ ವಿವರಣೆ, ಅದೇ ಕಟ್ಟಿನಲ್ಲಿರುವ ಇತರ ಗ್ರಂಥಗಳ ವಿವರಗಳನ್ನು ಸಂಗ್ರಹವಾಗಿ ಸೂಚಿಸಿದೆ.

೧೨ ಸಂಸ್ಕೃತ ಮತ್ತು ಇತರ ಭಾಷೆಯ ಗ್ರಂಥಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ ಕೊನೆಯ ಸಂಪುಟದ ಅನುಬಂಧದಲ್ಲಿ ಕೊಡಲಾಗಿದೆ.

ಸೂಚೀ ಶಿಲ್ಪ

ವಿನ್ಯಾಸ: ಮೈಸೂರು ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿರುವ ೧೫ ಅಂಶಗಳು ಹೀಗಿವೆ.

೧. ಕ್ರಮಸಂಖ್ಯೆ
೨. ಹಸ್ತಪ್ರತಿ ಸಂಖ್ಯೆ ಗ್ರಂಥದ ಸಾಂಕೇತಿಕಾಂಕ
೩. ಗ್ರಂಥದ ಹೆಸರು
೪. ಗ್ರಂಥದ ಪ್ರಭೇದ
೫. ಓಲೆ ಪ್ರತಿಯ ಅಳತೆ
೬. ಕವಿಯ ಹೆಸರು
೭. ಕವಿಯ ಕಾಲ
೮. ಗ್ರಂಥ ಪ್ರಾರಂಭವಾಗುವ ಮತ್ತು ಮುಗಿಯುವ ಪತ್ರಸಂಖ್ಯೆ/ಪುಟಸಂಖ್ಯೆ
೯. ಸಾಲುಗಳ ಸಂಖ್ಯೆ
೧೦. ಅಕ್ಷರಗಳ ಸಂಖ್ಯೆ
೧೧. ಆದಿ
೧೨. ಅಂತ್ಯ
೧೩. ವಿಷಯ
೧೪. ವಿಶೇಷ
೧೫. ವಿವರಣೆ ಬರೆದವರ ಆದ್ಯಕ್ಷರ

ಸೂಚೀ ಶಿಲ್ಪದ ಮಾದರಿ

	೧. ಕ್ರಮ ಸಂಖ್ಯೆ	
೨. ಹಸ್ತಪ್ರತಿ ಸಂಖ್ಯೆ	೩. ಗ್ರಂಥದ ಹೆಸರು	೪. ಗ್ರಂಥದ ಪ್ರಭೇದ
೫. ಓಲೆಯ ಪ್ರತಿಯ ಅಳತೆ	೬. ಕವಿಯ ಹೆಸರು	೭. ಕವಿಯ ಕಾಲ
೮.ಪ್ರತಿ/ಪುಟ ಸಂಖ್ಯೆ	೯.ಸಾಲುಗಳ ಸಂಖ್ಯೆ	೧೦. ಅಕ್ಷರಗಳ ಸಂಖ್ಯೆ
	೧೧. ಆದಿಭಾಗ	
	೧೨. ಅಂತ್ಯಭಾಗ	
	೧೩. ವಿಷಯ	
	೧೪. ವಿಶೇಷ	
		೧೫. ವಿವರಣೆ ಬರೆದವರ ಆದ್ಯಕ್ಷರ

ಪ್ರತೀ ಗ್ರಂಥದ ವರ್ಣನೆಯೂ 'ಕ್ರಮಾಂಕ' ಮೊದಲಾಗಿ 'ವಿಶೇಷ' ಕಡೆಯಲ್ಲಿ ಕೊಟ್ಟು ಒಟ್ಟು ಹದಿನೈದು ವಿಭಾಗಗಳನ್ನೊಳಗೊಂಡಿದೆ. ಮೇಲೆ ವಿವರಿಸಿದ ರೀತಿಯಲ್ಲಿ ಪಟ್ಟಿ ಮಾಡಲಾಗಿರುವ ಗ್ರಂಥಗಳಲ್ಲಿ ಒಂದಾದ 'ಜೀವಂಧರ ಚರಿತೆ' ಎಂಬ ಗ್ರಂಥದ ವಿವರಣೆಯನ್ನು ಉದಾಹರಣೆಯಾಗಿ ಯಥಾವತ್ತಾಗಿ ಈ ಕೆಳಗೆ ಕೊಟ್ಟಿದೆ (ನೋಡಿ ಸೂಚಿ ಸಂಪುಟ – ೨.ಕ್ರಮಸಂಖ್ಯೆ: ೫೬೯;ಪುಟ:೬೯)

೫೬೯

೧.ಕ್ರಮಸಂಖ್ಯೆ

೨. ಕೆಬಿ.೬೫ (ಹಸ್ತಪ್ರತಿ ಸಂಖ್ಯೆ)	೩. ಜೀವಂಧರ ಚರಿತೆ (ಗ್ರಂಥದ ಹೆಸರು)	೪.ಭಾಮಿನೀ ಷಟ್ಪದಿ (ಗ್ರಂಥದ ಪ್ರಭೇದ)
೫. ೨.೨" x ೬.೨" (ಓಲೆಪ್ರತಿಯ ಅಳತೆ)	೬. ಭಾಸ್ಕರ' (ಕವಿಯ ಹೆಸರು)	೭. ೧೪೨೪ (ಕವಿಯ ಕಾಲ)
೮. ೧.೧೮೮ ಪತ್ರ (ಪತ್ರ/ಪುಟ ಸಂಖ್ಯೆ)	೯. ೧೧ ಪಂಕ್ತಿ (ಸಾಲುಗಳ ಸಂಖ್ಯೆ)	೧೦. ೨೩ ಅಕ್ಷರ (ಅಕ್ಷರಗಳ ಸಂಖ್ಯೆ)

೧೧ ಆದಿ: ಶ್ರೀ ಜೀವಂಧರ ಷಟ್ಪ ಬರೆಯುವುದಕ್ಕೆ ನಿರ್ವಿಘ್ನಮಸ್ತು
ಸೂಚನೆ: ರಾಯ ಮಗಧನೃಪೇಂದ್ರ ಚಂದ್ರನ
ಜೇಯನೆನಿಪ ಸುಧರ್ಮಮುನಿಪನು
ವಾಯಿಯಿಂದರುಹಿದನು ಜೀವಂಧರನ ಸುಚರಿತೆಯಾ

ಪದನೂ ॥ ಶ್ರೀವ ದಖಿಳೇಂದ್ರೋತ್ತಮಾಂಗ
ಸ್ತೋಮ ಮಣಿಮಕುಟಾಂಶುಚಂಚ
ತ್ಕೋಮಲಾಂಘ್ರಿ ದ್ವಯನ ಚಿಂತನಜಾತನದ್ವಿತಯಾ
ಕಾಮಮದಹರನಮಳಮುಕ್ತಿ
ಶ್ರೀಮುಖಾಬ್ಜದಿನೇಶನರ್ಹ
ಸ್ವಾಮಿ ಮುದದಿಂದೀಗೆಮಗೆ ಕೈವಲ್ಯ ಸಂಪದವಾ ॥೧॥

೧೨. **ಅಂತ್ಯ;** ಶರಗತಿತ್ರಯ ಚಂದ್ರ ಸಂಖ್ಯೆಯ
ವರ ಶಕಾಬ್ದಾಕ್ರೋಧಿಸೂವ
ತ್ತರದ ಫಾಲ್ಗುಣ ಶುದ್ಧದಶಮಿ ದಿನೇಶವಾರದಲಿ
ಮೆರೆವ ಪೆನುಗೊಂಡೆಯ ಸುಶಾಂತೀ
ಶ್ವರನ ಜಿನವಾಸದಲಿ ಜೀವಂ
ಧರನ ಚರಿತೆಯ ರಚಿಸಿದನು ಜಾಣ್ಮೆಯಲಿ ಭಾಸ್ಕರನು ॥೧೯॥
ಗದ್ಯ ॥ ಇದು ವಿನಮದಮರೇಂದ್ರ ಶ್ರೀಜಿನ
ಪದಕಮಲ ಷಟ್ಚರಣ ವಾಣೀ
ವದನದರ್ಪಣ ಭೂಸುರೋತ್ತಮ ಬಸವಣಾಂಕ ಸುತಾ
ಚದುರ ಭಾಸ್ಕರರಚಿತ ಧರ್ಮ
ಪ್ರದನ ಜೀವಂಧರನ ಚರಿತೆಯಾ
ಳಿದುವೆ ನಿರ್ವಾಣಾದಿವರ್ಣನೆ ಈ ಪ್ರಬಂಧದಲಿ

೧೩. **ವಿಷಯ:** ಜೀವಂಧರನ ಕಥೆ

೧೪. **ವಿಶೇಷ:** ಅಕ್ಷರಗಳು ಸ್ಫುಟವಾಗಿಯೂ ಸುಂದರವಾಗಿಯೂ ಇವೆ

೧೫ ಬಿ.ಎಸ್.ಎಸ್.
(ವಿವರಣೆ ಬರೆದವರ ಆದ್ಯಕ್ಷರ)

ಮೈಸೂರು ವಿ.ವಿ.ಹಸ್ತಪ್ರತಿ ಸೂಚಿಯಲ್ಲಿ ಬರುವ ೧೪ ಅಂಶಗಳ ವಿವರಣೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ

೧. **ಕ್ರಮಸಂಖ್ಯೆ** : ಆಯಾ ಹಸ್ತಪ್ರತಿ ಭಂಡಾರಗಳಲ್ಲಿ ಓಲೆಕಟ್ಟುಗಳಿಗೆ ಕೊಟ್ಟ ಕ್ರಮಾಂಕ ಇದಾಗಿರುತ್ತದೆ. ಎಲ್ಲ ಭಂಡಾರಗಳಲ್ಲೂ ಓಲೆ ಕಟ್ಟಿಕೊಂದು ಸಂಖ್ಯೆ ಕೊಟ್ಟು ಕ್ರಮವಾಗಿ ಜೋಡಿಸುವ ಪರಿಪಾಠವಿದೆ. ಅದೇರೀತಿ ಇಲ್ಲಿಯೂ ಅದೇ ಮಾದರಿಯನ್ನು ಅನುಸರಿಸಿ ಕ್ರಮಾಂಕವನ್ನು ಕೊಡಲಾಗಿದೆ. ಆದರೆ 'ಎಲ್ಲ ಅಂಶಗಳನ್ನು ಕನ್ನಡದಲ್ಲಿ ಕೊಟ್ಟು ಕ್ರಮಸಂಖ್ಯೆಯನ್ನು ಮಾತ್ರ ಆಂಗ್ಲ ಅಂಕಿಗಳಲ್ಲಿ ಕೊಡಲಾಗಿದೆ'. ಕ್ರಮಾಂಕವನ್ನು ಕನ್ನಡ ಅಂಕಿಗಳಲ್ಲಿ ದಪ್ಪದಾಗಿ ಕೊಡಬಹುದಾಗಿತ್ತು.

೨. **ಹಸ್ತಪ್ರತಿಸಂಖ್ಯೆ** : ಇದನ್ನು ಗ್ರಂಥದ ಸಾಂಕೇತಿಕಾಂಕವೆಂದು ಕರೆಯಲಾಗಿದೆ. ಇಲ್ಲಿ ಗ್ರಂಥದ ಸಾಂಕೇತಿಕಾಂಕವನ್ನು ಕನ್ನಡ ಅಂಕಿಗಳಲ್ಲಿ ಸಣ್ಣದಾಗಿ ಕೊಡಲಾಗಿದೆ. ಅಷ್ಟೇ ಅಲ್ಲದೆ ಪ್ರತಿಯ ಸ್ವರೂಪ ತಿಳಿಯಲು ಅಂಕಿಗಳ ಹಿಂದೆ ಕೆ, ಕೆ.ಎ, ಕೆ.ಬಿ ಎಂಬ ಸಂಕೇತಾಕ್ಷರಗಳನ್ನೂ ಕೊಡಲಾಗಿದೆ. 'ಕೆ'. ಎಂದಿದ್ದರೆ ಓಲೆಯ ಪ್ರತಿಯೆಂದೂ, 'ಕೆ.ಎ' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿ ಎಂದೂ, 'ಕೆ.ಬಿ' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ತಿಳಿಸಲಾಗಿದೆ. ಒಂದು ವೇಳೆ ಒಂದೇ ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಕಟ್ಟಿನಲ್ಲಿ ಎಷ್ಟನೆಯದೆಂಬುದನ್ನು ಸೂಚಿಸಲು ಹಸ್ತಪ್ರತಿ ಸಂಖ್ಯೆಯ ಮುಂದೆ ಒಂದು ಓರೆ ಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಡಲಾಗಿದೆ.

೩. **ಗ್ರಂಥದ ಹೆಸರು:** ಇಲ್ಲಿ ಗ್ರಂಥದ ಹೆಸರನ್ನು ಉಲ್ಲೇಖಿಸಲಾಗಿದೆ. ಒಂದು ಗ್ರಂಥಕ್ಕೆ ಬೇರೆ ಬೇರೆ ಹೆಸರುಗಳಿದ್ದರೆ ಆ ಇನ್ನೊಂದು ಹೆಸರನ್ನು ಪಕ್ಕದಲ್ಲಿ ಕಂಸವನ್ನು ಗುರುತಿಸಿ ಅದರಲ್ಲಿ ಹೆಸರಿಸಲಾಗಿದೆ. ಗ್ರಂಥದ ಹೆಸರನ್ನು ಉಲ್ಲೇಖಿಸುವಾಗ ಅದು ಯಾವ ಭಾಷೆಯದು ಎಂಬುದರ ಬಗ್ಗೆ ಪ್ರಸ್ತಾಪವಿಲ್ಲ. ಏಕೆಂದರೆ ಒಂದು ಕಟ್ಟಿನಲ್ಲಿ ಬೇರೆ ಬೇರೆ ಭಾಷೆಯ ಪ್ರತಿಗಳಿರಬಹುದು.

೪. **ಗ್ರಂಥದ ಪ್ರಭೇದ** : ಬೇರೆ ಬೇರೆ ಹಸ್ತಪ್ರತಿ ಸೂಚಿಗಳಲ್ಲಿ ಇದನ್ನು ಶೈಲಿ, ಪ್ರಕಾರ, ಎಂದೂ ಗುರುತಿಸುವುದುಂಟು. ಗ್ರಂಥದ ಸಾಹಿತ್ಯ ಪ್ರಕಾರವನ್ನು ಶೈಲಿ ಎಂದೂ ಕರೆಯಬಹುದು. ಕಟ್ಟಿನಲ್ಲಿರುವ ಗ್ರಂಥದ ಸಾಹಿತ್ಯ, ಚಂಪೂ, ಶ್ಲೋಕ, ಗದ್ಯ, ವೃತ್ತ, ಟೀಕು. ಕಂದ, ರಗಳೆ, ಷಟ್ಪದಿ ಛಂದೋರೂಪಗಳನ್ನು ಹೋಂದಿರುತ್ತದೆ. ಈ ಭಾಗದಲ್ಲಿ ಅದನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

೫. **ಓಲೆ ಪ್ರತಿಯ ಅಳತೆ** : ಇಲ್ಲಿ ಪ್ರತಿಯ ಉದ್ದ ಮತ್ತು ಅಗಲಗಳ ಅಳತೆಯನ್ನು ಗುರುತಿಸಲಾಗಿದೆ. ಕನ್ನಡ ಅಂಕಿಗಳನ್ನು ಬಳಸಲಾಗಿದೆ. ಆದರೆ ಉದ್ದ ಅಗಲಗಳ ನಡುವೆ 'ಥ' ಚಿಹ್ನೆಯನ್ನು ಬಳಸಿದ್ದಾರಾದರೂ ಯಾವುದು ಉದ್ದವನ್ನು ಸೂಚಿಸುತ್ತದೆ ಯಾವುದು ಅಗಲವನ್ನು ಸೂಚಿಸುತ್ತದೆ ಎಂಬುದು ಸ್ಪಷ್ಟವಾಗಿಲ್ಲ ಉದ್ದವನ್ನು ತಿಳಿಸುವಾಗ 'ಉ'' ಸಂಕೇತಾಕ್ಷರವನ್ನು ಅಗಲವನ್ನು ತಿಳಿಸುವಾಗ 'ಅ' ಎಂಬ ಸಂಕೇತಾಕ್ಷರವನ್ನೂ ಬಳಸಬಹುದಾಗಿತ್ತು.

೬. **ಕವಿಯ ಹೆಸರು:** ಈ ಭಾಗದಲ್ಲಿ ಕೃತಿಯ ಕರ್ತೃವಿನ ಹೆಸರನ್ನು ಗುರುತಿಸಲಾಗಿದೆ. ಅಪೂರ್ಣ ಪ್ರತಿ ಇದ್ದಾಗ ಗ್ರಂಥದ ಯಾವುದೇ ಭಾಗವನ್ನು ಪ್ರತಿಮಾಡಿದಾಗ ಸ್ತೋತ್ರ, ವಚನ, ಕೀರ್ತನೆ ಇತ್ಯಾದಿಗಳನ್ನು ಪ್ರತಿಮಾಡಿದಾಗ ಕರ್ತೃವಿನ ಹೆಸರು ಇರುವುದಿಲ್ಲ. ಕರ್ತೃ ಗೊತ್ತಿಲ್ಲದಿದ್ದಾಗ '?' ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿರುತ್ತಾರೆ. ಎಷ್ಟೋ ಸಾರಿ ಕೃತಿಯ ಕಾಲವನ್ನು ಇತರ ಆಧಾರಗಳಿದ ನಿರ್ಧರಿಸಬಹುದು ಅಥವಾ ಊಹೆ ಮಾಡಿ ಕಾಲವನ್ನು ಗುರುತಿಸಬಹುದು. ಆದರೆ ಕರ್ತೃವನ್ನು ಗುರುತಿಸುವುದು ಕಷ್ಟ. ಸೂಚಿಕಾರರು ಕರ್ತೃವನ್ನು ಗುರುತಿಸುವಾಗ ಕವಿಚರಿತೆಯನ್ನು ಅವಲಂಬಿಸಿದ್ದಾರೆ. ಆ ಬಗ್ಗೆ ನಡೆದ ಸಂಶೋಧನೆ ಸಂಗತಿಗಳ ಬಗ್ಗೆ ವಿದ್ವಾಂಸರು ಗಮನಹರಿಸಿರುವುದಿಲ್ಲ.

ಉದಾಹರಣೆಗೆ : 1) ಸಂಪುಟ ನಾಲ್ಕು ಕ್ರಮಸಂಖ್ಯೆ ೧೯೩೨ರಲ್ಲಿ "ಸುಕುಮಾರ ಚರಿತೆ'ಯ ಕರ್ತೃ ಪ್ರಶ್ನಾರ್ಥಕ ಚಿಹ್ನೆ ಹಾಕಲಾಗಿದೆ. ಆದರೆ ಸುಕುಮಾರ ಚರಿತೆಯ ಕರ್ತೃ "ಆದಿದೇವ'. ಇದೇ ಹಸ್ತಪ್ರತಿಯನ್ನು ಆಧಾರವಾಗಿಟ್ಟುಕೊಂಡು ಡಿ.ಎಲ್.ಎನ್ ಲೇಖ ಬರೆದಿದ್ದಾರೆ.[೭]

2) ಸಂಪುಟ–ಒಂಬತ್ತು ಕ್ರಮಸಂಖ್ಯೆಯ ೨೯೩ರಲ್ಲಿ 'ಹಸ್ತ್ಯಾಯುರ್ವೇದ' ಇದರ ಕರ್ತೃವಿಗೆ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಲಾಗಿದೆ. 'ಹಸ್ತ್ಯಾಯುರ್ವೇದ'ವನ್ನು ಬರೆದವನು ವೀರಭದ್ರರಾಜ. ಅವನ ಕಾಲ ಕ್ರಿ.ಶ.೧೬೦೦ ಇದು ಪಾಲಕಾಸ್ತ್ಯಾಯುರ್ವೇದದ ಕನ್ನಡ ಟೀಕು.[೮]

3) ಸಂಪುಟ ಮೂರು ಕ್ರಮಸಂಖ್ಯೆ ೧೮೯೮. ಇಲ್ಲಿ 'ರನ್ನ ನಿಘಂಟು' ಎಂಬ ಕೃತಿಯನ್ನು ಪ್ರಸ್ತಾಪಿಸಿ ಕರ್ತೃವಿನ ಹೆಸರಿನಲ್ಲಿ ಪ್ರಶ್ನಾರ್ಥಕ ಚಿಹ್ನೆ ಹಾಕಲಾಗಿದೆ. ಆದರೆ ಇದು ರನ್ನ ನಿಘಂಟು ಎಂಬುದು ಎಲ್ಲರಿಗೂ ಒಪ್ಪಿತವಾದ ವಿಷಯ. ರನ್ನ ನಿಘಂಟುವಿನ ನಾಲ್ಕು ಪರಿಷ್ಕರಣಗಳು ಪ್ರಕಟವಾಗಿವೆ. ರನ್ನನ ಕಾಲ ಮತ್ತು ಕರ್ತೃವನ್ನು ಪ್ರಶ್ನಾರ್ಥಕ ಚಿಹ್ನೆಯಿಂದ ಸೂಚಿಸಲಾಗಿದೆ.[೯]

4) ಸಂಪುಟ ಮೂರು. ಕ್ರಮಸಂಖ್ಯೆ–೧೪೬೯ರಲ್ಲಿ ರುಕ್ಮಾಂಗದ ಚರಿತ್ರೆಯ ಕರ್ತೃ ಲಕ್ಷ್ಮೀಶ ಎಂದಿದೆ. ಆದರೆ ಇದರ ಕರ್ತೃ 'ಲಕ್ಷ್ಮಕವಿ' ಇದನ್ನು ಸರಿಯಾಗಿ ಗಮನಿಸದೆ ಲಕ್ಷ್ಮೀಶ ಎಂದು ಹೇಳಲಾಗಿದೆ. ಈ ಕೃತಿ ಪ್ರಕಟವಾಗಿದೆ.[೧೦]

5) ಸಂಪುಟ ಮೂರು, ಕ್ರಮಸಂಖ್ಯೆ–೧೨೪೨ರಲ್ಲಿ 'ಮದನ ವಿಜಯ' ಕೃತಿಯ ಕರ್ತೃ ಕಲ್ಲರಸ. ಆದರೆ ಸೂಚಿಯಲ್ಲಿ ಮಲ್ಲಿಕಾರ್ಜುನ ನೃಪಾಲ ಎಂದಿದೆ. ಕಾಲವೂ ಸ್ಪಷ್ಟವಾಗಿಲ್ಲ.[೧೧] ಈ ಕೃತಿಯ ಅಂತ್ಯಭಾಗದಲ್ಲಿ 'ಜನವಶ್ಯ' ಎಂದು ಈ ಕೃತಿಯ ಹೆಸರು ಸೂಚಿತವಾಗಿದ್ದರೂ 'ಮದನ ವಿಜಯ' ಎಂಬ ಹೆಸರನ್ನು ಕೊಟ್ಟಿದ್ದಾರೆ. 'ಜನವಶ್ಯ' ಪ್ರಕಟವಾಗಿದೆ ಕೂಡ.[೧೨]

6) ಸಂಪುಟ–ಮೂರು ಕ್ರಮಸಂಖ್ಯೆ ೧೨೪೩ ರ ಅಂತ್ಯಭಾಗದಲ್ಲಿ 'ಮದನ ವಿಜಯ'ದ ಕರ್ತೃ "ಸಲ್ಲಿತವಾಣಿ ಕವಿ ಕಲ್ಲರಸನರಿವ" ಎಂದು ಸ್ಪಷ್ಟವಾಗಿ ಉಲ್ಲೇಖವಿದೆ.

7) ಸಂಪುಟ–ಮೂರು–ಕ್ರಮಸಂಖ್ಯೆ–೧೪೫೦. ಇಲ್ಲಿ 'ರಾಮ ಪಟ್ಟಾಭಿಷೇಕ ಕೃತಿಯ ಕರ್ತೃ 'ಮಹಾಲಕ್ಷ್ಮಿ' ಎಂದಿದೆ. ಆದರೆ ಸಂಶೋಧನೆಗಳಿಂದ ಮತ್ತು ಅಧ್ಯಯನಗಳಿಂದ 'ರಾಮಪಟ್ಟಾಭಿಷೇಕ' ಕೃತಿಯ ಕರ್ತೃ ಮುದ್ದಣ ಎಂಬುದು ತಿಳಿದುಬಂದಿದೆ. ಆತನ ಕಾಲವೂ ಸ್ಪಷ್ಟವಾಗಿದೆ. ಆದರೂ ಇಲ್ಲಿ ಕರ್ತೃ ಮಹಾಲಕ್ಷ್ಮಿ ಎಂದೂ ಕಾಲವನ್ನು ಪ್ರಶ್ನಾರ್ಥಕ ಚಿಹ್ನೆಯಲ್ಲಿಯೂ ಹಾಕಲಾಗಿದೆ.[೧೩]

ಈ ಎಲ್ಲಾ ಅಂಶಗಳಿಂದ ತಿಳಿದು ಬರುವುದೇನೆಂದರೆ ಸೂಚೀಕಾರರು ಯಾವುದೇ ಹೊಸ ಸಂಶೋಧನೆ ಬಗ್ಗೆ ಗಮನಹರಿಸಿಲ್ಲ ಎಂಬುದು.

೭. **ಕವಿಯ ಕಾಲ :** ಕರ್ತೃವಿನ ಕಾಲವನ್ನು ಕನ್ನಡ ಅಂಕಿಗಳಲ್ಲಿ ಕೊಡಲಾಗಿದೆ. ಒಂದು ವೇಳೆ ಕಾಲ ಸ್ಪಷ್ಟವಾಗಿ ತಿಳಿಯದಿದ್ದಾಗ ಪ್ರಶ್ನಾರ್ಥಕ ? ಚಿಹ್ನೆಯನ್ನು ಹಾಕಲಾಗಿದೆ. ಆದರೆ ಅದು ಪ್ರತಿಕಾರನ ಕಾಲವೋ ಕೃತಿಕಾರನ ಕಾಲವೋ ಎಂಬುದನ್ನು ಸ್ಪಷ್ಟವಾಗಿ ತಿಳಿಸಬಹುದಾಗಿತ್ತು.

೮. **ಪತ್ರಸಂಖ್ಯೆ:** ಇಲ್ಲಿ ಪತ್ರ ಎಂದಿದ್ದಾಗ ಎರಡು ಕಡೆಯೂ ಸೇರಿ ಒಂದು ಪತ್ರವೆಂತಲೂ ಪುಟ ಎಂದಿದ್ದರೆ ಪ್ರತಿ ಪತ್ರಕ್ಕೂ ಪುಟಸಂಖ್ಯೆ ಇದೆಯೆಂದೂ ತಿಳಿಯಬೇಕು. ಪತ್ರದ ಒಂದೇ ಕಡೆ ಬರವಣಿಗೆಯಿದ್ದರೆ ಅದನ್ನು ವಿಶೇಷದಲ್ಲಿ ಸೂಚಿಸಲಾಗಿದೆ. ಮೊದಲ ಸಂಖ್ಯೆ ಗ್ರಂಥ ಪ್ರಾರಂಭವಾಗುವ ಪತ್ರಸಂಖ್ಯೆ, ನಂತರದ ಸಂಖ್ಯೆ ಗ್ರಂಥ ಮುಗಿಯುವ ಪತ್ರಸಂಖ್ಯೆಯಾಗಿದೆ.

೯. **ಸಾಲುಗಳ ಸಂಖ್ಯೆ:** ತಾಳೆಗರಿಯ ಒಂದು ಪುಟದಲ್ಲಿ ಎಷ್ಟು ಸಾಲುಗಳಿವೆ ಎಂಬುದನ್ನು ಈ ಭಾಗದಲ್ಲಿ ಗುರುತಿಸಲಾಗಿದೆ. ಪ್ರತಿಪತ್ರದ ಒಮ್ಮುಖದಲ್ಲಿ ಎಷ್ಟು ಪಂಕ್ತಿಗಳಿವೆಯೆಂಬುದನ್ನು ಇದರಿಂದ ತಿಳಿಯಬಹುದು. ಕನ್ನಡ ಅಂಕಿಗಳನ್ನು ಇಲ್ಲಿ ಬಳಸಲಾಗಿದೆ.

೧೦. **ಅಕ್ಷರ ಸಂಖ್ಯೆ:** ಪ್ರತಿ ಪಂಕ್ತಿಯಲ್ಲಿ ಎಷ್ಟು ಅಕ್ಷರಗಳಿವೆ ಎಂಬುದನ್ನು ಇಲ್ಲಿ ಕೊಟ್ಟಿದೆ. ಕನ್ನಡ ಅಂಕಿಗಳನ್ನು ಬಳಸಲಾಗಿದೆ. ತಾಳೆಗರಿಯ ಒಂದು ಪುಟದಲ್ಲಿ ಎಷ್ಟು ಸಾಲುಗಳಿವೆ, ಒಂದು ಸಾಲಿನಲ್ಲಿ ಎಷ್ಟು ಅಕ್ಷರಗಳಿವೆ, ಒಟ್ಟು ಎಷ್ಟು ಕೃತಿಗಳಿವೆ ಎಂಬ ವಿವರ ಕೊಡುವುದರಿಂದ ಗ್ರಂಥದ ಗಾತ್ರವನ್ನು ಊಹಿಸಬಹುದು.

೧೧. **ಆದಿಭಾಗ :** 'ಕೃತಿ'ಯ ಆದಿ ಮತ್ತು ಅಂತ್ಯಭಾಗಗಳೆರೆಡು ಹಸ್ತಪ್ರತಿ ಸೂಚಿಗಳಲ್ಲಿ ಅತಿಮುಖ್ಯವಾದ ಭಾಗಗಳು. ಕೃತಿಯ ಆದಿಯಲ್ಲಿ ಶೈಲಿ ಭಾಷೆಯಲ್ಲಿ ಹಾಗೆಯೇ ಕೊಡುವುದರಿಂದ ಕೃತಿಯ ಕಾಲ, ಕೃತಿಕಾರನ ಭಾಷೆ, ಲಿಪಿಕಾರನ ದೋಷ ಇತ್ಯಾದಿ ಅಂಶಗಳನ್ನು ತಿಳಿಯಬಹುದಾಗಿದೆ. ಕೃತಿಕಾರರ ಪ್ರತಿಕಾರರ ಸಂಗತಿಗಳು ತಿಳಿಯುತ್ತವೆ. ಆದಿಯಲ್ಲಿ ಗುರುಸ್ತುತಿ, ಆರಾಧ್ಯದೈವ ಸ್ತುತಿಗಳಿರುವುದನ್ನೂ ಕಾಣಬಹುದು.

೧೨. **ಅಂತ್ಯಭಾಗ:** ಆದಿ-ಅಂತ್ಯ ಭಾಗಗಳನ್ನು ಉದ್ಧರಿಸುವಾಗ ಹಸ್ತಪ್ರತಿಗಳಲ್ಲಿ ಇದ್ದಂತೆಯೇ ಯಾವ ತಿದ್ದುಪಡಿಯೂ ಇಲ್ಲದೆ ಕೊಡಲಾಗಿದೆ. ಆದರೆ ಕೆಲವೆಡೆ ಪದ್ಯಗಳನ್ನು ಕೊಡುವಾಗ ಛಂದಸ್ಸಿಗನುಸಾರವಾಗಿ ವಿಭಾಗಿಸಲಾಗಿದೆ. ಮೂಲಪ್ರತಿಯಲ್ಲಿ ಇದ್ದಂತೆಯೇ ಕೊಡುವುದರಿಂದ ಹಸ್ತಪ್ರತಿಗಳ ಸ್ವರೂಪಗಳನ್ನು ತಿಳಿಯಬಹುದು. ಈ ಉದ್ಧೃತ ಭಾಗಗಳಲ್ಲಿ ಕೆಲವು ಕಡೆ (...) ಚಿಹ್ನೆಗಳನ್ನು ಹಾಕಿದ್ದಾರೆ. ಇದರರ್ಥ ಲೋಪವೆಂದೂ, (XXXX) ಈ ಗುರುತಿರುವ ಕಡೆ ಗ್ರಂಥಭಾಗವಿದ್ದರೂ ಬಿಟ್ಟು ಮುಂದಿನಭಾಗ ಕೊಟ್ಟಿದೆಯೆಂದೂ ತಿಳಿಸಲಾಗಿದೆ. ಆದಿಭಾಗದಲ್ಲಿ ಕವಿ-ಕಾವ್ಯದ ಬಗ್ಗೆ ವಿವರ ತಿಳಿದರೆ ಅಂತ್ಯದಲ್ಲಿ ಲಿಪಿಕಾರರ ವಿಷಯ

ತಿಳಿಯುತ್ತದೆ. ಕೃತಿಯ ಲಿಪಿಕಾರನ ಕಾಲ, ಪ್ರತಿ ಬರೆಸಿದವರ ವಿಷಯ ಮುಂತಾದ ಸಂಗತಿಗಳೂ ತಿಳಿಯುತ್ತವೆ. ಅಪೂರ್ಣ ಕೃತಿಗಳಲ್ಲಿ 'ಅಂತ್ಯ' ಕೆಲವೊಮ್ಮೆ ಲಭ್ಯವಿರುವುದಿಲ್ಲ.

೧೩. **ವಿಷಯ:** ವಿಷಯ ಎಂಬ ಭಾಗದಲ್ಲಿ ಆಯಾ ಗ್ರಂಥದ ಪ್ರತಿಪಾದ್ಯ ವಿಷಯವನ್ನು ಒಂದೊಂದೇ ವಾಕ್ಯದಲ್ಲಿ ಸೂಚಿಸಲಾಗಿದೆ.

೧೪. **ವಿಶೇಷ:** ವಿಶೇಷ ಎಂಬ ಭಾಗದಲ್ಲಿ ಗ್ರಂಥದ ಲಿಪಿ, ಸ್ಥಿತಿ, ಶಕಟ ರೇಫದ ಬಳಕೆ, ಅಸಮಗ್ರ, ಲುಪ್ತಪತ್ರಗಳ ವಿವರಣೆ, ಅದೇ ಕಟ್ಟಿನಲ್ಲಿರುವ ಇತರ ಗ್ರಂಥಗಳ ವಿವರಗಳನ್ನು ಸಂಗ್ರಹವಾಗಿ ಪಟ್ಟಿಮಾಡಿ ಕೊನೆಯ ಪುಟದಲ್ಲಿ ಅನುಬಂಧದ ರೂಪದಲ್ಲಿ ಕೊಡಲಾಗಿದೆ. ಕೆಲವು ಕಡೆ ಇಲ್ಲೂ ಲೋಪವಿರುವುದನ್ನು ಕಾಣಬಹುದು. ಉದಾಹರಣೆ: ಸಂಪುಟ–ಐದು ಕ್ರಮಸಂಖ್ಯೆ: ೮೧ ಇಲ್ಲಿ 'ಅಭಿನವ ನಿಘಂಟು' ಇದರ ವಿಚಾರ ತಿಳಿಸುತ್ತಾ 'ವಿಶೇಷ' ಎಂಬ ಭಾಗದಲ್ಲಿ 'ಇದೇ ಪುಸ್ತಕದಲ್ಲಿ ಕವಿಕಂಠ ಪಾಶ, ನಾನಾರ್ಥ ರತ್ನಾಕರ, ವಿದಗ್ಧ ಮಂಗರಾಜ ನಿಘಂಟು ಎಂಬ ಕೃತಿಗಳಿವೆ' ಎಂಬ ಉಲ್ಲೇಖವಿದೆ. ಆದರೆ ಕೃತಿಗಳ ಅಕಾರಾದಿ ಪಟ್ಟಿಕೆಯಿರುವ ಒಂಬತ್ತನೇ ಸಂಪುಟದ ಕೊನೆಯಲ್ಲಿ 'ವಿದಗ್ಧ ಮಂಗರಾಜ' ಹೆಸರಿನ ಯಾವುದೇ ಕೃತಿ ಉಲ್ಲೇಖಗೊಂಡಿಲ್ಲ. ಇದು ಒಂದು ರೀತಿ ವಿರೋಧಾಭಾಸಕ್ಕೆ ಎಡೆ ಮಾಡಿಕೊಟ್ಟಿದೆ.

ಇನ್ನು ಕಟ್ಟಿನಲ್ಲಿ ಇತರ ಕೃತಿಗಳಿವೆ ಎಂದು ನಮೂದಿಸಿದಾಗ ಆ ಕೃತಿಗಳ ವಿವರಗಳು. ಆಯಾ ಹೆಸರಿನ ಅಕ್ಷರಾನುಕ್ರಮಣಿಕೆಯಂತೆ ಆಯಾ ಸ್ಥಳದಲ್ಲಿ ಬರಬೇಕು. ಅದು ಯಾವ ಸಂಪುಟದಲ್ಲಿ ಎಲ್ಲಿ ಬಂದಿದೆ ಎಂಬುದನ್ನು ಸೂಚಸಬೇಕಿತ್ತು. ಉದಾಹರಣೆಗೆ ಜೈನಕ್ರಿಯಾಸಾರ ಗ್ರಂಥ ಕೃತಿಗಳ ಆಕಾರಾದಿಯಲ್ಲಿ ೬–೧೨೫ರ ಉಲ್ಲೇಖ ಮಾತ್ರ ಇದೆ. ಸಂಪುಟ ೯ರಲ್ಲಿ 'ವಿಶೇಷ' ವಿಭಾಗದಲ್ಲಿ ೩೩೮, ೩೪೯ರಲ್ಲಿ ಜೈನಕ್ರಿಯಾಸಾರ ಗ್ರಂಥ ಆ ಕಟ್ಟಿನಲ್ಲಿದೆ ಎಂದು ತಿಳಿಸಲಾಗಿದೆ ಆದರೆ ಆ ಬಗ್ಗೆ ಸೂಚಿಯೇ ಇಲ್ಲ. ಇದರಿಂದ ಒಂದಂಶ ಸ್ಪಷ್ಟವಾಗುತ್ತದೆ. ಒಂದೊಂದು ಕಟ್ಟಿನಲ್ಲಿರುವ ಮೊದಲ ಗ್ರಂಥವನ್ನು ಮಾತ್ರ ಸೂಚಿಯಲ್ಲಿ ಪಟ್ಟಿ ಮಾಡಿ ಆ ಕಟ್ಟಿನಲ್ಲಿ ಇತರ ಗ್ರಂಥಗಳನ್ನು ವರ್ಣನಾಸೂಚಿ ಮಾಡಿಲ್ಲ ಎಂದು ತಿಳಿಯುತ್ತದೆ. ಆದಕಾರಣ ಈ ಸೂಚಿಗಳು ಭಂಡಾರದಲ್ಲಿರುವ ಎಲ್ಲ ಕೃತಿಗಳ ಸಮಗ್ರಸೂಚಿ ಆಗಿಲ್ಲ ಎಂಬುದನ್ನು ತಿಳಿಸುತ್ತದೆ. ಸಂಯೋಜಕ ಸಂಘಟಕರು ಅಥವಾ ಪ್ರಧಾನ ಸಂಪಾದಕರು ಈ ಅಂಶವನ್ನು ಗಮನಿಸಿ ಅದನ್ನು ಸೂಚಿ ತಯಾರಿಕರ ಗಮನಕ್ಕೆ ತಂದು ಪಟ್ಟಿಮಾಡಿಸಬೇಕಿತ್ತು. ಆದರೆ ಸಂಯೋಜಕ ಸಂಪಾದಕರು ಸೂಚಿಕಾರರ ಪಟ್ಟಿಕೆಗಳನ್ನು ಅಕಾರಾದಿ ಜೋಡಿಸಿದ್ದಾರೆಯೇ ಹೊರತು ಪರಿಶೀಲಿಸಿಲ್ಲ ಎನ್ನಬಹುದು.

'ವಿಶೇಷ' ಎಂಬ ವಿಭಾಗದಲ್ಲಿ ಕಟ್ಟಿನಲ್ಲಿರುವ ಇತರ ಗ್ರಂಥಗಳ ಹೆಸರುಗಳನ್ನಾದರೂ ಪೂರ್ತಿ ಕೊಡಬೇಕಿತ್ತು. ಆಗ ಅದೇ ಲೇಖಕನ ಅಥವಾ ಇತರ ಲೇಖಕರ ಅಥವಾ ಅದೇ ವಿಷಯದ ಇಲ್ಲವೇ ಇತರ ವಿಷಯಗಳ ಗ್ರಂಥಗಳು ಯಾವುವು ಇವೆ ಎಂಬುದು ತಿಳಿಯುತ್ತದೆ. ಹೀಗೆ ಕಟ್ಟಿನಲ್ಲಿ ಇರುವ ಗ್ರಂಥಗಳ ವಿವರ ಕೊಟ್ಟಾಗ ಅದರಲ್ಲಿ ಏಕೈಕಪ್ರತಿ, ಸಮಗ್ರಪ್ರತಿ, ಪ್ರಾಚೀನ

ಪ್ರತಿಗಳು ಸಿಗುವ ಸಂಭವವಿರುತ್ತದೆ. ಇದಕ್ಕಿಂತ ಮಿಗಿಲಾಗಿ ಕಟ್ಟಿನಲ್ಲಿರುವ ಇತರ ಗ್ರಂಥಗಳು ಯಾವುವು ಎಂದು ತಿಳಿಯದಿದ್ದಲ್ಲಿ ಮತ್ತೆಲ್ಲೂ ಇಲ್ಲದ ಹೊಸ ಗ್ರಂಥವೊಂದು ಇದ್ದಲ್ಲಿ ಅದು ತಿಳಿಯದೆ ಹೋಗುತ್ತದೆ.

ಉದಾ: ಸಂಪುಟ ೯ ಸಂಖ್ಯೆ ೩೩೮ರಲ್ಲಿ ವಿಶೇಷ ವಿಭಾಗದಲ್ಲಿ "ಇದೇ ಪುಸ್ತಕದಲ್ಲಿ ಜೈನಕ್ರಿಯಾಸಾರ ಶತತ್ರಯ ಹಾಡುಗಳು ಮೊದಲಾಗಿ ಇತರ ೧೩ ಕೃತಿಗಳಿವೆ' ಎಂದಿದ್ದಾರೆ. ಇಲ್ಲಿ ಉಳಿದ ೧೧ ಕೃತಿಗಳು ಯಾವುವು ಎಂದು ತಿಳಿಯುವುದಿಲ್ಲ. ಎಂದರೆ ೧೧ ಕೃತಿಗಳ ಸೂಚಿ ಮಾಡುವುದು ಬಿಟ್ಟುಹೋಗಿದೆ ಎಂದರ್ಥ. ಸಂಗ್ರಾಹಕರು ಕೃತಿಗಳನ್ನು ಎಣಿಸಿದ್ದಾರೆ. ಓದಿ ವಿವರ ಸಂಗ್ರಹಿಸಿಲ್ಲ. ಆದರೂ ೧೧ ಪ್ರತಿ ಇದೆ" ಎಂದು ಹೇಳಿದ್ದಾರೆ.

೧೫. ವಿವರ ಬರೆದವರ ಆಧ್ಯಕ್ಷರ: ಐದನೇ ಸಂಪುಟದಿಂದ ಒಂಬತ್ತನೇ ಸಂಪುಟದವರೆಗೆ ಪಟ್ಟಿಕೆಗಳ ರಚನಾ ವಿಭಾಗದಲ್ಲಿ ಹಿಂದಿನ ನಾಲ್ಕು ಸಂಪುಟಗಳ ಕ್ರಮವನ್ನೇ ಅನುಸರಿಸಿದ್ದು ಜತೆಗೆ ಹಸ್ತಪ್ರತಿಗಳ ವಿವರಣೆಯನ್ನು ಬರೆದವರ ಹೆಸರಿನ ಆದ್ಯಕ್ಷರಗಳನ್ನು ಆಯಾ ನಮೂದಿನ ಕೆಳಗೆ ಕೊಡಲಾಗಿದೆ. ಆದರೆ ಹಿಂದಿನ ನಾಲ್ಕು ಸಂಪುಟಗಳಲ್ಲಿ ಈ ವಿವರಣೆ ಬರೆದವರ ವಿವರಗಳಿಲ್ಲ. ಬಹುಶಃ ಸಂಪಾದಕರೊಬ್ಬರೇ ಕಾರ್ಯನಿರ್ವಹಿಸಿರಬೇಕು. ಇಲ್ಲವೇ ಸಹಾಯಕರ ಹೆಸರನ್ನು ಬಿಟ್ಟಿರಬೇಕು. ೫ನೇ ಸಂಪುಟದಿಂದ ಪಟ್ಟಿಕೆಗಳನ್ನು ಸಿದ್ಧಪಡಿಸಿದ ಸಹಾಯಕರ ಹೆಸರುಗಳನ್ನೂ, ಹೆಸರುಗಳ ಸಂಕ್ಷಿಪ್ತ ರೂಪವನ್ನು ಹೀಗೆ ಕೊಟ್ಟಿದೆ.

ಎನ್‌ಬಿಎ – ಎನ್. ಬಸವರಾರಾಧ್ಯ

ಬಿಎಸ್‌ಎಸ್–ಬಿ.ಎಸ್.ಸಣ್ಣಯ್ಯ

ಎಸ್‌ಬಿ–ಎಸ್.ಬಸಪ್ಪ

ಎಸ್‌ಎನ್‌ಕೆ–ಎಸ್.ಎನ್.ಕೃಷ್ಣಜೋಯಿಸ್

ಎಂಎನ್‌ಎಲ್–ಎಂ.ಎನ್.ಲೀಲಾವತಿ

ಶ್ರೀನಂತ–ನಂ. ತಪಸ್ವೀಕುಮಾರ್

ಎಂಸಿಸಿ–ಎಂ.ಸಿ.ಪದ್ಮನಾಭ ಶರ್ಮ

ಕೆಆರ್‌ಎಸ್–ಕೆ.ಆರ್.ಶೇಷಗಿರಿ

ಜಿಜಿಎಂ–ಜಿ.ಜಿ.ಮಂಜುನಾಥನ್

ಹಕರಾ–ಹ.ಕ.ರಾಜೇಗೌಡ

ವೈಸಿಬಿ–ವೈ.ಸಿ.ಭಾನುಮತಿ

ಎಂಪಿಎಂ–ಎಂ.ಪಿ.ಮಂಜಪ್ಪಶೆಟ್ಟಿ

೧೬. **ಅಕಾರಾದಿ ಪಟ್ಟಿ:** ಮೊದಲು ಪ್ರಕಟವಾಗಿರುವ ನಾಲ್ಕು ಸಂಪುಟಗಳ ಮತ್ತು ಅನಂತರ ಪ್ರಕಟವಾದ ಐದು ಸಂಪುಟಗಳ ಕೃತಿಗಳ ಮತ್ತು ಕರ್ತೃಗಳ 'ಅ'ಕಾರಾದಿ ಪಟ್ಟಿಯನ್ನು

ಒಂಬತ್ತನೇ ಸಂಪುಟದ ಕೊನೆಯಲ್ಲಿ ಕೊಡಲಾಗಿದೆ. ಕೃತಿಗಳ ಅಕಾರಾದಿ ಪಟ್ಟಿಕೆಯಲ್ಲಿ ಒಂದೇ ಕೃತಿಗೆ ಬೇರೆಬೇರೆ ಹೆಸರುಗಳಿದ್ದರೆ ಬೇರೆಬೇರೆ ಕೃತಿಗಳೆಂಬಂತೆ ದಾಖಲಾಗಿವೆ.

ಉದಾಹರಣೆಗೆ: "ಅಭಿನವ ನಿಘಂಟು' ಮತ್ತು 'ಮಂಗರಾಜ' ನಿಘಂಟು ಬೇರೆಬೇರೆ ಉಲ್ಲೇಖಗಳಾಗಿ ದಾಖಲಾಗಿವೆ. ಆದರೂ ಎರಡೂ ಬೇರೆಬೇರೆ ನಿಘಂಟುಗಳಾಗಿರದೆ ಒಂದೇ ನಿಘಂಟಾಗಿದೆ. ಆದಕಾರಣ ಅಭಿನವ ನಿಘಂಟು ಎಂದು ಕೊಟ್ಟು, ಅದರ ಪಕ್ಕದಲ್ಲೇ ದುಂಡು ಅಥವಾ ಚೌಕ ಕಂಸದಲ್ಲಿ 'ಮಂಗರಾಜ' ನಿಘಂಟು ಎಂದು ಕೊಟ್ಟಿದ್ದರೆ ಗೊಂದಲವಾಗುವುದು ತಪ್ಪುತ್ತಿತ್ತು"

ಸಮೀಕ್ಷೆ

ಮೈಸೂರು ವಿಶ್ವವಿದ್ಯಾನಿಲಯದ ಒಂಬತ್ತು ಸಂಪುಟಗಳನ್ನು, ಸಮಗ್ರವಾಗಿ ಸಮೀಕ್ಷಿಸಿ ಪರಿಶೀಲಿಸಿದಾಗ ಕೆಲವು ಅಂಶಗಳು ಗಮನಕ್ಕೆ ಬರುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಈ ಹಸ್ತಪ್ರತಿ ಸೂಚಿಗಳ ವಿವರಗಳಲ್ಲಿ ಅಲ್ಲಲ್ಲಿ ವಿರೋಧಾಭಾಸಗಳು ಕಂಡುಬರುತ್ತವೆ. ಈ ಹಸ್ತ ಪ್ರತಿಸೂಚಿಯಲ್ಲಿರುವ ಗ್ರಂಥಗಳ ವಿವರಗಳನ್ನು ಹಲವಾರು ಮಂದಿ ಸಂಗ್ರಹಿಸಿದ್ದಾರೆ. ಇವುಗಳೆಲ್ಲವನ್ನೂ ಸಂಯೋಜಕ ಸಂಪಾದಕರು ಪರಿಶೀಲಿಸಿ ವ್ಯತ್ಯಾಸ–ಕೊರತೆಗಳನ್ನು ತುಂಬಿ ಏಕರೂಪತೆಯನ್ನು ನೀಡಬೇಕಿತ್ತು ಈ ಸೂಚಿಗಳಲ್ಲಿ ಪ್ರತಿಯೊಂದು ಕೃತಿ ಅಥವಾ ಹಸ್ತಪ್ರತಿ ದೊರೆತ ಸ್ಥಳ ಉಲ್ಲೇಖಗೊಂಡಿದ್ದರೆ ಸಂಶೋಧನಕಾರರಿಗೆ ಕೆಲವು ವಿಚಾರಗಳಲ್ಲಿ ಉಪಯುಕ್ತ ಮಾಹಿತಿ ದೊರಕುತ್ತಿತ್ತು.

ಕೃತಿಗಳ ಮತ್ತು ಕೃತಿಕಾರರ 'ಅ'ಕಾರಾದಿ ಪಟ್ಟಿಯನ್ನು ಕೊಡುವಾಗ ಆಯಾ ಸಂಪುಟಗಳಲ್ಲಿರುವ ಗ್ರಂಥಗಳ ಮತ್ತು ಕರ್ತೃಗಳ 'ಅ' ಕಾರಾದಿ ಪಟ್ಟಿಯನ್ನು ಆಯಾ ಸಂಪುಟದ ಆದಿಯಲ್ಲೇ ಕೊಡುವ ಅಗತ್ಯವಿತ್ತು. ಹೀಗೆ 'ಅ' ಕಾರಾದಿ ಪಟ್ಟಿಯನ್ನು ಕೊಡುವುದರಿಂದ ಆಯಾ ವಿವರಗಳನ್ನು ಸುಲಭವಾಗಿ ತಿಳಿಯಲು ಸಾಧ್ಯವಾಗುತ್ತಿತ್ತು. ಒಂದೇ ಕೃತಿಯ ಹಲವಾರು ಪ್ರತಿಗಳ ವಿವರ ನೀಡುವಾಗ ಏಕರೂಪತೆ ಇಲ್ಲದಿರುವುದನ್ನು ಕಾಣಬಹುದು. ಉದಾಹರಣೆಗೆ "ಅನುಭವಾಮೃತದ ಹಲವು ಪ್ರತಿಗಳಲ್ಲಿ 'ವಿಷಯ'ವನ್ನು ಗುರುತಿಸುವಾಗ 'ವೇದಾಂತ ತತ್ವ 'ವೇದಾಂತ', ಅಧ್ಯಾತ್ಮಬೋಧೆ ಎಂದೆಲ್ಲ ಗುರುತಿಸಿದೆ'.[೧೪] ಇಲ್ಲಿ ಕೃತಿಯು ಯಾವ ವಿಷಯವನ್ನು ಕುರಿತದ್ದು ಎಂಬುದನ್ನು ಸ್ಪಷ್ಟವಾಗಿ ಸೂಚಿಸಿಲ್ಲವಾದ್ದರಿಂದ ಇಲ್ಲಿನ ವಿಷಯದಲ್ಲಿ ಏಕರೂಪತೆಯಿಲ್ಲ. ಅನುಬಂಧದಲ್ಲಿ ಸಂಸ್ಕೃತ ಮತ್ತು ಇತರ ಭಾಷೆಗಳ ಪ್ರತಿಗಳ ಪಟ್ಟಿಯಲ್ಲಿ 'ಅ' ಕಾರಾದಿ ಗ್ರಂಥಗಳ ಹೆಸರಿದೆ. ಆದರೆ ಕರ್ತೃಗಳ 'ಅ' ಕಾರಾದಿ ಪಟ್ಟಿಯನ್ನು ಕೊಟ್ಟಿಲ್ಲ ಸಂಪುಟ,

ಪುಟಗಳ ಸಂಖ್ಯೆಯನ್ನೂ ಸೂಚಿಸಿಲ್ಲ. ಆದರೆ ಕನ್ನಡ ಕರ್ತೃ-ಕೃತಿಗಳ ಪಟ್ಟಿಯಲ್ಲಿ ಈ ವಿವರಗಳಿವೆ.

ಅಕಾರಾದಿ ಪಟ್ಟಿಯಲ್ಲಿ ಸಂಪುಟಗಳಲ್ಲಿರುವ ಎಲ್ಲ ಹಸ್ತಪ್ರತಿಗಳನ್ನು ಪಟ್ಟಿ ಮಾಡಿಲ್ಲ. ಇದರಿಂದ ಒಂದು ಕೃತಿಯ ಪ್ರತಿಗಳು ಎಷ್ಟಿವೆ ಎಂದು ತಿಳಿಯುವುದಿಲ್ಲ. ಉದಾಹರಣೆಗೆ ಹಾಡುಗಳು ಕೃತಿ ಬಗ್ಗೆ ೯-೨೯೪-೩೦೫ ಎಂದು ೯ನೇ ಸಂಪುಟ ಪುಟ ೨೯೪ರಿಂದ ೩೦೫ರವರೆಗೆ ಎಂದು ತಿಳಿಸದೆ ಹೀಗೆ ಸಾರಾಸಗಟಾಗಿ ಹೇಳಿರುವುದರಿಂದ ೫೫ ಹಾಡುಗಳ ಕೃತಿ ಬಗ್ಗೆ ಸೂಚಿಯೇ ಇಲ್ಲವೆಂದರೆ ತಪ್ಪಾಗದು.

೫೩ ಕೃತಿಗಳು ಒಬ್ಬ ಲೇಖಕನ/ಸಂಗ್ರಹಕನ/ಕವಿಯ ಕೃತಿಗಳಲ್ಲಿ ಕರಸ್ಥಳದ ನಾಗಲಿಂಗ (ಕೃತಿ ಸಂಖ್ಯೆ ೨೯೯) ತಿರುಮಲಾಚಾರ್ಯ (೩.೦೯) ಇತ್ಯದಿ ಕವಿಗಳ ಕೃತಿಗಳಿವೆ. ಇವರ ಹೆಸರುಗಳು ಕೃತಿಕಾರರ ಪಟ್ಟಿಯಲ್ಲೂ ಬಿಟ್ಟುಹೋಗಿವೆ.

ಹಾಗೆಯೇ ಶ್ರೀವೈಷ್ಣವರ ಹಾಡುಗಳು, ಜೈನರ ಹಾಡುಗಳು ವೀರಶೈವರ ಹಾಡುಗಳು ಇವೆ. ಈ ಪ್ರತಿಗಳ ವಿವರ ಸಂಗ್ರಹಿಸಿದವರು ಬೇರೆಬೇರೆಯವರು. ಅಂತೆಯೇ ಸಮಗ್ರ ಅಸಮಗ್ರ ಎಂಬ ಉಲ್ಲೇಖ ಕೃತಿಗಳಲ್ಲಿ ಎಲ್ಲ ಕಡೆ ಇಲ್ಲ.

ಅಕಾರಾದಿ ಬಗ್ಗೆ

ಹಾಡುಗಳು ಎಂಬ ಒಂದೇ ಶೀರ್ಷಿಕೆ ಇರುವಾಗ ಜೈನ ಹಾಡುಗಳನ್ನು ಹಾಡುಗಳು (ಜೈನ) ಎಂದು ನಮೂದಿಸಿದಂತೆ ಇತರ ಹಾಡುಗಳ ಕೃತಿಯ ಬಗ್ಗೆ (ವೀರಶೈವ) (ವೈಷ್ಣವ) ಎಂದು ನಮೂದಿಸಿಲ್ಲ. ಹೀಗೆ ಹತ್ತಾರು ಸಂಗತಿಗಳು ಹಾಡುಗಳು ಎಂಬ ಶೀರ್ಷಿಕೆಯ ೫೫ ಹಸ್ತಪ್ರತಿಗಳಲ್ಲಿರುವಾಗ ಅವುಗಳನ್ನು ಅಕಾರಾದಿಯಲ್ಲಿ ಪ್ರತ್ಯೇಕವಾಗಿ ನಮೂದಿಸದೆ ಇರುವುದರಿಂದ ಅಕಾರಾದಿಯಾದಿ ಅಸಮಪರ್ಕಯಾದಿ ಎಂದು ಹೇಳಬೇಕಾಗಿದೆ.

ಸೂಚಿಯಲ್ಲಿ ಕೆಲವೆಡೆಗಳಲ್ಲಿ ಮಾತ್ರ ಕಟ್ಟಿನಲ್ಲಿರುವ ಇತರ ಗ್ರಂಥಗಳನ್ನು ಪೂರ್ಣವಾಗಿ ಹೇಳಲಾಗಿದೆ. ಉದಾಹರಣೆ ಸಂಪುಟ ೯ ಸಂಖ್ಯೆ ೨೨೪ ನೋಡಿ.

ಸಂಪುಟ ೯ ಪುಟ ೨೫೦ರಲ್ಲಿ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಚತುರ್ಥ ಸಂಪುಟ ೫೧೩ ಕ್ರಮಾಂಕ ೭೦೭೩ ನೋಡಿ ಎಂದಿದ್ದಾರೆ. ಏಕೆ ಇದನ್ನು ಹೇಳಿದ್ದಾರೆ ಎಂಬುದನ್ನು ತಿಳಿಸಿಲ್ಲ. ಏಕಂದರೆ ಎರಡಕ್ಕೂ ವಿವರಗಳ ಶೀರ್ಷಿಕೆಗಳಲ್ಲಿ ವ್ಯತ್ಯಾಸವಿಲ್ಲ. ಆದರೆ ಸಂಪುಟ ೯ ಕ್ರಮಾಂಕ ೭೯ರಲ್ಲಿ ಇದೇ ರೀತಿಯಾಗಿ ಸಂಪುಟ ೪ ಕ್ರಮಾಂಕ ೧೮೮೧-೧೮೮೪ ನೋಡಿ ಎಂದು ತಿಳಿಸುವಾಗ ಇದೆ ಕವಿಯ ಇತರ ವಚನಗಳಿವೆ. ಅದಕ್ಕಾಗಿ ನೋಡಿ ಎಂಬ ಸೂಚನೆಯಿದೆ.

ಅಡಿ ಟಿಪ್ಪಣಿಗಳು

೧. ಹಾ.ವೈ.ಸಿ.ಭಾನುಮತಿ–ಗ್ರಂಥಸಂಪಾದನಾ ವಿನಿಕ್ಷೆ ಪುಟ–೦೧

೨. ನಾ.ಗೀತಾಚಾರ್ಯ– ಹಸ್ತಪ್ರತಿ ಪ್ರತಿ ವ್ಯಾಸಂಗ – ಹಂಪಿ ಕನ್ನಡ ವಿವಿಯ ಪ್ರಸಾರಾಂಗ ಪು೧–೬೩

೩. ಎಂ.ಎ. ಕಲ್ಬುರ್ಗಿ –ಕನ್ನಡ ಹಸ್ತಪ್ರತಿ ಶಾಸ್ತ್ರ ಪುಟ– ೮೦

೪ ನಾ.ಗೀತಾಚಾರ್ಯ ಹಸ್ತಪ್ರತಿ ವ್ಯಾಸಂಗ – ಪು–೬೩

೫. ಎಂ.ಎಂ.ಕಲ್ಬುರ್ಗಿ, ಕನ್ನಡ ಹಸ್ತಪ್ರತಿಶಾಸ್ತ್ರ – ಪುಟ : ೮೧

೬. ನಾ. ಗೀತಾಚಾರ್ಯ ಹಸ್ತಪ್ರತಿ ವ್ಯಾಸಂಗ ನಿ. ಪುಟ.೬೬

೭. ನೋಡಿ: ಡಿ.ಎಲ್.ನರಸಿಂಹಾಚಾರ್ –ಆದಿದೇವ:'ಪೀಠಿಕೆಗಳು–ಲೇಖನಗಳು'

೮. ನೋಡಿ: ಕರ್ಣಾಟಕ ಸಂಪುಟ–೨ ವೀರಭದ್ರರಾಜ

೯. ಕಾರ್ತಿಕ ಅವರ ಸಂಶೋಧನ ಟಿಪ್ಪಣಿಗಳು: ಪುಟ–೩೮ (ಅಪ್ರಕಟಿತ)–

೧೦. ನೋಡಿ: ಕೆ.ಆರ್.ಶೇಷಗಿರಿ (ಸಂಪಾದಕರು)–ಲಕ್ಷ್ಮಕವಿಯ ರುಕ್ಮಾಂಗದ ಚರಿತೆ

೧೧. ನೋಡಿ : ಕರ್ನಾಟಕ ಕವಿಚರಿತೆ –ಮೈ.ವಿ.ವಿ.

೧೨. ಸಂ: ಜಿ.ಜಿ.ಮಂಜುನಾಥನ್–ಜನವಶ್ಯ–ಮೈಸೂರು ವಿಶ್ವವಿದ್ಯಾಲಯ

೧೩. ನೋಡಿ: ಕರ್ನಾಟಕ ಕವಿಚರಿತೆ ಸಂಪುಟ–ಮೂರು ಮತ್ತು ಮದ್ದಣ ಪ್ರಶಸ್ತಿ.

೧೪. ನೋಡಿ. ಮೈ.ವಿ.ವಿ.ಹ.ಪ್ರಸೂ ಸಂಪುಟ ೧; ಪುಟ ೬೧ರಿಂದ ೬೩ ಮತ್ತು ಸಂಪುಟ ಪುಟ ೪೯ ರಿಂದ ೫೮

ಅಧ್ಯಾಯ – ೫

ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳು ಮತ್ತು ಇತರ ಸಂಸ್ಥೆಗಳ ಹಸ್ತಪ್ರತಿ ಸೂಚಿಗಳು ಒಂದು ತೌಲನಿಕ ನೋಟ

ತೌಲನಿಕವಾಗಿ ಇತರ ಸಂಸ್ಥೆಗಳ ಹಸ್ತಪ್ರತಿ ಸೂಚಿಗಳಿಗೆ ಹೋಲಿಸಿದಾಗ ಗಮನಾರ್ಹವಾದ ಕೆಲವು ಅಂಶಗಳನ್ನು ಗುರುತಿಸಬಹುದಾಗಿದೆ. ಇಲ್ಲಿ ಮಾದರಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ, ಬೆಂಗಳೂರು ವಿಶ್ವವಿದ್ಯಾನಿಲಯ ಹಸ್ತಪ್ರತಿ ಸೂಚಿ, ಕರ್ನಾಟಕ ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿ, ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಸೂಚಿ, ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ ಸೂಚಿಗಳನ್ನು ತೌಲನಿಕವಾಗಿ ಗಮನಿಸಿದಾಗ ಈ ಅಂಶಗಳು ಕಂಡುಬರುತ್ತವೆ.

ಪ್ರತಿಸೂಚಿಗಳಲ್ಲೂ ಅನುಕ್ರಮಣಿಕೆ ಇರುವುದನ್ನು ಕಾಣಬಹುದು. ಈ ಅನುಕ್ರಮಣಿಕೆಯಲ್ಲಿ ಆಯಾ ಸಂಪುಟದಲ್ಲಿನ ವಿವರಗಳನ್ನು ನೀಡಿರುವ ಹಸ್ತಪ್ರತಿಗಳ ಹೆಸರುಗಳ ಪಟ್ಟಿಯನ್ನು ಮತ್ತು ಕೃತಿಕಾರರ ಹೆಸರುಗಳ ಪಟ್ಟಿಯನ್ನು 'ಅ' ಕಾರಾದಿಯಾಗಿ ನೀಡಲಾಗಿದೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ 'ಕೃತಿ ಸೂಚಿ' ಮತ್ತು 'ಕವಿಸೂಚಿ' ಶೀರ್ಷಿಕೆಯಲ್ಲಿ ಸಂಪುಟದ ಅಂತ್ಯದಲ್ಲಿ ಕನ್ನಡ ಮತ್ತು ಆಂಗ್ಲಭಾಷೆ ಎರಡರಲ್ಲೂ ಕೊಟ್ಟಿದೆ. ಕೆಆರ್‌ಐನ ಸೂಚಿಯಲ್ಲಿ ಹಸ್ತಪ್ರತಿಗಳ ಹೆಸರುಗಳ ಪಟ್ಟಿಯನ್ನು ಮತ್ತು ಗ್ರಂಥಕರ್ತರ ಪಟ್ಟಿಯನ್ನು ಅಕಾರಾದಿಯಾಗಿ ಸೂಚಿ ಸಂಪುಟದ ಪ್ರಾರಂಭದಲ್ಲಿ ನೀಡಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಯ ಕೊನೆಯಲ್ಲಿ ಅನುಬಂಧಗಳನ್ನು ರಚಿಸಿ ಅದರಲ್ಲಿ 'ಕವಿ ಸೂಚಿ' 'ಹಸ್ತಪ್ರತಿ ಲಿಪಿಕಾರರ ಸೂಚಿ' 'ಲಿಪಿಕಾರರ ಸ್ಥಳನಾಮ' ಸೂಚಿಗಳನ್ನು ಅಕಾರಾದಿಯಾಗಿ ನೀಡಿರುವುದಲ್ಲದೆ ಹಸ್ತಪ್ರತಿ ದಾನಿಗಳ ಸೂಚಿಯನ್ನು ನೀಡಲಾಗಿದೆ. ಆದರೆ ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿ ಸಂಪುಟ ಒಂಬತ್ತರ ಅಂತ್ಯದಲ್ಲಿ 'ಸಂಸ್ಕೃತ ಪ್ರಾಕೃತ ತೆಲುಗು, ತಮಿಳು, ಮರಾಠಿ, ತಿಗಳಾರಿ, ಇಂಗ್ಲೀಷ್ ಗ್ರಂಥಗಳನ್ನು ಅಕಾರಾದಿಯಲ್ಲಿ ಪಟ್ಟಿಮಾಡಿಕೊಟ್ಟು ನಂತರ ಕನ್ನಡ ಹಸ್ತಪ್ರತಿಗಳ ಮತ್ತು ಕರ್ತೃಕಾರರ ಅಕಾರಾದಿ ಪಟ್ಟಿಕೆಯನ್ನು ನೀಡಲಾಗಿದೆ. ಇವುಗಳ ಹಿನ್ನೆಲೆಯಲ್ಲಿ ೧. ಸಂಪುಟದ ಕೊನೆಯಲ್ಲಿ ಗ್ರಂಥದ ವಿವರಗಳೊಡನೆ ಕೊನೆಯಾಗುವ ಸಂಪುಟಗಳು ಮತ್ತು ೨. ಅನುಬಂಧಗಳೊಡನೆ ಮುಕ್ತಾಯವಾಗುವ ಸಂಪುಟಗಳು ಎಂದು ಎರಡು ಬಗೆಯಾಗಿ ಇರುವುದನ್ನು ಕಾಣಬಹುದು. ಉಪಯುಕ್ತತೆಯ ದೃಷ್ಟಿಯಿಂದ ಪರಿಶೀಲಿಸಿದಾಗ ಪರಿಶೀಲಕರಿಗೆ ಸೂಚಿಗಳ ಒಳಗೆ ಏನೇನಿದೆ ಎಂಬುದು ಮೊದಲೇ ತಿಳಿಯುವ ದೃಷ್ಟಿಯಿಂದ ಕವಿಸೂಚಿ, ಕೃತಿಸೂಚಿ ಇತ್ಯಾದಿಗಳನ್ನು ಸಂಪುಟದ ಮೊದಲಿಗೇ ಕೊಡುವುದು ಹೆಚ್ಚು ಸೂಕ್ತವೆನಿಸುತ್ತದೆ.

ವಿವಿಧ ಸಂಸ್ಥೆಗಳ ಸೂಚಿ ಶಿಲ್ಪಗಳ ಮಾದರಿಗಳು

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳ ಸಂಪಾದಕರು ಪ್ರಸ್ತಾವನೆಯಲ್ಲಿ ಸೂಚೀಶಿಲ್ಪವನ್ನು ಕುರಿತು ಹೀಗೆ ಹೇಳಿದ್ದಾರೆ. "ಆಧುನಿಕ ಹಸ್ತಪ್ರತಿ ಭಂಡಾರಗಳು ಸೂಚಿ ರಚನೆಯನ್ನು ಒಂದು ಶಿಸ್ತನ್ನಾಗಿ ರೂಪಿಸಿವೆ. ಆದರೆ ಈ ಸೂಚಿ ತಯಾರಿಕೆಯಲ್ಲಿ ಒಂದೊಂದು ಸಂಸ್ಥೆ ಒಂದೊಂದು ರೀತಿಯ ಕ್ರಮವನ್ನು ಅನುಸರಿಸಿವೆ. ಆದರೆ ಈವರೆಗೆ ಪ್ರಕಟವಾದ ಹಸ್ತಪ್ರತಿಸೂಚಿಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ದೋಷಗಳನ್ನು ಸರಿಪಡಿಸಿಕೊಂಡು ಎಂ.ಎಂ.ಕಲ್ಬುರ್ಗಿ ಅವರು ಸಿದ್ಧಪಡಿಸಿದ ಸೂಚಿಯನ್ನು ಮಾದರಿಯನ್ನಾಗಿಟ್ಟುಕೊಂಡು ನಾವು ಈ ಸೂಚಿ ಸಂಪುಟಗಳನ್ನು ರಚಿಸಿದ್ದೇವೆ" ಎಂದಿದ್ದಾರೆ. ಕೆಲವು ಸಂಸ್ಥೆಗಳು ಕಲ್ಬುರ್ಗಿಯವರ ಕೃತಿ ಪರಿಚಯ, ಪ್ರತಿಪರಿಚಯ ವಿನ್ಯಾಸವನ್ನು ಅನುಸರಿಸಿ ಸೂಚಿಗಳನ್ನು ಸಿದ್ಧಪಡಿಸಿವೆ. ಇನ್ನು ಕೆಲವು ಸಂಸ್ಥೆಗಳು ತಮ್ಮದೇ ಆದ ರೀತಿಯ ಸೂಚೀಶಿಲ್ಪಗಳ ವಿನ್ಯಾಸವನ್ನು ಬಳಸಿದ್ದಾರೆ.

ಮಾದರಿಗಾಗಿ ಕೆಲವು ಸೂಚಿಶಿಲ್ಪಗಳ ವಿನ್ಯಾಸಗಳನ್ನು ಈ ಮುಂದಿನಂತೆ ಗಮನಿಸಬಹುದು.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ-ಬೆಂಗಳೂರು

ಸಂ : ಕೆಳದಿ ಗುಂಡಾ ಜೋಯಿಸ್ ಮತ್ತು ನಾ.ಗೀತಾಚಾರ್ಯರವರು. ಒಟ್ಟು ೧೫ ಅಂಶಗಳನ್ನು ಈ ಸೂಚಿ ಸಂಪುಟಗಳು ಒಳಗೊಂಡಿದೆ.

	೧.ಹಸ್ತಪ್ರತಿಯ ಕ್ರಮಾಂಕ	
	೨. ಕೃತಿಯ ಹೆಸರು	
೩. ಹಸ್ತಪ್ರತಿ ಸಂಖ್ಯೆ	೪. ಕವಿಯ ಹೆಸರು	೫. ಅಕ್ಷರ ಸಂಖ್ಯೆ
೬. ಹಸ್ತಪ್ರತಿಯ ಅಳತೆ	೭. ಕವಿಯ ಕಾಲ	೮. ಸಾಲುಗಳ ಸಂಖ್ಯೆ
೯. ಪತ್ರ/ಗರಿಗಳ ಸಂಖ್ಯೆ	೧೦. ಕೃತಿಯ ರೂಪಾಂಶ	೧೧. ಗ್ರಂಥದ ಭಾಷೆ
೧೨. ಕೃತಿಯ ವಿಷಯ		
೧೩. ಆದಿ		
೧೪. ಅಂತ್ಯ		
೧೫.ವಿಶೇಷವಿವರ		

ಹಂಪಿ ಕನ್ನಡ ವಿಶ್ವವಿದ್ಯಾನಿಲಯ – ಹಂಪಿ

ಸಂ: ಡಾ.ಎಫ್.ಟಿ.ಹಳ್ಳೀಕೇರಿ ಮತ್ತು ಡಾ.ಕೆ.ರವೀಂದ್ರನಾಥ. ಒಟ್ಟು ೧೫ ಅಂಶಗಳನ್ನು ಒಳಗೊಂಡಿದೆ.

ಅ ಕೃತಿ ಪರಿಚಯ

೧. ಕೃತಿಯ ಕ್ರಮಾಂಕ

೨. ಕೃತಿಯ ಹೆಸರು

೩. ಕವಿಯಹೆಸರು ಮತ್ತು ಕಾಲ ೪. ಕೃತಿಯ ಪ್ರಕಾರ

೫. ಕೃತಿಯ ವಸ್ತು

ಆ ಪ್ರತಿ ಪರಿಚಯ

೬. ಬಳಸಿದವಸ್ತು/ಕಟ್ಟಿನ ಕ್ರಮಾಂಕ ೭. ಹಸ್ತಪ್ರತಿಯ ಅಳತೆ ೮. ಪುಟಸಂಖ್ಯೆ

೯. ಹಸ್ತಪ್ರತಿಯ ಸ್ವರೂಪ ೧೦. ಲಿಪಿಯ ಸ್ವರೂಪ ೧೧. ಭಾಷಾಸ್ವರೂಪ

೧೨. ಆದಿ

೧೩. ಅಂತ್ಯ

೧೪. ವಿಶೇಷ

೧೫. ಈ ಕಟ್ಟಿನಲ್ಲಿರುವ ಕೃತಿಗಳು

ಬೆಂಗಳೂರ ವಿಶ್ವವಿದ್ಯಾನಿಲಯ - ಬೆಂಗಳೂರು

ಸಂ: ಎಸ್.ಶಿವಣ್ಣ. ಒಟ್ಟು ಹದಿನಾಲ್ಕು ಅಂಶಗಳನ್ನು ಒಳಗೊಂಡಿದೆ.

೧. ಕ್ರಮಸಂಖ್ಯೆ		
೨. ಹಸ್ತ ಪ್ರತಿ ಸಂಖ್ಯೆ	೩. ಕೃತಿಯ ಹೆಸರು	೪. ಕೃತಿಯ ಪ್ರಕಾರ
೫. ಹಸ್ತಪ್ರತಿ ಅಳತೆ	೬. ಕರ್ತೃವಿನ ಹೆಸರು	೭. ಕಾಲ
೮. ಪ್ರತಿ/ಗರಿ ಸಂಖ್ಯೆ	೯. ಪಂಕ್ತಿ/ಸಾಲು	೧೦.ಅಕ್ಷರ ಸಂಖ್ಯೆ
೧೧. ಆದಿ		
೧೨. ಅಂತ್ಯ		
೧೩. ವಿಷಯ		
೧೪. ವಿಶೇಷ		

ಕರ್ನಾಟಕ ವಿಶ್ವವಿದ್ಯಾಲಯ-ಧಾರವಾಡ

ಸಂ: ವೀರಣ್ಣ ರಾಜೂರ. ಒಟ್ಟು ಹದಿನಾರು ಅಂಶಗಳನ್ನು ಒಳಗೊಂಡಿದೆ.

	೧. ಕೃತಿಯ ಅನುಕ್ರಮಸಂಖ್ಯೆ	
	೨. ಕೃತಿಯ ಹೆಸರು	
೩. ಲಿಖಿತವಸ್ತು/ಭಂಡಾರದ ಕ್ರಮಸಂಖ್ಯೆ	೪. ಕರ್ತೃವಿನ ಹೆಸರು	೫. ಸಾಹಿತ್ಯ ಪ್ರಕಾರ
೬. ಹಸ್ತಪ್ರತಿ ಅಳತೆ	೭. ಹಸ್ತಪ್ರತಿಯ ಒಡೆಯ	೮. ಕರ್ತೃವಿನ ಕಾಲ
೯. ಪುಟ ಸಂಖ್ಯೆ	೧೦. ಲಭಿಸಿದ ಸ್ಥಳ	೧೧.ಸಾಲುಗಳ ಸಂಖ್ಯೆ
೧೨. ಆದಿ		
೧೩. ಅಂತ್ಯ		
೧೪. ವಿಷಯ		
೧೫. ವಿಶೇಷ		
	೧೬.ಕಟ್ಟಿನಲ್ಲಿರುವ ಇತರ ಕೃತಿಗಳು	

ಕನ್ನಡ ಸಂಶೋಧನ ಸಂಸ್ಥೆ (ಕೆ.ಆರ್.ಐ)–ಧಾರವಾಡ

ಮುಖ್ಯಸಂಪಾದಕರು : ಪಿ.ಬಿ.ದೇಸಾಯಿ

ಸಂಪಾದಕರು : ಬಿ.ಎಸ್.ಕುಲಕರ್ಣಿ

ಎಸ್.ಬಿ.ಪುರೋಹಿತ್

ಒಟ್ಟು ಹದಿನಾರು ಅಂಶಗಳನ್ನು ಒಳಗೊಂಡಿದೆ

೧. ಕ್ರಮಸಂಖ್ಯೆ

೨. ಕೃತಿಯ ಹೆಸರು

೩. ವಸ್ತು

೪. ಅಂಕ

೫. ಆಕಾರ

೬. ವಿವರ

೭. ದೊರೆತ ಸ್ಥಳ

೮. ಗ್ರಂಥದ ಕಾಲ

೯. ಕರ್ತೃ

೧೦. ಪ್ರತಿಮಾಡಿದವರು

೧೧. ವಿಷಯ

೧೨. ಶೈಲಿ

೧೩. ಆರಂಭ

೧೪. ಮುಕ್ತಾಯ

೧೫. ಸಂದರ್ಭ

೧೬. **Remarks**

ವಿವಿಧ ಬಗೆಯ ಸೂಚಿಶಿಲ್ಪದ ಮಾದರಿಗಳನ್ನು ಗಮನಿಸಿದಾಗ ಎಲ್ಲಾ ಸೂಚಿಗಳಲ್ಲೂ ಸಾಮಾನ್ಯವಾಗಿರುವ ಅಂಶಗಳು ಹೀಗಿವೆ.

೧. ಕ್ರಮಾಂಕ,
೨. ಕೃತಿಯ ಹೆಸರು,
೩. ಕರ್ತೃವಿನ ಹೆಸರು
೪. ಹಸ್ತಪ್ರತಿ ಸ್ವರೂಪ,
೫. ಹಸ್ತಪ್ರತಿ ಅಳತೆ,
೬. ಆದಿ
೭. ಅಂತ್ಯ,
೮. ವಿಷಯ,
೯. ಗರಿಗಳ ಸಂಖ್ಯೆ
೧೦. ಸಾಲು/ಪಂಕ್ತಿಗಳ ಸಂಖ್ಯೆ
೧೧. ವಸ್ತು
೧೨ ಸಮಗ್ರವೇ ಅಸಮಗ್ರವೇ

ಮೊದಲಾದ ಅಂಶಗಳು ಸಾರ್ವತ್ರಿಕವಾಗಿವೆ.

ವಿವರಗಳಲ್ಲಿರುವ ವೈವಿಧ್ಯತೆಗಳು

ಇನ್ನು ವಿವಿಧ ಸೂಚಿಗಳಲ್ಲಿ ಒಂದೊಂದು ವಿಭಾಗದಲ್ಲೂ ನೀಡಿರುವ ವಿವರಗಳಲ್ಲಿ ಪರಸ್ಪರ ವ್ಯತ್ಯಾಸಗಳಿರುವುದು ಗಮನಾರ್ಹವಾಗಿದೆ. ಈ ವ್ಯತ್ಯಾಸಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳ ಹಿನ್ನೆಲೆಯಲ್ಲಿ ಗಮನಿಸಬಹುದು.

೧. **ಕ್ರಮಸಂಖ್ಯೆ** : ಆಯಾ ಸಂಸ್ಥೆಗಳು ತಮ್ಮತಮ್ಮ ಹಸ್ತಪ್ರತಿ ಭಂಡಾರಗಳಲ್ಲಿ ಓಲೆಕಟ್ಟುಗಳಿಗೆ ಕ್ರಮಾಂಕಗಳನ್ನು ಕೊಟ್ಟಿದ್ದಾರೆ. ಓಲೆಗಟ್ಟುಗಳನ್ನು ಕ್ರಮವಾಗಿ ಜೋಡಿಸಲು ಈ ಪರಿಪಾಠ ಬೆಳೆದುಬಂದಿದೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ಸಂಶೋಧನಾ ಸಂಸ್ಥೆ, ಮೈ.ವಿ.ವಿ.ಗಳ ಹಸ್ತಪ್ರತಿ ಸೂಚಿಗಳಲ್ಲಿ ಕ್ರಮಾಂಕಗಳನ್ನು ಕನ್ನಡದಲ್ಲಿ ಕೊಟ್ಟಿರುವುದು ವಿಶೇಷವಾಗಿದೆ.

೨. **ಕೃತಿಯ ಹೆಸರು** : ಪ್ರತಿಯೊಂದು ಹಸ್ತಪ್ರತಿ ಸೂಚಿಯಲ್ಲೂ ಗ್ರಂಥದ ಹೆಸರನ್ನು ತಲೆಬರಹ ರೂಪದಲ್ಲಿ ವಿವರಗಳ ಮೇಲ್ಭಾಗದ ಮಧ್ಯದಲ್ಲಿ ಕೊಡಲಾಗಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಸೂಚಿಗಳಲ್ಲೂ 'ಅ'ಕಾರಾದಿ ಕ್ರಮದಲ್ಲಿ ಸೂಚಿ ತಯಾರಿಸಿರುವುದರಿಂದ ಕನ್ನಡದಲ್ಲೇ ಗ್ರಂಥದ ಹೆಸರನ್ನು ಕೊಡಲಾಗಿದೆ. ಒಂದು ವೇಳೆ ಆ ಕೃತಿಗೆ ಇನ್ನೊಂದು ಹೆಸರಿದ್ದರೆ ಅದನ್ನು ಪಕ್ಕದ ಕಂಸದಲ್ಲಿ ಗುರುತಿಸಲಾಗಿರುತ್ತದೆ. ಕೃತಿಯ ಹೆಸರು ಸಾಮಾನ್ಯವಾಗಿ ದಪ್ಪಕ್ಷರಗಳಲ್ಲಿ ಉಲ್ಲೇಖಿಸಿರುವುದರಿಂದ ತಕ್ಷಣ ಕಣ್ಣಿಗೆ ಬೀಳುವಂತಿರುತ್ತವೆ. ಯಾವ ಸೂಚಿಯಲ್ಲೂ ಆ ಕೃತಿ ಯಾವ ಭಾಷೆಯದೆಂಬುದನ್ನು ಸೂಚಿಸಿಲ್ಲ. ಕೆಲವು ಸೂಚಿಗಳಲ್ಲಿ ಅನುಬಂಧರೂಪದಲ್ಲಿ ಇತರ ಭಾಷೆಗಳ ಕೃತಿಗಳ ಅಕಾರಾದಿ ಪಟ್ಟಿಯನ್ನು ಕೊಟ್ಟಿರುತ್ತಾರೆ. ಉದಾಹರಣೆಗೆ ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿ ಸಂಪುಟ ಒಂಬತ್ತರಲ್ಲಿ ಕೃತಿಗಳ ಅಕಾರಾದಿ ಪಟ್ಟಿಯನ್ನು ಕ್ರಮವಾಗಿ ಸಂಸ್ಕೃತ,

ಪ್ರಾಕೃತ, ತೆಲುಗು, ತಮಿಳು, ಮರಾಠಿ, ತಿಗಳಾರಿ, ಇಂಗ್ಲೀಷ್ ಗ್ರಂಥಗಳ ಪಟ್ಟಿಯನ್ನು ಕೊಟ್ಟು ಅನಂತರ ಕನ್ನಡ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

೩. **ವಸ್ತು** : ಇಲ್ಲಿ ಹಸ್ತಪ್ರತಿಗೆ ಬಳಸಲಾದ ವಸ್ತುವನ್ನು ಕುರಿತು ತಿಳಿಸಲಾಗಿರುತ್ತದೆ. ಶಾಸನ ಕಡತ, ತಾಮ್ರಪಟ ಮೊದಲಾದವುಗಳ ಮೇಲೆ ಬರೆದಿದ್ದರೂ ಅವು ಹಸ್ತಪ್ರತಿಗಳೆನಿಸಿಕೊಳ್ಳುವುದಿಲ್ಲ. ಕಾಗದ ಅಥವಾ ತಾಳೆಗರಿಗಳಲ್ಲಿ ಬರೆದಿದ್ದರೆ ಮಾತ್ರ ಅವು ಹಸ್ತಪ್ರತಿಗಳೆನಿಸಿಕೊಳ್ಳುತ್ತವೆ. ಹಾಗಾಗಿ ಓಲೆಗರಿಗಳನ್ನು ಮತ್ತು ಕಾಗದದ ಪ್ರತಿಗಳನ್ನು ಮಾತ್ರ ಹಸ್ತಪ್ರತಿಗಳೆಂದು ಕರೆಯುವುದು ರೂಢಿಯಲ್ಲಿದೆ. ಬೇರೆ ಬೇರೆ ಸೂಚಿಗಳಲ್ಲಿ ಬೇರೆ ಬೇರೆ ರೀತಿಯ ಸಂಕೇತಗಳನ್ನು ಬಳಸಲಾಗಿದೆ. ಕಾಗದದ ಪ್ರತಿಯನ್ನು =ಕಾ.ಪ್ರ ಎಂದು ಓಲೆಗರಿ ಪ್ರತಿಯನ್ನು=ಓ.ಪ್ರ ಎಂದೂ, ತಾಳೆಗರಿ ಪ್ರತಿಯನ್ನು= ತಾ.ಪ್ರ ಎಂದೂ ಉಲ್ಲೇಖಿಸಲಾಗಿದೆ. ಉದಾಹರಣೆಗೆ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಯಲ್ಲಿ ಈ ರೀತಿ ಬಳಸಿರುವುದನ್ನು ಗಮನಿಸಬಹುದು. ಎಂದರೆ ಸಂಕೇತಗಳಲ್ಲಿ ಏಕರೂಪತೆ ಇಲ್ಲ ಎನ್ನಬಹುದು. ಕನ್ನಡ ಸಂಶೋಧನಾ ಸಂಸ್ಥೆಯ ಹಸ್ತಪ್ರತಿ ಸೂಚಿಯಲ್ಲಿ ತಾಡೋಲೆ, ಕಾಗದಪ್ರತಿ ಎಂದೇ ಬಳಸಲಾಗಿದೆ. ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಗಳಲ್ಲಿ ಗ್ರಂಥದ ಸಾಂಕೇತಿಕಾರಕದ ಹಿಂದೆ ಕೆ=ಓಲೆಪ್ರತಿ, ಕೆ.ಎ=ದೊಡ್ಡ ಅಳತೆಯ ಕಾಗದದ ಪ್ರತಿ, ಕೆ.ಬಿ=ಚಿಕ್ಕ ಅಳತೆಯ ಕಾಗದದ ಪ್ರತಿ ಎಂಬ ಸೂಚನೆಯನ್ನು ಬಳಸಲಾಗಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಸೂಚಿಯಲ್ಲಿ 'ಕೆ' ಎಂಬ ಅಕ್ಷರವನ್ನು ಕೊಟ್ಟು ನಂತರ ಕಟ್ಟಿನ ಸಂಖ್ಯೆಯನ್ನು (ಕೆ.೮೭/೩) ಕೊಡಲಾಗಿದೆ. ಇದರ ಅರ್ಥ ಕನ್ನಡ ಹಸ್ತಪ್ರತಿ ಎಂಬುದಾಗಿದೆ. ಬಿ.ಎಂ.ಶ್ರೀ ಪ್ರತಿಷ್ಠಾನ ಸೂಚಿಯಲ್ಲಿ 'ಓ' ಅಕ್ಷರವನ್ನು ಕೊಟ್ಟು ಅನಂತರ ಕನ್ನಡದಲ್ಲಿ ಸಂಖ್ಯೆಯನ್ನು ಕೊಡಲಾಗಿದೆ. (ನಂ. ಓ/೩೦) ಇದರರ್ಥ ಓಲೆ ಪ್ರತಿ ಎಂಬುದಾಗಿದೆ.

೪. **ಹಸ್ತಪ್ರತಿ ಸಂಖ್ಯೆ** : ಇದು ಗ್ರಂಥದ ಸಾಂಕೇತಾಂಕ. ಒಂದೇ ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚಿನ ಕೃತಿಗಳಿದ್ದಾಗ ಆ ಗ್ರಂಥ ಕಟ್ಟಿನಲ್ಲಿ ಎಷ್ಟನೆಯದು ಎಂಬುದನ್ನೂ ಇಲ್ಲಿ ಸೂಚಿಸಲಾಗುತ್ತದೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಓ./೧೯/೪ ಎಂದು ಸೂಚಿಸಿದ್ದರೆ ಬೆಂಗಳೂರು ವಿಶ್ವವಿದ್ಯಾಲಯ ಕೆ.೪೦/೬ ಎಂದು ಸೂಚಿಸಿದೆ. ಕರ್ನಾಟಕ ವಿಶ್ವವಿದ್ಯಾನಿಲಯ ಸೂಚಿಯಲ್ಲಿ ತಾಪ್ರ: ೫೦೫/೫ ಎಂದೂ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸೂಚಿಯಲ್ಲಿ ಕಾ.ಪ್ರ೮೮೪.೨ ಎಂದೂ ಸೂಚಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಸೂಚಿಯಲ್ಲಿ ಕೆ.೭೫/೯ ಎಂದು ಸೂಚಿಸಿರುವುದನ್ನು ಗಮನಿಸಬಹುದು. ಸಾಮಾನ್ಯವಾಗಿ ಎಲ್ಲಾ ಹಸ್ತಪ್ರತಿಸೂಚಿಗಳಲ್ಲೂ ಕನ್ನಡದಲ್ಲೇ ಅಂಕಿಗಳನ್ನು ಕೊಡಲಾಗಿದೆ. ಆದರೆ ಕನ್ನಡ ಸಂಶೋಧನ ಸಂಸ್ಥೆಯು (ಕೆ.ಆರ್.ಐ) 'ಅಂಕ' ಎಂಬ ವಿಭಾಗದಲ್ಲಿ ಆಂಗ್ಲ ಅಂಕಿಗಳನ್ನು ಬಳಸಲಾಗಿದ್ದರೆ, ಬೆಂಗಳೂರು ವಿಶ್ವವಿದ್ಯಾಲಯವೂ ಆಂಗ್ಲ ಅಂಕಿಗಳನ್ನೇ ಬಳಸಿರುವುದನ್ನು ಗಮನಿಸಬಹುದು.

೫. **ಹಸ್ತಪ್ರತಿಯ ಅಳತೆ/ಆಕಾರ** : ಇದು ತಾಳೆಗರಿಯ ಬಾಹ್ಯಸ್ವರೂಪದ ವಿವರಗಳನ್ನು ಒಳಗೊಂಡಿರುತ್ತದೆ. ತಾಳೆಗರಿಗಳು ಅಥವಾ ಓಲೆ ಪ್ರತಿಗಳು ಎಷ್ಟಿವೆ ಮತ್ತು ಓಲೆಪ್ರತಿಯ ಉದ್ದ,

ಅಗಲಗಳನ್ನು ತಿಳಿಸುತ್ತವೆ. ಒಂದು ಪುಟದಲ್ಲಿ ಎಷ್ಟು ಸಾಲುಗಳಿವೆ, ಒಂದು ಸಾಲಿನಲ್ಲಿ ಎಷ್ಟು ಅಕ್ಷರಗಳಿವೆ ಎಂಬ ಅಂಶಗಳ ಬಗ್ಗೆ ಇಲ್ಲಿ ಬೆಳಕು ಚೆಲ್ಲಲಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಯಲ್ಲಿ ಈ ೪ ಅಂಶಗಳನ್ನು ವಿವರವಾಗಿ ಕೊಡಲಾಗಿದೆ. ಕೆ.ಆರ್.ಐ ಸೂಚಿಯಲ್ಲಿ ತಾಳೆಗರಿಗಳ ಉದ್ದ, ಅಗಲದ ಅಳತೆಗಳನ್ನಷ್ಟೇ ಕಾಣುತ್ತೇವೆ. ಆದರೆ. ಕೆ.ಆರ್.ಐನ 'ವಿವರ' ಎಂಬ ಶೀರ್ಷಿಕೆಯಲ್ಲಿ ಉಳಿದ ಅಂಶಗಳಿವೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸೂಚಿಯಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಯಲ್ಲಿ, ಉದ್ದ-ಅಳತೆ ಸಾಲುಗಳ ಸಂಖ್ಯೆ ಸಾಲುಗಳಲ್ಲಿರುವ ಅಕ್ಷರ ಸಂಖ್ಯೆಗಳು ದಾಖಲಾಗಿದ್ದರೆ ಕರ್ನಾಟಕ ವಿಶ್ವವಿದ್ಯಾನಿಯದ ಸೂಚಿಯಲ್ಲಿ ಪತ್ರದ ಅಳತೆ ಸಾಲುಗಳನ್ನಷ್ಟೇ ದಾಖಲಿಸಲಾಗಿದೆ; ಅಕ್ಷರಗಳ ವಿವರವಿಲ್ಲ. ಕನ್ನಡ ಹಸ್ತಪ್ರತಿ ಸೂಚಿಯಲ್ಲಿ ಉದ್ದ, ಅಗಲ ಪುಟಗಳ ಸಂಖ್ಯೆಯನ್ನು ಸೂಚಿಸಲಾಗಿದೆ.

ತಾಳೆಗರಿಯ ಒಂದು ಪುಟದಲ್ಲಿ ಎಷ್ಟು ಸಾಲುಗಳಿವೆ ಎಷ್ಟು ಅಕ್ಷರಗಳಿವೆ ಒಟ್ಟು ಎಷ್ಟು ತಾಳೆಗರಿಗಳಲ್ಲಿ ಕಾವ್ಯಗಳಿವೆ ಎಂಬ ವಿವರ ಕೊಡುವುದರಿಂದ ಗ್ರಂಥದ ಗಾತ್ರವನ್ನು ಊಹಿಸಬಹುದು. ಮುರಿದ ತಾಳೆಗರಿಗಳಲ್ಲಿ ಎಷ್ಟು ಸಾಲು ಅಥವಾ ಅಕ್ಷರಗಳು ಲುಪ್ತವಾಗಿವೆ ಎಂಬುದನ್ನೂ ಅರಿಯಬಹುದು.

೬. ಕೃತಿಯ ಕರ್ತೃವಿನ ಹೆಸರು : ಅಪೂರ್ಣ ಪ್ರತಿಯನ್ನು ಪ್ರತಿ ಮಾಡಿದಾಗ, ಸ್ತೋತ್ರ, ವಚನ, ಕೀರ್ತನೆ ಇತ್ಯಾದಿಗಳನ್ನು ಪ್ರತಿಮಾಡಿದಾಗ ಸಾಮಾನ್ಯವಾಗಿ ಕರ್ತೃವಿನ ಹೆಸರು ತಿಳಿಯುವುದಿಲ್ಲ. ಹೀಗೆ ಕರ್ತೃ ಗೊತ್ತಿಲ್ಲದಿದ್ದಾಗ? ಪ್ರಶ್ನಾರ್ಥಕ ಚಿಹ್ನೆಗಳನ್ನು ಬಳಸಲಾಗುತ್ತದೆ. ಇದು ಎಲ್ಲಾ ಸೂಚಿಗಳ್ಲಲೂ ಸಾರ್ವತ್ರಿಕವಾದ ಅಂಶ. ಕರ್ತೃ ಗೊತ್ತಿದ್ದಾಗ ಹೆಸರನ್ನು ನಮೂದಿಸಲಾಗುತ್ತದೆ.

೭. ಗ್ರಂಥದ ಪ್ರಭೇದ : ಕರ್ನಾಟಕ ವಿಶ್ವವಿದ್ಯಾಲಯ ಸೂಚಿಯಲ್ಲಿ ಸಾಹಿತ್ಯ ಪ್ರಕಾರ ಎಂದು ಗುರುತಿಸಿ ಮೂರನೇ ಸಾಲಿನ ಬಲಭಾಗದಲ್ಲಿ ನಮೂದಿಸಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸೂಚಿಯಲ್ಲಿ ಕೃತಿಯ ಪ್ರಕಾರ ಎಂದು ಕರೆಯಲಾಗಿದೆ. ಕೆ.ಆರ್.ಐ ಸೂಚಿಯಲ್ಲಿ 'ಶೈಲಿ' ಎಂಬ ಭಾಗದಲ್ಲಿ ಈ ವಿಚಾರವನ್ನು ಉಲ್ಲೇಖಿಸಲಾಗಿದೆ. ಹೀಗೆ ಸಾಹಿತ್ಯಪ್ರಕಾರ, ಶೈಲಿ, ಪ್ರಭೇದ ಎಂಬ ಹೆಸರುಗಳನ್ನು ಈ ಭಾಗಕ್ಕೆ ಸೂಚಿಸಲಾಗಿದೆ. ಪ್ರತಿಯಲ್ಲಿರುವುದು ಚಂಪು, ಶ್ಲೋಕ, ಮಂತ್ರ, ವೃತ್ತ, ಕಂದ, ರಗಳೆ, ಷಟ್ಪದಿ, ಮುಂತಾದ ಪ್ರಕಾರಗಳಲ್ಲಿ ಯಾವುದು ಎಂಬುದನ್ನು ಇಲ್ಲಿ ದಾಖಲಿಸಲಾಗುತ್ತದೆ.

೮. ಕರ್ತೃವಿನ ಕಾಲ : ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಸೂಚಿಯಲ್ಲಿ ಕರ್ತೃವಿನ ಹೆಸರಿನ ಜೊತೆಯಲ್ಲೇ ಕಾಲವನ್ನು ಸೂಚಿಸಲಾಗಿದೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಸೂಚಿಯಲ್ಲಿ ಗ್ರಂಥವನ್ನು ಪ್ರತಿಕಾರರು ಪ್ರತಿ ಮಾಡಿದ ಕಾಲವನ್ನು ಸೂಚಿಸಲಾಗಿದೆ. ಆದರೆ ಗ್ರಂಥದ ಕರ್ತೃವಿನ ಕಾಲವನ್ನು ಕೊಟ್ಟಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದ ಸೂಚಿಯಲ್ಲಿ ಎಲ್ಲ ಕಡೆಗೂ ಆಂಗ್ಲ ಅಂಕಿಗಳನ್ನೇ ಬಳಸಿರುವುದನ್ನು ಕಾಣಬಹುದು. ಕರ್ತೃವಿನ ಕಾಲ ಗೊತ್ತಿಲ್ಲದಿದ್ದಾಗ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಿರುವುದು ಸಾಮಾನ್ಯ ಸಂಗತಿಯಾಗಿದೆ.

೯. ಆರಂಭ ಭಾಗ: ಅಂತ್ಯಭಾಗ : ಆದಿ ಎಂಬ ಭಾಗದಲ್ಲಿ ಆಯಾ ಕೃತಿಯ ಪ್ರಾರಂಭದ ಸ್ವಲ್ಪ ಪಾಠವನ್ನು ಅಥವ ಸಾಲುಗಳನ್ನು ಉಲ್ಲೇಖಿಸಲಾಗುತ್ತದೆ. 'ಅಂತ್ಯ' ಎಂಬ ಭಾಗದಲ್ಲಿ ಆಯಾಕೃತಿಯ ಅಂತ್ಯದ ಪಾಠವನ್ನು ಉಲ್ಲೇಖಿಸಲಾಗುತ್ತದೆ. ಈ ಎರಡೂ ಭಾಗಗಳಲ್ಲಿ ಪಾಠ ಲುಪ್ತವಾಗಿದ್ದರೆ XXXX ಈ ಸಂಕೇತವನ್ನೂ, ಮುಂದುವರೆದ ಪಾಠಕ್ಕೆ.... ಈ ಗುರುತನ್ನು ಹಾಕುವ ಪದ್ಧತಿ ಮೈಸೂರು ವಿಶ್ವವಿದ್ಯಾನಿಲಯ ಸೂಚಿಗಳಲ್ಲಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಸೂಚಿಗಳಲ್ಲಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸೂಚಿಗಳಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯದ ಸೂಚಿಗಳಲ್ಲಿ ಕಾಣುತ್ತೇವೆ. ಕೆ.ಆರ್.ಐನ ಹಸ್ತಪ್ರತಿ ಸೂಚಿಯಲ್ಲಿ ಆದಿ ಮತ್ತು ಅಂತ್ಯ ಭಾಗದಲ್ಲಿ ಸುದೀರ್ಘವಾದ ಪಾಠ ವಿವರ ನೀಡಿರುವುದನ್ನು ಕಾಣಬಹುದು.

ಆದಿ ಮತ್ತು ಅಂತ್ಯಭಾಗಗಳು ಹಸ್ತಪ್ರತಿ ಸೂಚಿಗಳಲ್ಲಿ ಅತಿ ಮುಖ್ಯವಾದ ಭಾಗಗಳು. ಮೂಲಕೃತಿಯಲ್ಲಿನ ಶೈಲಿ-ಭಾಷೆಯಲ್ಲಿ ಹಾಗೆಯೇ ಕೊಡುವುದರಿಂದ ಕೃತಿಯ ಕಾಲ, ಕೃತಿಕಾರನ ಭಾಷಾಶೈಲಿ, ಲಿಪಿಕಾರರ ದೋಷ. ಮುಂತಾದ ಅಂಶಗಳು ತಿಳಿದುಬರುತ್ತವೆ. ಅಷ್ಟೇ ಅಲ್ಲದೆ ಕೃತಿಕಾರರ-ಲಿಪಿಕಾರರ ಸಂಗತಿಗಳು ತಿಳಿಯುತ್ತವೆ.

೧೦. ವಿಷಯ : ಬೆಂಗಳೂರು, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳ ಸೂಚಿಗಳಲ್ಲಿ ಮತ್ತು ಬಿ.ಎಂ.ಶ್ರೀ ಪ್ರತಿಷ್ಠಾನದ ಸೂಚಿಗಳಲ್ಲಿ ವಿಷಯವನ್ನು ಅತ್ಯಂತ ಸಂಕ್ಷಿಪ್ತವಾಗಿ ಒಂದೆರಡು ಪದಗಳಲ್ಲಿ ಇಲ್ಲವೇ ಒಂದೆರಡು ವಾಕ್ಯಗಳಲ್ಲಿ ಹೇಳಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಸೂಚಿಯಲ್ಲಿ ಕೃತಿಯ ವಸ್ತು ಎಂಬ ಶೀರ್ಷಿಕೆಯಲ್ಲಿ ಅತಿ ಸಂಕ್ಷಿಪ್ತವಾಗಿ ಹೇಳಲಾಗಿದೆ. ಕೆಲವು ಕಡೆ ಶೀರ್ಷಿಕೆಯೇ ವಿಷಯವನ್ನು ತಿಳಿಸಿಬಿಡುತ್ತದೆ. ಆದರೂ ಅದರ ಬಗ್ಗೆ ಒಂದು ಮಾತನ್ನು ಹೇಳಲಾಗಿದೆ. ಉದಾಹರಣೆಗೆ: ಹಂಪಿ ವಿಶ್ವವಿದ್ಯಾನಿಲಯದ ಸೂಚಿ ಕ್ರಮಸಂಖ್ಯೆ: ೪೯೧ರಲ್ಲಿ 'ಶಿವಗೀತೆ' ಶಿವಸ್ತುತಿ ಮಾಡಲಾಗಿದೆ ಎಂದು ಹೇಳಲಾಗಿದೆ. ಕನ್ನಡ ಸಂಶೋಧನ ಸಂಸ್ಥೆಯ ಸೂಚಿಯಲ್ಲಿ ವಿಷಯ ಎಂಬ ಭಾಗದಲ್ಲಿ ಅತಿವಿಸ್ತಾರವಾಗಿ ವರ್ಣಿಸಿರುವುದನ್ನು ಕಾಣಬಹುದು. ಕೇವಲ ಶೀರ್ಷಿಕೆ ರೂಪದಲ್ಲಿ ವಿಷಯ ಸೂಚಿಸುವ ಬದಲು ಒಂದೆರಡು ವಾಕ್ಯಗಳಲ್ಲಾದರೂ ಸ್ವಲ್ಪ ವಿವರಗಳನ್ನು ನೀಡುವುದು ಇಲ್ಲದಿದ್ದಲ್ಲಿ ಗ್ರಂಥದ ವಿಷಯ, ಸ್ವರೂಪ ಅರಿವಾಗುವುದು ಕಷ್ಟವಾಗುತ್ತದೆ.

೧೧. ವಿವರ ಅಥವಾ ವಿಶೇಷ : ಕೆಲವು ಹಸ್ತಪ್ರತಿ ಸೂಚಿಗಳಲ್ಲಿ ವಿವರ ಎಂಬ ಭಾಗವನ್ನೂ ಮತ್ತೆ ಕೆಲವು ಸೂಚಿಗಳಲ್ಲಿ ವಿಶೇಷ ಎಂಬ ಹೆಸರಿನಲ್ಲಿ ನಮೂದಿಸಿರುವುದನ್ನು ಕಾಣಬಹುದು. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸೂಚಿಯಲ್ಲಿ ವಿಶೇಷ ವಿವರಣೆ ಎಂದು ಉಲ್ಲೇಖಿತವಾಗಿದೆ. ಕನ್ನಡ ವಿಶ್ವವಿದ್ಯಾಲಯದ ಸೂಚಿಯಲ್ಲಿ ಹೆಚ್ಚಾಗಿ 'ಸಮಗ್ರ-ಅಸಮಗ್ರ' ಎಂಬುದನ್ನಷ್ಟೇ ಹೇಳಿ ಮುಗಿಸಲಾಗಿದೆ. ಕೆ.ಆರ್.ಐನ ಸೂಚಿಯಲ್ಲಿ Remarks ಎಂಬ ಭಾಗದಲ್ಲಿ ಇಂಗ್ಲೀಷ್‌ನಲ್ಲಿ ವಿವರವನ್ನು ಉಲ್ಲೇಖಿಸಲಾಗಿದೆ. ಉಳಿದ ಹಸ್ತಪ್ರತಿ ಸೂಚಿಗಳಲ್ಲಿ ಸ್ವಲ್ಪ ವಿವರವಾಗಿ ವಿವರಣೆ ಮತ್ತು ವಿಶೇಷಗಳನ್ನು ನೀಡಲಾಗಿದೆ.

ಈ ಭಾಗದಲ್ಲಿ ಲಿಪಿ, ಶಕಟರೇಫದ ಬಳಕೆ, ಸಮಗ್ರ-ಅಸಮಗ್ರ ಕೃತಿಗಳ ವಿವರಣೆ, ಪ್ರತಿಕಾರರ ವಿವರ ಇತ್ಯಾದಿ ಅಂಶಗಳನ್ನೂ ಆಯಾ ಕಟ್ಟಿನಲ್ಲಿರುವ ಇತರ ಕೃತಿಗಳು. ಕೃತಿಯ ವಿಶೇಷಗಳು ಮುಂತಾದ ವಿಶೇಷ ಅಂಶಗಳನ್ನು ನಮೂದಿಸಲಾಗಿರುತ್ತದೆ.

ಹಂಪಿ ಕನ್ನಡ ವಿಶ್ವವಿದ್ಯಾನಿಯದ ಸೂಚಿಗಳಲ್ಲಿ 'ಈ ಕಟ್ಟಿನಲ್ಲಿರುವ ಕೃತಿಗಳು' ಎಂಬ ಪ್ರತ್ಯೇಕ ಅಂಶವನ್ನು ಒಳಗೊಂಡು ಅಲ್ಲಿ ಕಟ್ಟಿನಲ್ಲಿರುವ ಇತರ ಕೃತಿಗಳನ್ನು ಉಲ್ಲೇಖಿಸಲಾಗಿದೆ. ಕರ್ನಾಟಕ ವಿಶ್ವದ್ಯಾನಿಲಯದ ಸೂಚಿಯಲ್ಲಿ ದಪ್ಪವಾದ ಕಪ್ಪು ಚುಕ್ಕೆಯ ಮುಂದೆ "ಈ ಕಟ್ಟಿನಲ್ಲಿರುವ ಇತರ ಕೃತಿಗಳಿಗಾಗಿ ನೋಡಿ" ಎಂಬುದಾಗಿ ನಮೂದಿಸಲಾಗಿದೆ. ಈ ಬಗೆಯ ಉಲ್ಲೇಖ ವಿಭಾಗವನ್ನು ಉಳಿದ ಸೂಚಿಗಳಲ್ಲಿ ಕಾಣಲಾರೆವು.

ಇತರೆ ವಿವರಗಳು

ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳಲ್ಲಿ ಇಲ್ಲದ ಇತರೆ ಸಂಸ್ಥೆಗಳಲ್ಲಿ ಉಲ್ಲೇಖಗೊಂಡಿರುವ ಕೆಲವು ಅಂಶಗಳನ್ನು ಈ ಕೆಳಗಿನಂತೆ ನೋಡಬಹುದು.

ಹಸ್ತಪ್ರತಿ ದೊರೆತ ಸ್ಥಳ

ಗ್ರಂಥ ಭಂಡಾರಕ್ಕೆ ಹಸ್ತಪ್ರತಿ ದೊರೆತ ಸ್ಥಳವನ್ನು, ನೀಡಿದ ವ್ಯಕ್ತಿ ವಿವರಗಳನ್ನು ಪ್ರತಿಗ್ರಂಥದ ವಿವರಣೆಯಲ್ಲೂ ನಮೂದಿಸಬೇಕಾದುದು ಅಗತ್ಯವಾಗಿದೆ. ಹೀಗೆ ಗ್ರಂಥ ದೊರೆತ ಸ್ಥಳದ ವಿವರ ಸಿಕ್ಕಾಗ ಕಾವ್ಯದ ಭಾಷೆ, ಕವಿಯ ವಿವರಗಳು ಮೊದಲಾದ ಸಂಗತಿಗಳನ್ನು ತಿಳಿಯುವುದು ಸುಲಭವಾಗುತ್ತದೆ. ಕನ್ನಡ ಅಧ್ಯಯನ ಪೀಠ ಮತ್ತು ಕೆ.ಆರ್.ಐ ನ ಪ್ರತಿಗಳಲ್ಲಿ ಪ್ರತಿದೊರೆತ ಸ್ಥಳವನ್ನು ನಮೂದಿಸಿದೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಸೂಚಿಯಲ್ಲಿ ಸ್ಥಳದ ಬಗ್ಗೆ ಸ್ವಲ್ಪಮಟ್ಟಿನ ಮಾಹಿತಿಯನ್ನು ನಮೂದಿಸಿದೆ. ಊರು, ಊರಿನಲ್ಲಿನ ಸ್ಥಳ ಎರಡನ್ನು ಅಲ್ಲಿ ಹೇಳಲಾಗಿದೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸೂಚಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಯಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳಲ್ಲಿ ಪ್ರತಿದೊರೆತ ಸ್ಥಳಗಳ ಬಗ್ಗೆ ಉಲ್ಲೇಖಗಳಿಲ್ಲ.

ಪ್ರತಿ ಮಾಡಿದವರ ವಿವರ

ಕನ್ನಡ ಸಂಶೋಧನ ಸಂಸ್ಥೆಯ ಸೂಚಿಯಲ್ಲಿ ಈ ಅಂಶ ಇರುವುದನ್ನು ಗಮನಿಸಬಹುದು. ಪ್ರತಿಮಾಡಿದವರ ವಿವರ ಸಿಕ್ಕಾಗ ಅಗತ್ಯವಾಗಿ ನಮೂದಿಸುವುದು ಉತ್ತಮ.

ಸಂದರ್ಭ

ಕೆ.ಆರ್.ಐ ಹಸ್ತಪ್ರತಿ ಸೂಚಿಯಲ್ಲಿ ಈ ವಿಭಾಗವಿದೆ. ಆಯಾ ಉಲ್ಲೇಖಿತ ಹಸ್ತಪ್ರತಿ ಪ್ರಸ್ತಾಪ ಕವಿಚರಿತೆಯಲ್ಲಿ ಇರುವುದರ ಬಗ್ಗೆ ಸಂದರ್ಭ ಎಂಬ ಭಾಗ ಮಾಹಿತಿ ಕೊಡುತ್ತದೆ. ಆರ್.ನರಸಿಂಹಾಚಾರ್ಯರ ಕರ್ನಾಟಕ ಕವಿಚರಿತೆ ಹಸ್ತಪ್ರತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿ ಬರೆದ ಒಂದು ಅಧಿಕೃತ ವಿಶಿಷ್ಟ ಸಾಹಿತ್ಯ ಚರಿತ್ರೆಯ ಗ್ರಂಥ ಎಲ್ಲ ಹಸ್ತಪ್ರತಿ ಸೂಚಿಗಳಿಗೂ ಆಕರವಾಗಿ ಬಳಸಬಹುದಾದ ವಿಶಿಷ್ಟ ಗ್ರಂಥ. ಹಾಗಾಗಿ ಉಳಿದ ಸೂಚಿ ತಯಾರಕರೂ ಈ ಅಂಶವನ್ನು ಸೂಚಿಸುವುದು. ಇದರಿಂದ ಕವಿಚರಿತ್ರೆಕಾರರಿಗೆ ದೊರಕದ; ಈಚೆಗೆ ದೊರೆತ ಗ್ರಂಥಗಳ ಮಾಹಿತಿ ಸಿಗುವಂತಾಗುತ್ತದೆ. ಹಸ್ತಪ್ರತಿ ಸೂಚಿಕಾರರು ಬಹುತೇಕ ಕವಿಚರಿತ್ರೆಕಾರರ ಕಾಲವನ್ನೇ ಕೃತಿಯ ಅಥವಾ ಕರ್ತೃವಿನ ಕಾಲ ನಿರೂಪಿಸಲು ಅನುಸರಿಸುತ್ತಾರೆ ಎಂಬುದು ಗಮನಾರ್ಹ ಸಂಗತಿ ಆಗಿದೆ. ಈ ಸಂದರ್ಭದಲ್ಲಿ ಎಸ್.ಶಿವಣ್ಣನವರ ಕನ್ನಡ ಕವಿಚರಿತ್ರೆಯ ಅನುಕ್ತ ಕೃತಿ ಸೂಚಿಯನ್ನು ಗಮನಿಸುವುದು ಅಗತ್ಯ.

ಅಧ್ಯಾಯ – ೬

ಸಮಾರೋಪ

ಕನ್ನಡದಲ್ಲಿ ಹಸ್ತಪ್ರತಿಯುಗ ಮುಗಿದು ಅಚ್ಚಿನ ಯುಗ ಪ್ರಾರಂಭವಾದುದು ೧೯ನೇ ಶತಮಾನದಲ್ಲಿ. ಅಲ್ಲಿಯವರೆಗೆ ಎಲ್ಲ ಗ್ರಂಥಗಳೂ ಲಿಖಿತರೂಪದಲ್ಲಿ ತಾಳೆಗರಿ ಅಥವಾ ಕೋರಿಕಾಗದಗಳಲ್ಲಿ ರಚಿತವಾಗಿರುವುದನ್ನು ಕಾಣಬಹುದು. ಅಚ್ಚಿನಯುಗ ಪ್ರಾರಂಭವಾದ ಮೇಲೆ ತಾಳೆಗರಿಗಳಲ್ಲಿ ಅಥವಾ ಕಾಗದದ ಮೇಲೆ ಲಿಖಿಸಿದ್ದ ಗ್ರಂಥಗಳನ್ನು ಅಚ್ಚು ಮಾಡುವ ಪರಿಪಾಠ ಪ್ರಾರಂಭವಾಯಿತು. ಇದು ಗ್ರಂಥ ಸಂಪಾದನ ಶಾಸ್ತ್ರಕ್ಕೆ ನಾಂದಿಯಾಯಿತು. ಅಂತೆಯೇ ಹಸ್ತಪ್ರತಿಗಳ ಸಂಗ್ರಹಣಕಾರ್ಯ ಪ್ರಾರಂಭವಾಯಿತು. ಈ ಕಾರ್ಯ ವ್ಯಕ್ತಿಗತವಾಗಿ ಹಾಗೂ ಸಾಂಸ್ಥಿಕವಾಗಿ ನಡೆಯಿತು. ಹೀಗೆ ಸಂಗ್ರಹವಾದ ಹಸ್ತಪ್ರತಿಗಳ ಗ್ರಂಥಭಂಡಾರಗಳು ನಾಡಿನ ಹಲವೆಡೆ ಪ್ರಾರಂಭವಾದವು. ಈ ಹಸ್ತಪ್ರತಿಗಳನ್ನು ಸಂಶೋಧಿಸಿ ಪ್ರಕಟನೆಗೆ ಸಿದ್ಧಪಡಿಸುವ ವಿಧಾನ ಒಂದು ಶಾಸ್ತ್ರವಾಗಿ ಪರಿಣಮಿಸಿತು. ಇದೇ ಗ್ರಂಥಸಂಪಾದನ ಶಾಸ್ತ್ರ ಈ ಶಾಸ್ತ್ರವನ್ನೇ ಕುರಿತು ಮೊದಲ ಬಾರಿಗೆ ಡಿ.ಎಲ್.ಎನ್. ಅವರು ಕನ್ನಡದಲ್ಲಿ ಗ್ರಂಥ ಸಂಪಾದನ ಶಾಸ್ತ್ರ ರಚಿಸಿದರು. ಅನಂತರ ಗ್ರಂಥ ಭಂಡಾರಗಳಲ್ಲಿ ಶೇಖರವಾದ ಹಸ್ತಪ್ರತಿಗಳ ಸೂಚೀ ತಯಾರಿಕೆ ಪ್ರಾರಂಭವಾಯಿತು. ಕಾಲ ಕ್ರಮೇಣ ಹತ್ತಾರು ಭಂಡಾರಗಳ ಹತ್ತಾರು ಸೂಚಿಗಳು ಪೂರ್ಣವಾಗಿ ಇಲ್ಲವೇ ಅಪೂರ್ಣವಾಗಿ ಪ್ರಕಟವಾದವು. ಈಗಲೂ ಹೊಸ ಸೂಚಿಗಳು ಪ್ರಕಟವಾಗುತ್ತಲಿವೆ. ಹೊಸ ಸೂಚಿಗಳು ರಚಿತವಾಗುತ್ತಿವೆ.

ಹಸ್ತಪ್ರತಿಗಳು ಅಚ್ಚಾದಾಗ ಅವುಗಳನ್ನು ವಿಮರ್ಶಿಸುವ ವಿಮರ್ಶಾ ಪದ್ಧತಿ ಪ್ರಾರಂಭವಾದಂತೆ ಹಸ್ತಪ್ರತಿಗಳನ್ನೇ ನೇರವಾಗಿ ಪರಿಶೀಲಿಸುವ ಹಸ್ತಪ್ರತಿ ಶಾಸ್ತ್ರವೆಂಬ ಹೊಸದೊಂದು ಶಾಸ್ತ್ರ ಗ್ರಂಥ ಸಂಪಾದನ ಶಾಸ್ತ್ರದ ಅಂಗವಾಗಿ ಪ್ರಾರಂಭವಾಯಿತು. ಹೀಗೆ ಗ್ರಂಥ ಸಂಪಾದನೆ, ಗ್ರಂಥಸೂಚಿಗಳು, ಹಸ್ತಪ್ರತಿಶಾಸ್ತ್ರ ಎಂಬ ಮೂರು ಜ್ಞಾನ ಶಾಖೆಗಳು ಇಂದು ವಿಕಸನಗೊಂಡಿವೆ. ಈಗಾಗಲೆ ಗ್ರಂಥ ಸಂಪಾದನ ಶಾಸ್ತ್ರದ ಬಗೆಗೆ. ಡಿ.ಎಲ್.ಎನ್. ಅವರ ಗ್ರಂಥದ ನಂತರ ಎಂ.ಎಂ. ಕಲ್ಬುರ್ಗಿ, ಜಾಗೀರ್‌ದಾರ್ ಭಾನುಮತಿ ಟಿ.ವಿ.ವೆಂಕಟಾಚಲಶಾಸ್ತ್ರಿ ಮೊದಲಾದ ವಿದ್ವಾಂಸರು ಶಾಸ್ತ್ರ ವಿವೇಚನೆ ಮಾಡಿ ಗ್ರಂಥಗಳನ್ನು ರಚಿಸಿದ್ದಾರೆ. ಹಸ್ತಪ್ರತಿಶಾಸ್ತ್ರದ ಬಗ್ಗೆ ಕಲ್ಬುರ್ಗಿ, ನಾ. ಗೀತಾಚಾರ್ಯ ಮೊದಲಾದವರು ಗ್ರಂಥಗಳನ್ನು ರಚಿಸಿ ವಿಮರ್ಶಿಸಿದ್ದಾರೆ. ಈ ಬಗ್ಗೆ ಮೊದಲ ಬಾರಿಗೆ ಮಣಿಹ ಗ್ರಂಥದ ಮೂಲಕ ಎಂ.ವಿ.ಸೀ ಅವರು ಹಸ್ತಪ್ರತಿಶಾಸ್ತ್ರಕ್ಕೆ ನಾಂದಿ ಹಾಡಿದ್ದಾರೆ. ಬಿ.ಕೆ. ಹಿರೇಮಠ ಅವರು ಮಹಾಪ್ರಬಂಧವನ್ನೇ ರಚಿಸಿದ್ದಾರೆ. ಆದರೆ ಸಾಕಷ್ಟು ಹಸ್ತಪ್ರತಿಸೂಚಿಗಳ ಗ್ರಂಥಗಳು ಪ್ರಕಟವಾಗಿದ್ದರೂ ಆ ಬಗೆಗೆ ವಿಸ್ತೃತ ಅಧ್ಯಯನ ಇದುವರೆಗೆ ನಡೆದಿಲ್ಲ ಎಂದರೆ ತಪ್ಪಾಗದು. ಸೂಚೀ ರಚನೆಗಳು ಸಾಕಷ್ಟಿವೆ. ಸೂಚೀ ಅಧ್ಯಯನ ಒಂದಾದರೂ ಇಲ್ಲ ಎಂಬ ಮಾತು ಈಗ ಸುಳ್ಳಾಗಿದೆ.

ಈಚೆಗೆ ಹಲವಾರು ಲೇಖನಗಳು ಗ್ರಂಥಗಳು ಬಂದಿವೆ. ಆ ಪೈಕಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿ ಸೂಚಿಗಳು – ಒಂದು ಅಧ್ಯಯನ – ಸಂಶೋಧಕರು ರವೀಂದ್ರನಾಗಪ್ಪ ಬೋಳೆಗಾಂವ ಅವರ ಸಂಪ್ರಬಂಧ ಮೊದಲನೇ ಕೃತಿ. ಪ್ರಸಕ್ತ ಅಧ್ಯಯನ ಎರಡನೆಯದಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಿತ ಹಸ್ತಪ್ರತಿ ಸೂಚಿಗಳ ಬಗ್ಗೆ ಮೊಟ್ಟ ಮೊದಲನೆಯ ಅಧ್ಯಯನವಾಗಿದೆ.

ಈ ಅಧ್ಯಯನದಲ್ಲಿ ಹಸ್ತಪ್ರತಿ ಸೂಚಿಗಳ ಇತಿಹಾಸ, ಹಸ್ತಪ್ರತಿ ಭಂಡಾರಗಳ ವಿವರ, ಹಸ್ತಪ್ರತಿ ಶಾಸ್ತ್ರದ ಉಗಮ, ಹಸ್ತಪ್ರತಿ ಸೂಚಿಗಳ ರಚನಾ ವಿಧಾನ ಮೊದಲಾದ ಸಂಗತಿಗಳನ್ನು ಸಮಗ್ರವಾಗಿ ಸಮೀಕ್ಷಿಸಲಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿಗಳ ೯ ಸಂಪುಟಗಳ ಸಮಗ್ರ ಸಮೀಕ್ಷೆ ಮಾಡಿ ಅದರ ಗುಣಾವಗುಣಗಳನ್ನು ಒರೆಹಚ್ಚಲಾಗಿದೆ. ಇತರ ವಿಶ್ವವಿದ್ಯಾಲಯಗಳ ಹಾಗೂ ಖಾಸಗಿ ಸಂಸ್ಥೆ ವ್ಯಕ್ತಿಗಳ ಹಸ್ತಪ್ರತಿ ಸೂಚಿಗಳೊಂದಿಗೆ ತೌಲನಿಕವಾಗಿ ಸಮೀಕ್ಷಿಸಿ ಮೌಲ್ಯಮಾಪನ ಮಾಡಿದೆ ಮೈಸೂರು ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿಗಳ ಇತಿಮಿತಿಗಳನ್ನು ಗುರುತಿಸಲಾಗಿದೆ. ಮೈಸೂರು ವಿಶ್ವವಿದ್ಯಾಲಯ ಹಸ್ತಪ್ರತಿಗಳ ಹಾಗೂ ಮೈಕ್ರೋಫಿಲಂ ಆದ ಸೂಚಿಯನ್ನು ಗಮನಿಸಿ ವಿಶ್ಲೇಷಣೆ ಮಾಡಿದೆ. ಹಸ್ತಪ್ರತಿ ಸೂಚಿ ತಯಾರಿಕರಿಗೆ ಈ ಅಧ್ಯಯನದ ಮೂಲಕ ಸೂಕ್ತ ಅಂಶಗಳನ್ನು ಗಮನಕ್ಕೆ ತರಲಾಗಿದೆ. ಸೂಚಿಗಳ ಅಧ್ಯಯನ ಅಗತ್ಯ ಎಂಬಂಶವನ್ನು ಈ ಅಧ್ಯಯನದಲ್ಲಿ ಸಾಬೀತು ಗೊಳಿಸಿದೆ. ವಿಶಿಷ್ಟ ಇತಿಹಾಸ ಹೊಂದಿರುವ ಮೈಸೂರು ವಿಶ್ವವಿದ್ಯಾಲಯವು ತನ್ನ ಹಸ್ತಪ್ರತಿ ಗ್ರಂಥ ಭಂಡಾರದಿಂದ ಲೋಕವಿಖ್ಯಾತಿ ಪಡೆದಿದೆ. ಈ ಬಗ್ಗೆ ಮೊದಲ ಬಾರಿಗೆ ಗಮನವಿತ್ತು ಅದರ ಹಸ್ತಪ್ರತಿ ಸೂಚಿಗಳ ಅಧ್ಯಯನದಿಂದ ಪರಿಷ್ಕೃತ ನೂತನ ಸೂಚಿಗಳನ್ನು ರಚಿಸಲು ಮತ್ತು ಈಗ ಪ್ರಕಟವಾದ ಸೂಚಿಗಳ ಪರಿಷ್ಕಾರಕ್ಕೆ ಮಾರ್ಗಸೂಚಿಯನ್ನು ಈ ಅಧ್ಯಯನ ಸೂಚಿಸಿದೆ. ಹೀಗೆ ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಸೂಚಿಗಳ ಅಧ್ಯಯನದ ಮೂಲಕ ಕನ್ನಡ ಹಸ್ತಪ್ರತಿ ಸೂಚಿಗಳ ಅಧ್ಯಯನಕ್ಕೆ ವಿಶೇಷ ಗಮನ ನೀಡುವಂತೆ ಮಾಡುವಲ್ಲಿ ಈ ಅಧ್ಯಯನ ಯಶಸ್ವಿಯಾಗಿದೆ.

ಅನುಬಂಧಗಳು

ಅನುಬಂಧ – ಒಂದು

ಹಸ್ತಪ್ರತಿಗಳ ಸೂಚಿ

೧) **ಅನಂತರಂಗಾಚಾರ್. ಎನ್ :**

ಮೈಸೂರು ವಿಶ್ವವಿದ್ಯಾಲಯ ಓರಿಯಂಟಲ್ ಸಂಶೋಧನ ಸಂಸ್ಥೆಯಲ್ಲಿ ಸಂಗ್ರಹಿಸಿದ ಕೈ ಬರಹದ ಪುಸ್ತಕ
ಮೈಸೂರು ಗೌರ್ನಮೆಂಟ್ ಪ್ರೆಸ್
೧೯೫೫.

೨) **ಉಮಾಪತಿ ಶಾಸ್ತ್ರಿ ಗೌ.ಮ :**

ಕಲ್ಲಚ್ಚಿನ ಹೊತ್ತಿಗೆಗಳ ವಿವರಣಾತ್ಮಕ ಸೂಚಿ
ಮಂಜುನಾಥ ಶಿಕ್ಷಣ ಪ್ರತಿಷ್ಠಾನ ಬೆಂಗಳೂರು
೨೦೦೪.

೩) **ಕನ್ನಯನ್.ವ್ಹಿ :**

ಮದ್ರಾಸ್ ಗೌರ್ನಮೆಂಟ್ ಮ್ಯೂಜಿಯಂ ಸೂಚಿ
ಮದ್ರಾಸ್ ವಿಶ್ವವಿದ್ಯಾಲಯ ಮದ್ರಾಸ್
೨೦೦೦.

೪) **ಕಲಬುರ್ಗಿ ಎಂ.ಎಂ :**

ಕೊಲ್ಹಾಪುರದ ಶ್ರೀಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿಯ ಕನ್ನಡ ಹಸ್ತಪ್ರತಿ ಸೂಚಿ
ಕನ್ನಡ ಅಧ್ಯಯನ ಪೀಠ ಧಾರವಾಡ
೧೯೮೮.

೫) **ಕೆಳದಿ ಗುಂಡಾ ಜೋಯಿಸ್ :**

೧) ಜಗದ್ಗುರು ಮೂರು ಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ.
ಜಗದ್ಗುರು ಮೂರು ಸಾವಿರ ಮಠ – ಹುಬ್ಬಳ್ಳಿ
೧೯೮೯.

೨) ಬಿ.ಎಂ.ಶ್ರೀ. ಪ್ರತಿಷ್ಠಾನ ಕನ್ನಡ ಹಸ್ತಪ್ರತಿಗಳ ಸೂಚಿ
ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು
೧೯೮೭.

೬) ಗುರು ಎ.ಆರ್ :

೧) ಆಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳು
ಬಿ.ಎಂ.ಶ್ರೀ ಪ್ರತಿಷ್ಠಾನ - ಬೆಂಗಳೂರು
೨೦೦೨.

೨) ಆಲಿಗೆ ಮೇಲಿನ ಮನೆಯ ಹಸ್ತಪ್ರತಿ ಸೂಚಿಗಳು
ಬಿ.ಎಂ.ಶ್ರೀ ಪ್ರತಿಷ್ಠಾನ - ಬೆಂಗಳೂರು
೨೦೦೭.

೭) ಬಡಿಗೇರ ವೀರೇಶ :

೧) ಕನ್ನಡ ವಿಶ್ವವಿದ್ಯಾಲಯ ಕನ್ನಡ ಹಸ್ತಪ್ರತಿ ಸೂಚಿ ಸಂಪುಟ – ೦೨
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ - ಹಂಪಿ
೨೦೦೦.

೨) ಕನ್ನಡ ವಿಶ್ವವಿದ್ಯಾಲಯ ಕನ್ನಡ ಹಸ್ತಪ್ರತಿ ಸೂಚಿ ಸಂಪುಟ – ೦೪
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ - ಹಂಪಿ
೨೦೦೭.

೮) ಶಿವಣ್ಣ ಎಸ್ :

೧) ವೀರಶೈವ ಅಪ್ರಕಟಿತ ಗ್ರಂಥಸೂಚಿ.
ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಗದಗ
೧೯೮೨.

೨) ಕನ್ನಡ ವರ್ಣನಾತ್ಮಕ ಹಸ್ತಪ್ರತಿಗಳ ಸೂಚಿ
ಬೆಂಗಳೂರು ವಿಶ್ವವಿದ್ಯಾಲಯ – ಬೆಂಗಳೂರು
೧೯೮೨.

೩) ಶ್ರೀ ಜಗದ್ಗುರು ತೋಂಟದಾರ್ಯ ಮಠದ ಕನ್ನಡ ಹಸ್ತಪ್ರತಿ ಸೂಚಿ.
ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ – ಗದಗ
೧೯೮೫.

೯) ಸಣ್ಣಯ್ಯ ಬಿ.ಎಸ್ :

೧) ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ಕನ್ನಡ ಹಸ್ತಪ್ರತಿ ಸೂಚಿ ಸಂಪುಟ–೦೧.
ಮೈಸೂರು ವಿಶ್ವವಿದ್ಯಾಲಯ - ಮೈಸೂರು
೧೯೬೨.

೨) ಕನ್ನಡ ಹಸ್ತಪ್ರತಿಗಳ ಮೈಕ್ರೋಫಿಲಂ ಹಸ್ತಪ್ರತಿ ಸೂಚಿ

ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು
೧೯೮೮.

೩) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ
ಶ್ರುತಕೇವಲಿ ಎಜ್ಯುಕೇಶನ್ ಟ್ರಸ್ಟ್ ಶ್ರವಣ ಬೆಳಗೊಳ
೨೦೦೩.

೧೦) ಹಳ್ಳಿಕೇರಿ ಎಫ್.ಟಿ :

೧) ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ. ಸಂಪುಟ – ೦೧
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ
೨೦೦೦.

೨) ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ, ಸಂಪುಟ – ೦೨
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ
೨೦೦೬.

೩) ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ, ಸಂಪುಟ – ೦೩
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ
೨೦೦೬.

ಅನುಬಂಧ ಎರಡು

ಅಚ್ಚಾದ ಪ್ರತಿಗಳ ಸೂಚಿ

೧) ಅಸುಂಡಿ ಅಶೋಕ :

ಕನ್ನಡದಲ್ಲಿ ಸಂದರ್ಭಗ್ರಂಥಗಳು ಸಮೀಕ್ಷೆ ಮತ್ತು ವಿವರಣಾತ್ಮಕ ಸೂಚಿ
ಎನ್.ಎ. ಪ್ರಕಾಶನ – ಬೆಂಗಳೂರು
೧೯೯೨.

೨) ಕೃಷ್ಣಮೂರ್ತಿ ಪಿ.ವ್ಹಿ :

ಲೋಚನ ಲೇಖನ ಸೂಚಿ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು
೧೯೯೯.

೩) ನಾಯಕ. ಹಾ.ಮಾ :

ಕನ್ನಡ ಜಾನಪದ ಗ್ರಂಥ ಸೂಚಿ
ಮೈಸೂರು ವಿಶ್ವವಿದ್ಯಾಲಯ – ಮೈಸೂರು
೧೯೮೪.

೪) ಪಾಟೀಲ ಸ.ಕೃ :

ಕನ್ನಡ ಅಭಿನಂದನ ಗ್ರಂಥಗಳ ಲೇಖನ ಸೂಚಿ
ಮೈಸೂರು ವಿಶ್ವವಿದ್ಯಾಲಯ ಗ್ರಂಥಾಲಯ – ಮೈಸೂರು
೧೯೭೨.

೫) ವೆಂಕಟರಮಣಯ್ಯ ಟಿ.ವಿ :

ಕನ್ನಡ ಲೇಖನ ಭಾಷಾ ಸೂಚಿ
ಬೆಂಗಳೂರು ವಿಶ್ವವಿದ್ಯಾಲಯ – ಬೆಂಗಳೂರು
೧೯೭೩.

೬) ಶಿವಣ್ಣ. ಎಸ್ :

ಕನ್ನಡ ಸಾಹಿತ್ಯ ಕನ್ನಡ ಸಾಹಿತ್ಯ ಚರಿತ್ರೆ ಅಭ್ಯಾಸ ಸೂಚಿ
ಶ್ರೀ ಮುಗಳಿ ಉಷಾ ಸಾಹಿತ್ಯ ಮಾಲೆ – ಮೈಸೂರು
೧೯೭೮.

೭) ಸಂಪಾದಕ ಸಮಿತಿ :

ಕನ್ನಡ ಗ್ರಂಥ ಸೂಚಿ ಸಂಪುಟ – ೦೧
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ – ಮೈಸೂರು
೧೯೭೧.

೮) ಸುಬ್ರಹ್ಮಣ್ಯಂ ಟಿ.ವಿ. :

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಗಳ ಲೇಖನ ಸೂಚಿ
ಮೈಸೂರು ವಿಶ್ವವಿದ್ಯಾಲಯ – ಮೈಸೂರು
೧೯೭೧.

ಅನುಬಂಧ – ಮೂರು

ಆಕರ ಗ್ರಂಥಗಳ ಸೂಚಿ

೧) ಕತ್ರೆ ಎಂ.ಎಸ್ :

ಭಾರತೀಯ ಗ್ರಂಥ ಸಂಪಾದನೆ
ವಸಂತ ಪ್ರಕಾಶನ – ಬೆಂಗಳೂರು
೨೦೦೩.

೨) ಕಲ್ಬುರ್ಗಿ ಎಂ.ಎಂ :

೧) ಕನ್ನಡ ಗ್ರಂಥ ಸಂಪಾದನ ಶಾಸ್ತ್ರ
ಸಮಾಜ ಪುಸ್ತಕಾಲಯ – ಧಾರವಾಡ
೧೯೭೨.

೨) ಕನ್ನಡ ಹಸ್ತಪ್ರತಿ ಶಾಸ್ತ್ರ
ಸ್ನೇಹ ಪ್ರಕಾಶನ – ಬೆಂಗಳೂರು
೧೯೯೩.

೩) ಗೀತಾಚಾರ್ಯ ನಾ :

ಹಸ್ತಪ್ರತಿಶಾಸ್ತ್ರ ವಿವೇಚನೆ
ಸ್ನೇಹನಿಧಿ ಬಳಗ – ಬೆಂಗಳೂರು
೨೦೦೦.

೪) ಜಾಗೀರ್‌ದಾರ್ ಸೀತಾರಾಮು :

ಕನ್ನಡ ಗ್ರಂಥ ಸಂಪಾದನೆ ಶಾಸ್ತ್ರ
ಕರ್ನಾಟಕ ಸಂಘ – ರಂಗಪುರ, ಗುಲ್ಬರ್ಗ
೧೯೭೮.

೫) ದೇವೀರಪ್ಪ. ಹೆಚ್ :

ಕನ್ನಡ ಹಸ್ತಪ್ರತಿಗಳ ಇತಿಹಾಸ
ಕನ್ನಡ ಸಾಹಿತ್ಯ ಪರಿಷತ್ – ಬೆಂಗಳೂರು
೧೯೭೭.

೬) ನರಸಿಂಹಾಚಾರ್ ಡಿ.ಎಲ್ :
ಕನ್ನಡ ಗ್ರಂಥ ಸಂಪಾದನೆ
ಡಿ.ವಿಕೆ. ಪ್ರಕಾಶನ - ಮೈಸೂರು
೨೦೦೩.

೭) ಬಡಿಗೇರ ವೀರೇಶ :
ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು.
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೨೦೦೩.

೮) ಭಾನುಮತಿ ವೈ.ಸಿ :
ಭಾರತೀಯ ಗ್ರಂಥ ಸಂಪಾದನೆ
ರಾಜ ಪ್ರಕಾಶನ - ಮೈಸೂರು
೨೦೦೩.

೯) ಭಾರತಿ ಹೆಚ್.ಎಲ್.ಎನ್ :
ಪ್ರಾಚೀನ ಹಸ್ತಪ್ರತಿಗಳು
ಮೈಸೂರು ವಿಶ್ವವಿದ್ಯಾಲಯ - ಮೈಸೂರು
೧೯೭೧.

೧೦) ಸಣ್ಣಯ್ಯ ಬಿ.ಎಸ್ :
ಹಸ್ತಪ್ರತಿಶಾಸ್ತ್ರ ಪರಿಚಯ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ - ಬೆಂಗಳೂರು
೧೯೯೨.

೧೧) ಸೀತಾರಾಮಯ್ಯ ಎಂ.ವಿ :
೧) ಹಸ್ತಪ್ರತಿಶಾಸ್ತ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ - ಬೆಂಗಳೂರು
೧೯೮೧.
೨) ಮಣಿಹ. ಫ.ಗು. ಹಳಕಟ್ಟಿ ಜನ್ಮಶತಮಾನೋತ್ಸವ ಸಂಪುಟ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ - ಬೆಂಗಳೂರು
೧೯೮೨.

೧೨) ಸುಬ್ರಹ್ಮಣ್ಯಂ ಟಿ.ವ್ಹಿ :

ಗ್ರಂಥ ಸೂಚಿಯ ರಚನೆ

ಮೈಸೂರು ವಿಶ್ವವಿದ್ಯಾಲಯ – ಮೈಸೂರು

೧೯೭೦.

೧೩) ಹಳ್ಳಿಕೇರಿ ಎಫ್.ಟಿ :

೧) ಹಸ್ತಪ್ರತಿ ವ್ಯಾಸಂಗ –೨

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ

೨೦೦೨.

೨) ಕಂಠ ಪತ್ರ

ವಿಕಾಸ ಪ್ರಕಾಶನ – ಹೊಸಪೇಟೆ ಬಳ್ಳಾರಿ.

೧೪) ಹಿರೇಮಠ ಬಿ.ಕೆ :

ಕನ್ನಡ ಹಸ್ತಪ್ರತಿಗಳು:ಒಂದು ಅಧ್ಯಯನ

ವೀರಶೈವ ಅಧ್ಯಯನ ವೇದಿಕೆ ಕಸಬಾ ಜಂಬಬಿ

೧೯೯೨.

ಅನುಬಂಧ – ನಾಲ್ಕು

ಆಕರ ಲೇಖನಗಳ ಸೂಚಿ

೧) ಅಶ್ವತ್ಥನಾರಾಯಣ ಜಿ.

ಲೇ : ಹಸ್ತಪ್ರತಿಗಳ ಸಂಗ್ರಹ ಕಾರ್ಯದಲ್ಲಿ ನನ್ನ ಅನುಭವ
ಗ್ರಂ : ಮಣಿಹ
ಇ : ೧೯೮೨
ಸಂ : ಎಂ.ವೀ. ಸೀತಾರಾಮಯ್ಯ, ಆರ್, ಶೇಷಶಾಸ್ತ್ರಿ
ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೨) ಉಮಾಪತಿ ಶಾಸ್ತ್ರಿ. ಗೌ.ಮ :

ಲೇ : ಹಸ್ತಪ್ರತಿ ಭಂಡಾರಗಳ ಸ್ವರೂಪ
ಗ್ರಂ : ಹಸ್ತಪ್ರತಿ ವ್ಯಾಸಂಗ –೨
ಇ : ೨೦೦೨
ಸಂ : ಡಾ॥ ಎಫ್.ಟಿ. ಹಳ್ಳಿಕೇರಿ, ಡಾ॥ ಕೆ. ರವೀಂದ್ರನಾಥ್
ಪ್ರ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ

೩) ಕಲಬುರ್ಗಿ ಎಂ.ಎಂ :

೧. ಲೇ : ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರ
ಗ್ರಂ : ಹಸ್ತಪ್ರತಿ ವ್ಯಾಸಂಗ –೨
ಇ : ೨೦೦೨
ಸಂ : ಡಾ॥ ಎಫ್.ಟಿ. ಹಳ್ಳಿಕೇರಿ ಡಾ॥ ಕೆ. ರವೀಂದ್ರನಾಥ್
ಪ್ರ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ

೨. ಲೇ : ಹಸ್ತಪ್ರತಿಶಾಸ್ತ್ರ: ಅದರ ವಿವಿಧ ಮುಖಗಳು
ಗ್ರಂ : ಹಸ್ತಪ್ರತಿ ಶಾಸ್ತ್ರ
ಇ : ೧೯೮೩
ಸಂ : ಎಂ.ವಿ. ಸೀತಾರಾಮಯ್ಯ, ಡಾ॥ ಎಂ. ಚಿದಾನಂದಮೂರ್ತಿ
ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೪) ಗೀತಾಚಾರ್ಯ. ನಾ :

ಲೇ : ಕನ್ನಡ ಹಸ್ತಪ್ರತಿಗಳ ಸಂಪತ್ತು

ಗ್ರಂ : ಡಾ॥ ಸೂರ್ಯನಾಥ ಕಾಮತ್ ಅಭಿನಂದನ ಗ್ರಂಥ ' ಸೂರ್ಯಕೀರ್ತಿ'

ಇ : ೨೦೦೦

ಪ್ರ : ಬೆಂಗಳೂರು

೫) ಗೀತಾಚಾರ್ಯ ನಾ :

ಲೇ : ಉಪೇಕ್ಷಿತ ಹಸ್ತಪ್ರತಿಗಳು

ಗ್ರಂ : ಫ.ಗು. ಹಳಕಟ್ಟಿ ಸಂಸ್ಕರಣ ಸಂಪುಟ – ಮಣಿಹ

ಇ : ೧೯೮೨

ಸಂ : ಎಂ.ಎ. ಸೀತಾರಾಮಯ್ಯ ಆರ್. ಶೇಷಶಾಸ್ತ್ರಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೬) ಗೀತಾಚಾರ್ಯ.ನಾ:

ಲೇ : ಹಸ್ತಪ್ರತಿ ವಿಜ್ಞಾನ:ಒಂದು ಚಿಂತನೆ

ಗ್ರಂ : ಡಾ॥ ಎಂ. ಚಿದಾನಂದಮೂರ್ತಿ ಅಭಿನಂದನಾ ಗ್ರಂಥ ' ಸಂಶೋಧನೆ'

ಇ : ೧೯೯೧

ಪ್ರ : ಬೆಂಗಳೂರು

೭) ದೇವೀರಪ್ಪ ಹೆಚ್ :

ಲೇ : ಕನ್ನಡ ಹಸ್ತಪ್ರತಿಗಳ ಚರಿತ್ರೆ

ಗ್ರಂ : ಹಸ್ತಪ್ರತಿಶಾಸ್ತ್ರ

ಇ : ೧೯೮೩

ಸಂ : ಎಂ.ವಿ. ಸೀತಾರಾಮಯ್ಯ, ಎಂ. ಚಿದಾನಂದಮೂರ್ತಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೮) ಬಸವಾರಾಧ್ಯ ಎನ್ :

ಲೇ : ಹಸ್ತಪ್ರತಿಗಳ ಓದುವಿಕೆ

ಗ್ರಂ : ಹಸ್ತಪ್ರತಿಶಾಸ್ತ್ರ

ಇ : ೧೯೮೩

ಸಂ : ಎಂ.ವಿ. ಸೀತಾರಾಮಯ್ಯ, ಎಂ. ಚಿದಾನಂದ ಮೂರ್ತಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೯) ಮಂಜುನಾಥ ಸಿ.ಯು :

ಲೇ : ಹಸ್ತಪ್ರತಿ ಸಂಗ್ರಹಕಾರ್ಯ ಮತ್ತು ಗ್ರಂಥ ಸಂಪಾದನೆಗೆ ಬಿ. ಶಿವಮೂರ್ತಿ ಶಾಸ್ತ್ರಿಗಳ ಕೊಡುಗೆ.

ಗ್ರಂ : ಮಣಿಹ

ಇ : ೧೯೮೨

ಸಂ : ಎಂ.ವಿ.ಸೀ. ಆರ್. ಶೇಷಶಾಸ್ತ್ರೀ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೧೦) ಮಹೀಶವಾಡಿ ಬಿ.ಬಿ :

ಲೇ : ಹಸ್ತಪ್ರತಿಗಳ ಸಂಗ್ರಹಕಾರ್ಯದಲ್ಲಿ ನನ್ನ ಅನುಭವ

ಗ್ರಂ : ಮಣಿಹ ಫ.ಗು. ಹಳಕಟ್ಟಿ ಸಂಸ್ಮರಣ ಗ್ರಂಥ

ಇ : ೧೯೮೨

ಸಂ : ಎಂ.ವೀ. ಸೀತಾರಾಮಯ್ಯ, ಆರ್. ಶೇಷಶಾಸ್ತ್ರೀ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೧೧) ರಘುನಾಥಭಟ್ ಎಚ್.ಆರ್ :

ಲೇ : ಪ್ರಾಚೀನತಮ ಕನ್ನಡ ಹಸ್ತಪ್ರತಿಯ ಲಿಪಿ ವಿನ್ಯಾಸ

ಗ್ರಂ : ಮಣಿಹ

ಇ : ೧೯೮೨

ಸಂ : ಎಂ.ವಿ. ಸೀತಾರಾಮಯ್ಯ, ಆರ್. ಶೇಷಶಾಸ್ತ್ರಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೧೨) ರವೀಂದ್ರನಾಥ್ ಕೆ

ಲೇ : ಮಠಮಾನ್ಯಗಳ ಹಸ್ತಪ್ರತಿ ಭಂಡಾರಗಳು

ಗ್ರಂ : ಹಸ್ತಪ್ರತಿ ವ್ಯಾಸಂಗ – ೨

ಇ : ೨೦೦೨

ಸಂ : ಡಾ|| ಎಫ್.ಟಿ. ಹಳ್ಳಿಕೇರಿ, ಡಾ|| ಕೆ. ರವೀಂದ್ರನಾಥ

ಪ್ರ : ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗ – ಹಂಪಿ

೧೩) ವೆಂಕಟಾರಾಯಾಚಾರ್ಯ ಕೆ :

ಲೇ : ಹಸ್ತಪ್ರತಿಗಳ ಸಂಗ್ರಹಕಾರ್ಯದಲ್ಲಿ ನನ್ನ ಅನುಭವ

ಗ್ರಂ : ಮಣಿಹ

ಇ : ೧೯೮೨

ಸಂ : ಎಂ.ವಿ. ಸೀತಾರಾಮಯ್ಯ, ಆರ್. ಶೇಷಶಾಸ್ತ್ರಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೧೪) ವಿಘ್ನರಾಜ ಎಸ್. ಆರ್ :

ಲೇ : ಕನ್ನಡ ಹಸ್ತಪ್ರತಿಗಳ ಭಂಡಾರಗಳ ನವೀಕರಣ

ಗ್ರಂ : ಹಸ್ತಪ್ರತಿ ವ್ಯಾಸಂಗ – ೨

ಇ : ೨೦೦೨

ಸಂ : ಎಫ್.ಟಿ. ಹಳ್ಳಿಕೇರಿ, ಡಾ|| ಕೆ. ರವೀಂದ್ರನಾಥ್

ಪ್ರ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ

೧೫) ವೀರೇಶ ಬಡಿಗೇರ :

ಲೇ : ಸಾರ್ವಜನಿಕ ಹಸ್ತಪ್ರತಿ ಭಂಡಾರಗಳು

ಗ್ರಂ : ಹಸ್ತಪ್ರತಿ ವ್ಯಾಸಂಗ – ೨

ಇ : ೨೦೦೨

ಸಂ : ಎಫ್.ಟಿ. ಹಳ್ಳೀಕೇರಿ, ಕೆ. ರವೀಂದ್ರನಾಥ್

ಪ್ರ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ

೧೬) ಶಿವಣ್ಣ ಎಸ್ :

೧. ಲೇ : ಕನ್ನಡ ಹಸ್ತಪ್ರತಿ ಸೂಚಿಗಳು ಹಾಗೂ ಹಸ್ತಪ್ರತಿಗಳ ಸಮಗ್ರ ಗ್ರಂಥಸೂಚಿ ನಿರ್ಮಾಣ

ಗ್ರಂ : ಹಸ್ತಪ್ರತಿಶಾಸ್ತ್ರ

ಇ : ೧೯೮೩

ಸಂ : ಎಂ.ವಿ. ಸೀತಾರಾಮಯ್ಯ, ಡಾ|| ಎಂ. ಚಿದಾನಂದಮೂರ್ತಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೨. ಲೇ : ಕನ್ನಡ ಹಸ್ತಪ್ರತಿ ಸೂಚಿಗಳು

ಗ್ರಂ : ಮಣಿಹ ಫ.ಗು. ಹಳಕಟ್ಟಿ ಸ್ಮರಣ ಸಂಪುಟ

ಇ : ೧೯೮೨

ಸಂ : ಎಂ.ವಿ. ಸೀತಾರಾಮಯ್ಯ, ಆರ್. ಶೇಷಶಾಸ್ತ್ರೀ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ – ಬೆಂಗಳೂರು

೧೭) ಸಣ್ಣಯ್ಯ ಬಿ.ಎಸ್ :

೧. ಲೇ : ಕೇಂದ್ರಹಸ್ತಪ್ರತಿ ಭಂಡಾರದ ಅವಶ್ಯಕತೆ

ಗ್ರಂ : ಹಸ್ತಪ್ರತಿ ವ್ಯಾಸಂಗ – ೨

ಇ : ೨೦೦೨

ಸಂ : ಡಾ|| ಎಫ್.ಟಿ. ಹಳ್ಳಿಕೇರಿ, ಡಾ|| ಕೆ. ರವೀಂದ್ರನಾಥ್

ಪ್ರ : ಪ್ರಸಾರಾಂಗ ಹಂಪಿ ವಿಶ್ವವಿದ್ಯಾಲಯ – ಹಂಪಿ

೨. ಲೇ : ಕನ್ನಡ ಹಸ್ತಪ್ರತಿ ಭಂಡಾರಗಳು

ಗ್ರಂ : ಹಸ್ತಪ್ರತಿಶಾಸ್ತ್ರ

ಇ : ೧೯೮೩

ಸಂ : ಎಂ.ವಿ. ಸೀತಾರಾಮಯ್ಯ, ಡಾ|| ಎಂ.ಚಿದಾನಂದ ಮೂರ್ತಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

೧೮) ಸೀತಾರಾಮಯ್ಯ ಎಂ.ವಿ :

೧. ಲೇ : ಹಸ್ತಪ್ರತಿಶಾಸ್ತ್ರದ ಸಮಸ್ಯೆಗಳು.

ಗ್ರಂ : ಹಸ್ತಪ್ರತಿಶಾಸ್ತ್ರ

ಇ : ೧೯೮೩

ಸಂ : ಎಂ.ವಿ. ಸೀತಾರಾಮಯ್ಯ, ಎಂ. ಚಿದಾನಂದಮೂರ್ತಿ

ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

೨. ಲೇ : ಹಸ್ತಪ್ರತಿಗಳ ಸಂಗ್ರಹಣಕಾರ್ಯ ಮತ್ತು ಸಂಸ್ಕರಣ

ಗ್ರಂ : ಮಣಿಹಃಫ.ಗು. ಹಳಕಟ್ಟಿ ಸಂಸ್ಮರಣ ಸಂಪುಟ

ಇ : ೧೯೮೨

ಸಂ : ಎಂ.ವಿ. ಸೀತಾರಾಮಯ್ಯ, ಡಾ|| ಆರ್. ಶೇಷಶಾಸ್ತ್ರಿ

ಪ್ರ : ಬಿ.ಎಂ.ಶ್ರೀ ಪ್ರತಿಷ್ಠಾನ

೧೯) ಹಳ್ಳಿಕೇರಿ ಎಫ್.ಟಿ :

ಲೇ : ಕನ್ನಡ ಹಸ್ತಪ್ರತಿಗಳು : ಹೊರನಾಡು ಮತ್ತು ವಿದೇಶಗಳಲ್ಲಿ

ಗ್ರಂ : ಹಸ್ತಪ್ರತಿ ವ್ಯಾಸಂಗ – ೨

ಇ : ೨೦೦೨

ಸಂ : ಡಾ॥ ಎಫ್.ಟಿ. ಹಳ್ಳೀಕೇರಿ, ಡಾ॥ ಕೆ. ರವೀಂದ್ರನಾಥ್

ಪ್ರ : ಪ್ರಸಾರಾಂಗ ಹಂಪಿ ಕನ್ನಡ ವಿಶ್ವವಿದ್ಯಾಲಯ – ಹಂಪಿ

೨೦) ಹೆಗ್ಡೆ ಎಂ.ಜಿ :

ಲೇ : ಹಸ್ತಪ್ರತಿಗಳು ಮೆಕೆಂಜಿ ಸಂಗ್ರಹ

ಗ್ರಂ : ಮಣಿಹ ಫ.ಗು. ಹಳಕಟಿ, ಸಂಸ್ಮರಣ ಸಂಪುಟ

ಇ : ೧೯೮೨

ಸಂ : ಎಂ.ವಿ. ಸೀತಾರಾಮಯ್ಯ, ಆರ್. ಶೇಷಶಾಸ್ತ್ರಿ

ಪ್ರ : ಬಿ.ಎಂ.ಶ್ರೀ ಪ್ರತಿಷ್ಠಾನ – ಬೆಂಗಳೂರು

ಅನುಬಂಧ – ಐದು

ಪತ್ರಿಕಾ ಲೇಖನ ಸೂಚಿ

೧. ಲೇಖಕರು: ನಾ. ಗೀತಾಚಾರ್ಯ

ಲೇಖನ : ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರ

ಪತ್ರಿಕೆ : ಕರ್ನಾಟಕ ಲೋಚನ

ಸಂಪುಟ : ೧೩

ಪ್ರಕಟಣೆ : ಬಿ.ಎಂ.ಶ್ರೀ ಪ್ರತಿಷ್ಠಾನ – ಬೆಂಗಳೂರು

೨) ಲೇಖಕರು : ದೇವಿರಪ್ಪ ಹೆಚ್

ಲೇಖನ: ಕನ್ನಡ ಹಸ್ತಪ್ರತಿಗಳು

ಪತ್ರಿಕೆ : ಸಾಹಿತ್ಯ ಪರಿಷತ್ ಪತ್ರಿಕೆ

ಪ್ರಕಟಣೆ : ಕನ್ನಡ ಸಾಹಿತ್ಯ ಪರಿಷತ್ – ಬೆಂಗಳೂರು

ಇಸವಿ : ೧೯೭೭

೩) ಲೇಖನ : ಸಂಶೋಧನೆ – ಒಂದು ಅಧ್ಯಯನ

ಲೇಖಕರು : ಪ್ರೊ. ಎಲ್. ಎಸ್. ಶೇಷಗಿರಿರಾವ್

ಪತ್ರಿಕೆ : ಕರ್ನಾಟಕ ಲೋಚನ

ಸಂಪುಟ : ೨೧

ಸಂಚಿಕೆ : ೧ , ೨

ಪ್ರಕಟಣೆ : ಬಿ. ಎಂ. ಶ್ರೀ ಪ್ರತಿಷ್ಠಾನ – ಬೆಂಗಳೂರು

ಇಸವಿ : ೨೦೦೭

ಅನುಬಂಧ – ಆರು

ಕನ್ನಡ ಹಸ್ತಪ್ರತಿ ಗ್ರಂಥ ಭಂಡಾರಗಳು

೧) ಅಕಾಡೆಮಿ ಸಂಸ್ಕೃತ ರೀಸರ್ಚ್ ಮೇಲುಕೋಟೆ
೨) ಇಂಗ್ಲೆಂಡಿನಲ್ಲಿರುವ ಹಸ್ತಪ್ರತಿಗಳು
೩) ಉಸ್ಮಾನಿಯಾ ವಿಶ್ವವಿದ್ಯಾಲಯ ಹೈದರಾಬಾದ
೪) ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ. ಮೈಸೂರು
೫) ಕನ್ನಡ ಅಧ್ಯಯನ ಪೀಠ ಕ.ವಿ.ವಿ. ಧಾರವಾಡ
೬) ಕನ್ನಡ ಅಧ್ಯಯನ ಕೇಂದ್ರ ಬೆ.ವಿ.ವಿ. ಬೆಂಗಳೂರು
೭) ಕನ್ನಡ ವಿಭಾಗ ಗು.ವಿ.ವಿ. ಗುಲ್ಬರ್ಗ
೮) ಕನ್ನಡ ವಿಭಾಗ ಮಂ.ವಿ.ವಿ. ಮಂಗಳೂರು
೯) ಕನ್ನಡ ಸಂಶೋಧನ ಸಂಸ್ಥೆ ಧಾರವಾಡ
೧೦) ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
೧೧) ಕೆಂಚಗಲ್ಲು ಬಿದಿರೆ ದೊಡ್ಡಮಠ.
೧೨) ಕೆಳದಿ ವಸ್ತು ಸಂಗ್ರಹಾಲಯ
೧೩) ಗವರ್ನಮೆಂಟ್ ಓರಿಯಂಟಲ್ ಮ್ಯಾನ್ಸುಸ್ಕ್ರಿಪ್ಟ್ಸ್ ಲೈಬ್ರರಿ ಮದ್ರಾಸು
೧೪) ಗವರ್ನಮೆಂಟ್ ಓರಿಯಂಟಲ್ ರೀಸರ್ಚ್ ಇನ್‌ಸ್ಟ್ಯೂಟ್ ಮೈಸೂರು
೧೫) ತಾತನವರ ಮಠ ಹೇಮಕೂಟ
೧೬) ದೇವಕುಮಾರ ಓರಿಯಂಟಲ್ ಇನ್‌ಸ್ಟಿಟ್ಯೂಟ್ ಅರಾ
೧೭) ಬಾಹುಬಲಿ ಬ್ರಹ್ಮಚರ್ಯಶ್ರಮ ಸನ್ಮತಿ
೧೮) ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು
೧೯) ಮದರಾಸು ಅಡಿಯರ್ ಪುಸ್ತಕಾಲಯ ಮದ್ರಾಸು
೨೦) ಮಂಜುನಾಥೇಶ್ವರ ಸಂಸ್ಕೃತ ಸಂಶೋಧನ ಪ್ರತಿಷ್ಠಾನ ಧರ್ಮಸ್ಥಳ
೨೧) ಶ್ರವಣಬೆಳಗೊಳ ಜೈನಮಠ
೨೨) ಶಿವಯೋಗ ಮಂದಿರ
೨೩) ಸಂಸ್ಕೃತ ಮಹಾಪಾಠಶಾಲೆ ಮೈಸೂರು
೨೪) ಹಾರನಹಳ್ಳಿ ಕೋಡಿಮಠ ಹಾಸನ
೨೫) ಹಾವೇರಿ ಹುಕ್ಕೇರಿ ಮಠ
೨೬) ಹೊಂಬುಜಮಠ ಶಿವಮೊಗ್ಗ
೨೭) ಹೊಸಪೇಟೆಯ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠ ಬಳ್ಳಾರಿ